Sri A. R. PANCHAGAVI.—Sir, I beg to move :

"That the House agrees with the fourth Report of the committee on Private Members' Bills and Resolutions."

Mr. SPEAKER.—The question is :

"That the House agrees with the fourth Report of the committee on Private Members' Bills and Resolutions."

The motion was adopted.

REPORT OF THE JOINT SELECT COMMITTEE ON MYSORE CINEMAS (REGULATION) BILL, 1962.

Sri R. M. PATIL (Minister for Home).—Sir, I beg to present the Report of the Joint Select Committee on the Mysore Cinemas Regulation Bill, 1962.

Mr. SPEAKER.—The report is presented.

NON-OFFICIAL RESOLUTION

Re : Appointment of a Committee to investigate into malpractices, etc., in Government and Semi-Government, Administrative corporate bodies.

Sri B. NANJAPPA (Cubbonpet).—Sir, I beg to move :

"That this Assembly recommends to Government to appoint immediately a suitable committee to investigate into the malpractices, nepotism and corruption prevailing in Government and Semi-Government administrative and corporate bodies and for devising and enforcing measures to combat effectively the same."

Mr. SPEAKER.—Resolution moved :

"That this Assembly recommends to Government to appoint immediately a suitable committee to investigate into the malpractices, nepotism and corruption prevailing in Government and Semi-Government administrative and corporate bodies and for devising and enforcing measures to combat effectively the same."

†ಶ್ರೀ ಬಿ. ನಂಜಪ್ಪ.—ಈಗ ನಮ್ಮ ಸರ್ಕಾರದಲ್ಲಿ ಪ್ರತಿಯೊಂದು ಸ್ಟೇಜಿನಲ್ಲೂ ಕರಪ್‌ಷನ್ ಎನ್ನುವುದು ವಿಪರೀತವಾಗಿದೆ. ಇದರ ವಿಚಾರದಲ್ಲಿ ನಮ್ಮ ಸರ್ಕಾರದವರು ಯಾವ ಯೋಚನೆಯನ್ನೂ ಮಾಡದೇ ಇರುವುದು ವ್ಯಸನಕರವಾಗಿದೆ. ಈಗ ಪ್ರತಿಯೊಂದು ಸ್ಟೇಜಿನಲ್ಲೂ ಒಂದೊಂದು ಪೇಪರು ಒಂದೊಂದು ಕಡೆ ಹೋಗಬೇಕಾದರೆ ಆ ವ್ಯಕ್ತಿ ಅದನ್ನು ಹಿಂಬಾಲಿಸಿಕೊಂಡು ಹೋಗಬೇಕು, ಆ ರೀತಿ ಹೋದರೆ ಆ ಪೇಪರು ಮುಂದಕ್ಕೆ ಹೋಗುವುದೇ ಇಲ್ಲ ಎಲ್ಲಿ ಇತ್ತೋ ಅಲ್ಲೇ ಇರುತ್ತದೆ. ಈ ವಿಚಾ

(ಶ್ರೀ ಬಿ. ಸಂಜಪ್ಪ)

ರದಲ್ಲಿ ಈ ಅಸೆಂಬ್ಲಿಯಲ್ಲಿ ಈಗಾಗಲೇ ನಮ್ಮ ಸ್ನೇಹಿತರು ಬಹಳವಾಗಿ ಅನೇಕ ಸಂದರ್ಭಗಳಲ್ಲಿ ಮಾತನಾಡಿದ್ದಾರೆ, ಪ್ರತಿಯೊಂದು ಈ ಸ್ಫೇಜ್‌ನಲ್ಲೂ ಕರಪ್ಷನ್, ನೆಪಾಟಿಸಂ ಇದೆ. ಆದ್ದರಿಂದ ಇದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಿ ಈ ವಿಚಾರಗಳನ್ನೆಲ್ಲಾ ಸರಿಪಡಿಸಬೇಕೆಂದು ಹೇಳಿ ನಾನು ನನ್ನ ನಿರ್ಣಯವನ್ನು ಈ ದಿವಸ ಈ ಸಭೆಯ ಅವಗಾಹನೆಗಾಗಿ ಮುಂಡಿಸುತ್ತಾ ಇದ್ದೇನೆ.

†ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಸ್ವಾತಂತ್ರ್ಯ ಬಂದ ಮೇಲೆ ಬರತಕ್ಕ ಸರ್ಕಾರ ನಮಗೆ ಸ್ವರ್ಗವನ್ನೇ ಇಲ್ಲಿ ಸೃಷ್ಟಿ ಮಾಡುತ್ತದೆ ಎಂದು ತಿಳಿದುಕೊಂಡಿದ್ದಂಥ ಒಂದು ಭ್ರಮೆ ಇವತ್ತು ಹೊರಟು ಹೋಗಿದೆ. ಈ 15 ವರ್ಷಗಳ ಅನುಭವದಲ್ಲಿ ನಾವು ಯೋಚನೆ ಮಾಡಿ ನೋಡಿದ್ದೇ ಆದರೆ ಹಿಂದೆ ರಾಜರು ಆಳುತ್ತಾ ಇದ್ದ ಕಾಲದಲ್ಲಿ ದೇಶ ಸುಖವಾಗಿತ್ತು, ಇಂತಹ ಲೋಪದೋಷಗಳು ಹೆಚ್ಚಾಗಿ ಕಾಣುತ್ತಾ ಇರಲಿಲ್ಲ ಎಂದು ಹೇಳುವುದಕ್ಕೆ ನನಗೆ ಯಾವ ಸಂಕೋಚವೂ ಆಗುವುದಿಲ್ಲ. ದಿನ ದಿನಕ್ಕೆ ಯೋಜನೆಗಳನ್ನು ಹಾಕಿಕೊಂಡಷ್ಟೂ ಈ ಸ್ವಜನ ಪಕ್ಷ ಪಾತ, ಲಂಚಗುಳಿತನ, ಎಂದರೆ ಒಂದೇ ಒಂದು ಪಂಗಡದಿಂದ ಚುನಾಯಿತರಾದವರು ಈ ದೇಶದ ಆಡಳಿತದಲ್ಲಾಗಲೀ ವ್ಯವಸ್ಥೆಯಲ್ಲಾಗಲೀ ಪ್ರತಿಯೊಂದರಲ್ಲೂ ಪ್ರವೇಶಮಾಡಿ ಆಡಳಿತವನ್ನೇ ಹದಗೆಡಿಸುತ್ತಿದ್ದಾರೆ ಎಂಬ ಈ ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳುತ್ತಾ ಇದ್ದೇನೆ. ನನಗೆ ಬಂದಿರತಕ್ಕ ಅನುಭವದಿಂದ ಈ ಮಾತನ್ನು ನಾನು ಹೇಳಬೇಕಾಗಿದೆ. 'ಪುರಾಣ ಹೇಳಲಿಕ್ಕೆ, ಬದನೇಕಾಯಿ ತಿನ್ನಲಿಕ್ಕೆ' ಎಂದು ಹೇಳಿ ನಮ್ಮಲ್ಲಿ ಒಂದು ಗಾದೆ ಇದೆ, ದೊಡ್ಡ ದೊಡ್ಡ ಮಾತುಗಳನ್ನು ಹೇಳುವುದು, ಜನಗಳಿಂದ ಸತ್ಯಶೀಲರು, ಸತ್ಯಸಂಧರು ಎಂದು ಹೊಗಳಿಸಿಕೊಳ್ಳತಕ್ಕಂಥ ಒಂದು ವ್ಯವಹಾರವನ್ನು ಇಟ್ಟುಕೊಳ್ಳುವುದು, ಕಾರ್ಯಗತ ಮಾಡುವಾಗ ಯಾವುದನ್ನೂ ಮಾಡದೇ ಇರುವುದು ಇದೆಲ್ಲಾ ಏನು ತೋರಿಸುತ್ತದೆ ? ಎಂದರೆ ಅದರಲ್ಲೂ ಕೈಗಾರಿಕೆ, ಪಿ. ಡಬ್ಲ್ಯು.ಡಿ., ವಿದ್ಯಾಭ್ಯಾಸ ಈ ಇಲಾಖೆಗಳಲ್ಲಂತೂ ಲೆಕ್ಕಾಚಾರ ಇಲ್ಲದೇ ಇಂತಹ ಪ್ರಸಂಗಗಳು ನಡೆಯುತ್ತವೆ, ಬೇಕಾದರೆ ಮಾನ್ಯ ಅಧ್ಯಕ್ಷರು ನನಗೆ ಕೆಲವು ಹೆಸರುಗಳನ್ನು ಇಲ್ಲಿ ಹೇಳುವುದಕ್ಕೆ ಅವಕಾಶವನ್ನು ಕೊಡುವುದಾದರೆ ನಾನು ಹೇಳುವುದಕ್ಕೆ ಸಿದ್ಧವಾಗಿದ್ದೇನೆ.

[MR. DEPUTY SPEAKER in the Chair.]

ಈ ಲಂಚ ತೆಗೆದುಕೊಳ್ಳುವುದು ಹಿಂದಿನಕಾಲದಲ್ಲೂ ಇತ್ತಂತೆ. ಆದರೆ ಆಗೆಲ್ಲಾ ಈಗ ಬಂದಿರತಕ್ಕ ಅವರೇಕಾಯಿಯಂಥ ಸೀಜನ್ ಆಗಿದ್ದರೆ, ದೊಡ್ಡವರನ್ನು ನೋಡುವುದಕ್ಕೆ ಹೋಗುವಾಗ ಸ್ವಲ್ಪ ಅವರೇಕಾಯಿ, ಅಥವಾ ಒಂದೆರಡು ನಿಂಬೆಹಣ್ಣು ಇವುಗಳನ್ನು ತೆಗೆದುಕೊಂಡು ಹೋಗಿ ಕೊಡುತ್ತಿದ್ದರಂತೆ. ಹಿಂದೆ ಇಂಥ ನಿದರ್ಶನಗಳಿದ್ದುವು ಎಂದು ಹೇಳುತ್ತಾರೆ. ಈಗಲಾದರೋ ಈ ಲಂಚಕ್ಕೆ ಕೊನೆ ಮೊದಲೆಂಬುದೇ ಇಲ್ಲ. ಈ 5-10-100 ರೂಪಾಯಿಗಳೆಂದರೆ ಈ ಹಣಕ್ಕೆ ಬೆಲೆಯೇ ಇಲ್ಲ. ಒಂದು ಕಛೇರಿಗೆ ಹೋದ ಅರ್ಜಿಗಳನ್ನು ಎಷ್ಟು ದಿವಸ ಇಟ್ಟರೆ ಅಷ್ಟೂ ಅವುಗಳಿಂದ ಜಾಸ್ತಿ ಹಣ ಬರುತ್ತದೆ ಎಂದು ಅರ್ಜಿಗಳನ್ನು ಹಾಗೇ ಇಟ್ಟು ಬಿಡುತ್ತಾರೆ. ಈ ಲಂಚಗುಳಿತನ ಎಂಬುದು ಹೀಗೆ ಸಣ್ಣ ಒಂದು ತಾಲ್ಲೂಕ್ ಕಛೇರಿಯಿಂದ ಹಿಡಿದು ಈಗ ನಾವಿರತಕ್ಕ ಈ ವಿಧಾನಸೌಧದವರೆಗೂ ವ್ಯಾಪಿಸಿಕೊಂಡಿದೆ. ಇದರಲ್ಲಿ ಇನ್ನೂ ಒಂದು ಏನಾಗುತ್ತದೆಂದರೆ : ದೇಶದಲ್ಲಿ ಆಡಳಿತ ಸರಿಯಾಗಿ ನಡೆಯಬೇಕಾಗಿದ್ದರೆ ಅಲ್ಲಿ ಒಂದು ಸುವ್ಯವಸ್ಥಿತವಾದ ಏರ್ಪಾಡಿರಬೇಕು. ಅಲ್ಲಿ ಒಂದು ಸರಿಯಾದ ಸಂಘಟನೆ ಇರಬೇಕು. ಆಡಳಿತ ನಡೆಸತಕ್ಕವರು ಆತ್ಮಸಾಕ್ಷಿಯಾಗಿ ಕೆಲಸಮಾಡಬೇಕು. ಆದರೆ ಅಂಥ ಕಡೆ ಈ ದಿವಸ ಇದು ನಮ್ಮ ಪಕ್ಷ, ಇದು ಬೇರೆಯವರ ಪಕ್ಷ ಎಂಬ ಸ್ವಜನ ಪಕ್ಷಪಾತ ಎಲ್ಲೆಲ್ಲಿಯೂ ತುಂಬಿ ತುಳುಕುತ್ತಿದೆ. ತಮ್ಮ ಪಕ್ಷದವರು ಹೇಳಿದರೆ ಒಂದು ರೀತಿ ಮಾಡಬೇಕು, ಮತ್ತೊಂದು ಪಕ್ಷದವರು ಹೇಳಿದರೆ ಮತ್ತೊಂದು ರೀತಿ ಮಾಡಬೇಕು ಎಂದು ಹೀಗೆಲ್ಲಾ ಮಾಡುತ್ತಿದ್ದಾರೆ. ಇಂಥ ನಿದರ್ಶನಗಳನ್ನು ನಾನು ನೂರಾರು ಕೊಡಬಲ್ಲೆ. ಈಗ ಉದಾಹರಣೆಗೆ ಹೇಳುವುದಾದರೆ : ಹರಿಜನರಿಗೆ, ಅಲ್ಪಸಂಖ್ಯಾತರಿಗೆ ರಕ್ಷಣೆಕೊಡಬೇಕು ಎಂಬುದು ಬಹಳ ಮುಖ್ಯವಾದ ವಿಚಾರ. ಆದರೆ ನಾನೀ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಹಾಗೆ ಇಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗ ಹರಿಜನರನ್ನು ಮುಂದೆತರಬೇಕೆಂದು ಹೇಳುತ್ತಿದ್ದಾರೆ. ಇರಲಿ, ಇದರ ಬಗ್ಗೆ ನಮಗೆ ಎಳ್ಳಷ್ಟೂ ಸಂಕೋಚವಿಲ್ಲ. ಆದರೆ ಅವರಂತೆ ಬಡವರಾಗಿರತಕ್ಕ ಜನಗಳು ಇತರ ಕೋಮುಗಳಲ್ಲೂ ಇದ್ದಾರೆಂಬುದನ್ನು ಇವರು ಮರೆಯಬಾರದು. ಆದರೆ ಈಗ ಅಲ್ಲಿ ಒಬ್ಬ ಡಿ.ಸಿ. ಹರಿಜನರಿದ್ದರೆ, ಅಲ್ಲಿರತಕ್ಕ ಲ್ಯಾಂಡ್ ಅಕ್ವಿಜಿಷನ್ ಆಫೀಸರೂ ಹರಿಜನರೇ, ಅಲ್ಲಿರತಕ್ಕ ಅಸಿಸ್ಟೆಂಟ್ ಕಮೀಷನರ್, ಅಮಲ್ದಾರ, ರೆವಿನ್ಯೂ ಇನ್‌ಸ್ಪೆಕ್ಟರ್ ಇವರೆಲ್ಲರೂ ಹರಿಜನರೇ ಇದ್ದಾರೆ. ಇವರೆಲ್ಲರೂ ಒಟ್ಟಿಗೆ ಸೇರಿ

ಕೊಂಡು ಅಲ್ಲಿರತಕ್ಕ ಹಳೇ ರೆಕಾರ್ಡುಗಳನ್ನೆಲ್ಲಾ ಬದಲಾಯಿಸುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಹೀಗೆ ಇವರು ಹಳೇ ರೆಕಾರ್ಡುಗಳನ್ನೆಲ್ಲಾ ಬದಲಾಯಿಸುವುದಕ್ಕೆ ಹೊರಟಿದ್ದಾರೆ. ಈ ರೀತಿ ರೆಕಾರ್ಡುಗಳನ್ನೇ ಒಂದು ಸ್ವಜನ ಪಕ್ಷಪಾತ ದೃಷ್ಟಿಯಿಂದ ಟ್ಯಾಂಪರ್ ಮಾಡುವುದಕ್ಕೆ ಹೊರಟಿದ್ದಾರೆ. ನಾನೀಗ ಈ ವಿಷಯವನ್ನು ಸ್ವಜನ ಪಕ್ಷಪಾತವಿದೆ ಎಂಬುದನ್ನು ತಿಳಿಸಲು ಹೇಳುತ್ತಿದ್ದೇನೆ.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಅವರು ಯಾವುದೋ ಒಂದು ಜಿಲ್ಲೆಯ ಸಮಾಚಾರ ತೆಗೆದುಕೊಂಡು ಇಡೀ ರಾಜ್ಯದಲ್ಲೆಲ್ಲಾ ಹೀಗೆ ನಡೆಯುತ್ತಿದೆ ಎಂದು ಹೇಳುತ್ತಿರುವುದು ಸರಿಯಲ್ಲ. ಅವರು ದೇಶದಾದ್ಯಂತವೂ ಹೀಗೇ ನಡೆಯುತ್ತಿದೆ ಎಂಬುದಕ್ಕೆ ಸಾಕಷ್ಟು ಅಂಕಿಅಂಶಗಳನ್ನು ಕೊಡದೆ ಈ ರೀತಿ ಹೇಳಬಹುದೇ? ಈ ಹಿಂದೆ ನೂರಾರು ವರ್ಷಗಳಿಂದ ನಡೆಯುತ್ತಿದ್ದುದರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ? ಇದೇ ರೀತಿ ಹಿಂದೆ ನಡೆದಿರತಕ್ಕ ಅಂಕಿಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳಲಿ...

Mr. DEPUTY SPEAKER.—Let the Hon'ble member not bring in officers because they cannot defend themselves here.

Sri G. DUGGAPPA.—On a point of order. The Hon'ble Member should not make any pointed reference when they are not here to defend themselves.

Mr. DEPUTY SPEAKER.—The Hon'ble member should not bring in any officer or anybody who can be known so that there will be allegations. They cannot defend themselves. Let the Hon'ble Member not make allegations against individuals who can be identified.

ಶ್ರೀ ಟಿ. ಎಸ್. ಮಾದಪ್ಪಗೌಡ.—ಅಲ್ಲಿ ಈ ದಿವಸ ಏನು ನಡೆಯುತ್ತಿದೆ ಎಂಬುದನ್ನು ಸಭೆಯ ಗಮನಕ್ಕೆ ತರಲು ಈ ವಿಚಾರವನ್ನು ಹೇಳಬೇಕಾಗಿ ಬಂತು, ಅಷ್ಟೆ. ಆದರೆ ನಾನೀಗ ಆ ಕೋಮಿನಲ್ಲಿರತಕ್ಕ ಬಡವರಿಗೆ ಅನುಕೂಲ ಮಾಡಬೇಡಿ ಎಂದು ಹೇಳುತ್ತಿಲ್ಲ. ಅದೇ ರೀತಿ ಬೇರೆ ಪಕ್ಷ ಪಂಗಡಗಳಲ್ಲೂ ಬಡವರಿರುತ್ತಾರೆಂಬುದನ್ನು ತಾವು ಮರೆಯಬಾರದು ಎಂಬುದನ್ನು ತಿಳಿಸಲು ನಾನೀಗ ಈ ವಿಚಾರವನ್ನು ಹೇಳಬೇಕಾಗಿ ಬಂತು. ಒಂದು ಪಂಗಡಕ್ಕೆ ಅನುಕೂಲ ಮಾಡುವ ದೃಷ್ಟಿಯಿಂದ ಇನ್ನೊಂದು ಪಂಗಡದವರಿಗೆ ಅನ್ಯಾಯ ಮಾಡಬಾರದು ಎಂಬುದಕ್ಕಾಗಿ ನಾನು ಇಷ್ಟೆಲ್ಲವನ್ನೂ ಹೇಳಬೇಕಾಯಿತು. ಹೀಗೆಲ್ಲಾ ಮಾಡಿದರೆ ಇದು ಸ್ವಜನ ಪಕ್ಷಪಾತವಾಗುವುದಿಲ್ಲವೇ ? ಇಂಥ ನಿದರ್ಶನಗಳನ್ನು ನಾನು ಎಷ್ಟು ಹೇಳಲಿ ? ಇವುಗಳೇನು ಒಂದೇ, ಎರಡೇ, ಮೂರೇ, ಈ ರೀತಿ ಪ್ರತಿಯೊಂದು ಇಲಾಖೆಯಲ್ಲೂ ಈ ಭಾವನೆಗಳು ತಾಂಡವನಾಡುತ್ತಿವೆ. ನಾವು ಇಲ್ಲಿ ಒಂದು ಜನಾಂಗವಾಗಿ ಬಾಳಲು ಸಾಧ್ಯವಾಗಲಿ ಎಂದು ಈಗ ಆಂಟಿಕರಪ್‌ಷನ್ ಎಂಬ ಒಂದು ಇಲಾಖೆಯನ್ನು ಬೇರೆ ಸ್ಥಾಪನೆ ಮಾಡಿದ್ದಾರೆ. ಇದು ಒಂದು ಕೇವಲ ಜನಗಳ ಕಣ್ಣೊರೆಸುವ ಕೆಲಸವಷ್ಟೆ ವಿನಾ ಇದರಿಂದ ಏನೇನೂ ಪ್ರಯೋಜನವಾಗುತ್ತಿಲ್ಲ. ನನಗೆ ಅವಕಾಶ ಕೊಡುವುದಾದರೆ ನಾನು ಅನೇಕರ ಹೆಸರುಗಳನ್ನೂ ಕೂಡ ಹೇಳಬಲ್ಲೆ.

ಶ್ರೀ ಜೆ. ನಾರಣಪ್ಪ.—ಮಾನ್ಯ ಸದಸ್ಯರು ಹೆಸರನ್ನು ಹೇಳಬಾರದೆಂದು ಜಾತಿಗಳ ಹೆಸರನ್ನು ಹೇಳುತ್ತಿದ್ದಾರೆ. ಹಾಗೆ ಹೇಳಬಹುದೇ ?

ಉಪಾಧ್ಯಕ್ಷರು.—ಹೇಳಬಹುದು.

ಶ್ರೀ ಟಿ. ಎನ್. ಮಾದಪ್ಪಗೌಡ.—ಈ ಹಿಂದೆ ಅಲ್ಲಿ ಒಬ್ಬ ಪೋಲೀಸ್ ಡಿ. ಎಸ್. ಪಿ. ಇದ್ದರು. ಅವರು ಲಂಚರುಷವತ್ತುಗಳನ್ನು ತೆಗೆದುಕೊಳ್ಳುತ್ತಾರೆಂದು ಈ ಹಿಂದೆ ಇದ್ದ ಗೃಹ ಸಚಿವರಿಗೆ ದೂರನ್ನು ಕೊಟ್ಟು, ಅವರು ಅದನ್ನು ವಿಚಾರಣೆ ನಡೆಸಿದರು. ಅವರ ಮೇಲೆ ಇನ್ನೂ ಹತ್ತಾರು ಕಡೆಗಳಿಂದ ಹೀಗೇ ದೂರುಗಳು ಬಂದು ಅವರು ಸರ್ವೀಸಿನಲ್ಲಿರುವುದಕ್ಕೇ ಅರ್ಹರಲ್ಲ, ಅವರನ್ನು ಕೂಡಲೇ ಕೆಲಸದಿಂದ ತೆಗೆದುಹಾಕಬೇಕೆಂದು ಪುಕಾರುಗಳು ಬಂದಾಗ್ಯೂ, ಆ ಪುಕಾರುಗಳೆಲ್ಲಾ ಸಕಾರಣವಾಗಿದ್ದಾಗ್ಯೂ ಅವರಮೇಲೇನೂ ಆಕ್ಷನ್ ತೆಗೆದುಕೊಳ್ಳಲಿಲ್ಲ, ಅಥವಾ ಅವರಮೇಲೆ ಬಂದ ಪುಕಾರುಗಳು ಸತ್ಯವಾದುವುಗಳಲ್ಲ ಎಂಬದೊಂದೂ ಗೊತ್ತಾಗದಂತೆ ಅದನ್ನು ಹಾಗೇ ಮುಚ್ಚಿಹಾಕಿದರು. ಇಂಥ ನಿದರ್ಶನಗಳನ್ನು, ಸ್ವಜನ ಪಕ್ಷಪಾತದ ಆಪಾದನೆಗಳೂ ಕೈಗಾರಿಕಾ ಇಲಾಖೆಯಲ್ಲೂ ಇಲ್ಲದೆ ಇಲ್ಲ. ಅಲ್ಲಿರಬೇಕಾದ ಒಂದು ಫೈರಲೇ ಕಣ್ಮರೆಯಾದ ಸಂದರ್ಭ ಒಂದರಲ್ಲಿ ಅದಕ್ಕೆ ಜವಾಬ್ದಾರರಾದವರನ್ನು ಸ್ವಜನರೆಂದು ಕೈಬಿಟ್ಟು ಬೇರೆ ನಿರಪರಾಧಿಗಳನ್ನು ಹಿಡಿದು ತೊಂದರೆಗೆ ಗುರಿಪಡಿಸಿರತಕ್ಕ ನಿದರ್ಶನವಿದೆ. ಈಗಿರತಕ್ಕ ಸರ್ಕಾರ ಇಂಥ ಅದಳಿತವನ್ನು ನಡೆಸುತ್ತಿದೆ ಎಂಬುದನ್ನು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ.

(ಶ್ರೀ ಟಿ. ಎನ್. ಮಾದಪ್ಪಗೌಡ)

10 A M.

ವಿದ್ಯಾ ಇಲಾಖೆಯವರು ನಡೆಸುತ್ತಿರುವ ಪರೀಕ್ಷೆಗಳಲ್ಲಿ ಟ್ಯಾಬುಲೇಷನ್ನು ಮಾಡುವಾಗ ಯೋಗ್ಯತೆ ಇಲ್ಲದವರು ತೇರ್ಗಡೆಯಾದವರು. ಯೋಗ್ಯತೆಯುಳ್ಳಂತಹವರು ಫೇಲ್ ಆದರು. ಈ ಸಂದರ್ಭದಲ್ಲಿ ಹೇಳುವುದಾದರೆ ಇದಕ್ಕೆ ಸಂಬಂಧಪಟ್ಟಂತೆ ಮೂರು ಜನ ಅಧಿಕಾರಿಗಳಿದ್ದಾರೆ. ಈ ಮೂರು ಜನರು ಮಾಡುವ ಅಧಿಕಾರ ಮತ್ತು ತೀರ್ಮಾನಗಳಿಂದ ಅವರ ಪಕ್ಷಕ್ಕೇ ಸೇರಿದವರು ಏನೂ ಯೋಗ್ಯತೆ ಇಲ್ಲದಿದ್ದರೂ ತೇರ್ಗಡೆಯಾಗಿರುವಂತಹ ಪ್ರಸಂಗಗಳು ಎಷ್ಟೋ ಇವೆ. ಸ್ವಜನ ಪಕ್ಷಪಾತದಿಂದಾಗಿ ಅವರಿಗಿಂತ ಉತ್ತಮವಾದ ಯೋಗ್ಯತೆಯುಳ್ಳಂತಹವರು ಒಬ್ಬರೂ ತೇರ್ಗಡೆ ಹೊಂದುವ ಹಾಗೇ ಇಲ್ಲ. ಈ ತರಹದ ಒಂದು ನಡವಳಿಕೆಯಾದರೆ ಈ ಸರಕಾರದಲ್ಲಿ ಆಡಳಿತ ನಡೆಸುತ್ತಿರುವ ಅಧಿಕಾರಿಗಳಲ್ಲಿ ನಮಗೆ ನಂಬಿಕೆ ಬರುವುದಾದರೂ ಹೇಗೆ? ಅವರನ್ನೇ ನಂಬಿಕೊಂಡು ನಮ್ಮ ಜನರಿಗೆ ಅನುಕೂಲವಾಗುತ್ತದೆ ಎಂದು ನಮ್ಮ ಸರಕಾರದವರೂ ಇದ್ದಾರೆಂದು ನನಗನಿಸುತ್ತದೆ.

ಇನ್ನೊಂದು ಪಾನನಿರೋಧದ ವಿಚಾರ. ಈ ಪಾನನಿರೋಧವನ್ನು ಈ ದೇಶದಲ್ಲಿ ಜಾರಿಗೆ ತಂದಿದ್ದಾರೆ. ಇದರಿಂದ ಬಡ ಜನಕ್ಕೆ ಅನುಕೂಲವಾಗಿದೆ ಎಂದು ಹೇಳುತ್ತಾರೆ. ಹೇಗೆ ಆಗುತ್ತಾ ಇದೆ ಎನ್ನುವುದಕ್ಕೆ ನನ್ನ ತಾಲ್ಲೂಕಿನಲ್ಲೇ ನಡೆಯುತ್ತಿರುವ ಒಂದೇ ಒಂದು ನಿದರ್ಶನವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ನಾಗಮಂಗಲದ ಬಳಿ ಕದವಳ್ಳಿ ಎನ್ನುವ ಕಡೆ ಒಂದು ಸಂತೆ ಯಾಗುತ್ತದೆ. ಇದು ಬೆಂಗಳೂರು ಮತ್ತು ಮಂಗಳೂರು ಈ ಭಾಗದಲ್ಲಿ ಹೋಗುವ ರಸ್ತೆ ಸಮೀಪದಲ್ಲಿದೆ. ಇಲ್ಲಿ ಒಂದು ವಾರಕ್ಕೆ ಇಪ್ಪತ್ತು ಇಪತ್ತೈದು ಸಾವಿರ ರೂಪಾಯಿಗಳಷ್ಟು ಬೆಲೆಯುಳ್ಳ ಹೆಂಡ ಮತ್ತು ಸಾರಾಯಿ ಬಿಕರಿಯಾಗುತ್ತಿರುತ್ತದೆ. ಇಲ್ಲಿ ನಿಮ್ಮ ಅಧಿಕಾರಿಗಳೇ ಮತ್ತು ನಿಮ್ಮ ಒಂದು ಪಕ್ಷದ ಜನರ ಘನ ಅಧ್ಯಕ್ಷತೆಯಲ್ಲಿಯೇ ಆಗುತ್ತಿದೆ ಮತ್ತು ಅದಕ್ಕೆ ಅವರೂ ರಕ್ಷಣೆಯನ್ನೂ ಕೊಟ್ಟಿದ್ದಾರೆ. ಈ ಭಾಗದಿಂದ ತುರುವೇಕೆರೆ ಕಡೆಗೆ, ಮತ್ತೊಂದು ಕಡೆ ಚನ್ನರಾಯಪಟ್ಟಣದ ಕಡೆಗೆ ಮತ್ತು ತಿಪಟೂರು ಕಡೆಗೆ ಇಲ್ಲಿಂದ ಹಂಚಿಕೆ ವ್ಯವಸ್ಥೆ ಕೂಡ ನಡೆಯುತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅರಸೀಕೆರೆ ಕಡೆಗೂ ಬರುತ್ತದೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಅಲ್ಲಿಗೂ ಬರಬಹುದು.

[CHAIRMAN (SMT. BASAVARAJESWARI) in the chair]

ನಿಮ್ಮ ಒಂದು ಕಾನೂನನ್ನು ಹೇಗೆ ಉಪಯೋಗ ಮಾಡುತ್ತಿದ್ದಾರೆನ್ನುವುದಕ್ಕಾಗಿ ಇದನ್ನು ನಾನು ಹೇಳುತ್ತಿದ್ದೇನೆ. ಹೀಗೆ ಬೇಲಿಯೇ ಎದ್ದು ಹೊಲ ಮೇಯುವಂತಾದರೆ ಕಾನೂನಿಂದ ಜನಕ್ಕೇನು ರಕ್ಷಣೆ ಕೊಟ್ಟ ಹಾಗಾಗುತ್ತದೆ. ಇದನ್ನು ತಾವು ಗಮನಿಸಬೇಕು. ಮತ್ತೆ ಈಗ ಹೊಸದಾಗಿ ರೋಡು ಟ್ರಾನ್ಸ್‌ಪೋರ್ಟು ಇಲಾಖೆ ಎಂದಾಗಿದೆ. ಸಮಾಜವಾದ ತರಬೇಕು ಎಂದು ಹೇಳುವುದನ್ನು ನೋಡಿದರೆ ನಮಗಂತೂ ಅರ್ಥವಾಗುತ್ತಿಲ್ಲ. ಸಮಾಜ ವಾದ ಎಂದು ಹೇಳುವುದಕ್ಕೆ ಬದಲಾಗಿ ಕಮ್ಯುನಿಸ್ಟು ತತ್ವವನ್ನು ಒಪ್ಪಿಕೊಂಡರೆ ಒಳ್ಳೆಯದಾಗುತ್ತೋ ಏನೋ ಎಂದು ತೋರುತ್ತದೆ. ಇದು ಸಮಾಜವಾದವಾಗುವುದಿಲ್ಲ. ಇದು ಹೇಗಿರಬೇಕು ಮತ್ತು ಹೇಗೆ ರಚನೆ ಮಾಡಬೇಕು ಎನ್ನುವುದೂ ಗೊತ್ತಿಲ್ಲ. ನಮ್ಮಲ್ಲಿರುವುದು ಸಮಾಜವಾದವಲ್ಲ. ಎಲ್ಲರೂ ಬಂಡವಾಳ ಷಾಹಿ ಜನರಾಗುತ್ತಿದ್ದಾರೆ. ಒಂದೇ ಪಕ್ಷದವರು ಹೆಚ್ಚು ಹೆಚ್ಚಾಗಿ ಹಣವಂತರಾಗುತ್ತಿದ್ದಾರೆ. ರೋಡು ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿರುವ ಕಂಡಕ್ಟರು ಮತ್ತು ಅವರ ಮೇಲೆ ತನಿಖೆ ಮಾಡಲು ನೇಮಿಸಿರುವಂತಹ ಚೆಕ್ಕಿಂಗು ಇನ್ಸ್‌ಪೆಕ್ಟರುಗಳು ಮಾಡುವಂತಹ ವ್ಯವಹಾರಗಳನ್ನು ನೋಡಿದರೆ ಆಳುವ ಪಕ್ಷದವರಿಗೇ ಚೆನ್ನಾಗಿ ಅರ್ಥವಾಗುತ್ತದೆ. ನಮಗೇನೋ ರೈಲಿನ ಸೌಕರ್ಯ ಮತ್ತು ಪ್ಲೇನಿನ ಸೌಕರ್ಯಗಳಿಲ್ಲ. ನಾವು ಬೆಂಗಳೂರು ಮತ್ತು ಇತರ ಭಾಗಗಳಿಗೆ ಹೋಗಬೇಕಾದರೆ ಬಸ್ಸಿನಲ್ಲೇ ಪ್ರಯಾಣ ಮಾಡಬೇಕು. ಅಲ್ಲಿಗೆ ಬರುವ ಬಸ್ಸುಗಳ ಕಂಡಕ್ಟರುಗಳ ಮೇಲೆ ಚೆಕ್ಕಿಂಗಿಗಾಗಿ ಇನ್ಸ್‌ಪೆಕ್ಟರುಗಳು ಬರುತ್ತಾರೆ. ಅವರು ಬಸ್ಸನ್ನು ಹತ್ತಿ ತನಿಖೆಗೆ ಬರುವಾಗ ಅವರಿಗೆ ಐದು, ಹತ್ತು ರೂಪಾಯಿಗಳಿಗೆ ಮೇಲ್ಪಟ್ಟು ಕೊಡುವಂತಹ ಸುಳುವೂ ಒಬ್ಬರಿಗೂ ಗೊತ್ತಾಗುವುದಿಲ್ಲ ಹಾಗೆ ಕೊಡುತ್ತಾರೆ ಮತ್ತು ಇದು ಎಲ್ಲರಿಗೂ ತಿಳಿದಂತಹ ವಿಷಯವೇ ಆಗಿದೆ. ಆದುದರಿಂದ ಇಲಾಖೆಯನ್ನು ಮಾನಾಪೊಲೈಸು ಮಾಡಿಕೊಂಡು ಇದಕ್ಕಾಗಿ ದೊಡ್ಡ ಬಂಡವಾಳವನ್ನು ಹಾಕಿ ಇದರಲ್ಲಿ ತಮಗೇ ಬೇಕಾದವರಿಗಾಗಿ ಕೆಲಸಗಳನ್ನು ಕೊಟ್ಟು ಸಂಬಳ ಕೊಟ್ಟು ನೋಡಿಕೊಳ್ಳುವ ವ್ಯವಸ್ಥೆ ಎಷ್ಟು ಚೆನ್ನಾಗಿದೆ ಎನ್ನುವುದನ್ನು ಇಲ್ಲಿ ಹೇಳುವುದಕ್ಕಿಂತ ಆಳುವ ಪಕ್ಷದವರೇ ಖುದ್ದಾಗಿ ನೋಡಿದರೇ ಅವರಿಗೇ ಚೆನ್ನಾಗಿ ಅರ್ಥ

ವಾಗುತ್ತದೆ. ಖಾಸಗಿಯವರು ಬಸ್ಸುಗಳನ್ನು ನಡೆಸುತ್ತಿದ್ದುದಕ್ಕಿಂತ ಹೆಚ್ಚಿನ ಸೌಕರ್ಯಗಳನ್ನು ಕೊಡುತ್ತೇವೆಂದು ಹೇಳುತ್ತಾ ಖಾಸಗಿಯವರನ್ನು ತಪ್ಪಿಸಿ ಸರಕಾರವೇ ಬಸ್ಸುಗಳನ್ನು ನಡೆಸಬೇಕೆಂದು ಒಂದು ನೀತಿಯನ್ನು ಅನುಸರಿಸಬೇಕೆಂದು ಮತ್ತು ಸಮಾಜವಾದವನ್ನು ತರಬೇಕೆಂದು ಮಾಡಿದರು. ಆದರೆ ಆ ಸಮಾಜವಾದ ಬರುವ ಹಾಗಿಲ್ಲ ಜನರಿಗೆ ಅನುಕೂಲವೂ ಆಗುವ ಹಾಗಿಲ್ಲ. ಹಾಗೆ ಈ ಬಸ್ಸುಗಳ ರಾಷ್ಟ್ರೀಕರಣವನ್ನು ತಂದು ಆಡಳಿತ ನಡೆಸುತ್ತ ಬಂದಿದ್ದೀರಿ. ಇದರಿಂದ ನೀವು ಅನೀತಿ ಅಧರ್ಮಗಳಿಗೆ ಹೆಚ್ಚು ಹೆಚ್ಚಾಗಿ ಅವಕಾಶ ಕೊಟ್ಟು ನಿಮಗೆ ಬೇಕಾದವರಿಗಾಗಿ ಕೆಲಸಗಳನ್ನು ಕೊಟ್ಟು ಅದರಿಂದ ಹೆಚ್ಚಿನ ದುರುಪಯೋಗವಾಗುತ್ತಿರುವುದರಿಂದ ನೀವು ಸುಖೀ ರಾಜ್ಯವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ನಿಮಗೆ ಹಿಂದಿದ್ದಂತಹ ರಾಮರಾಜ್ಯ ಸ್ಥಾಪನೆಗೆ ಮತ್ತು ಅದನ್ನು ಕಟ್ಟುವುದಕ್ಕೆ ಯೋಗ್ಯತೆಯಿದೆಯೇ, ದಕ್ಷತೆ ಇದೆಯೇ ಎಂದು ನಾನು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ.

ಎಜುಕೇಷನ್ನು ಇಲಾಖೆ ಬಹಳ ಮುಖ್ಯವಾದುದು. ಮುಖ್ಯವಾಗಿ ಇದರಿಂದ ನಮ್ಮ ಮಕ್ಕಳು ವಿದ್ಯಾವಂತರಾಗಿ ಸತ್ಪ್ರಜೆಗಳಾಗಬೇಕು ಮತ್ತು ಅವರಿಂದ ದೇಶ ಸುಲಲಿತವಾಗಿ ನಡೆಯಬೇಕು ಎಂದು ನಾನೂ ತಿಳಿದುಕೊಂಡಿದ್ದೇನೆ. ಇಂತಹ ಕಡೆಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡಲು ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುತ್ತಾರೆ. ಇಂತಹವರು ಎಂಪ್ಲಾಯ್‌ಮೆಂಟು ಎಕ್ಸ್‌ಚೇಂಜುಗಳಿಗೆ ಹೋಗಿ ಅಲ್ಲಿ ನಂಬರು ಮಾಡಿಸಿಕೊಂಡು ಬರಬೇಕಾದರೆ ಅಲ್ಲಿರುವರಿಗೆಲ್ಲಾ ಲಂಚ ಕೊಡದೇ ಹೋದರೆ ಯಾವ ಕೆಲಸವೂ ಆಗುವುದೇ ಇಲ್ಲ. ಇದರಿಂದ ಏನಾಗುತ್ತದೆ ಎಂದರೆ ಯೋಗ್ಯತೆ ಇಲ್ಲದವರಿಗೆ ಉಪಾಧ್ಯಾಯರುಗಳ ಕೆಲಸ ಸಿಕ್ಕಿ ಅವರಿಂದ ಚೆನ್ನಾಗಿ ಕೆಲಸವಾಗಬೇಕು ಎಂದರೆ ಹೇಗೆ ತಾನೇ ಆಗುತ್ತದೆ. ಪ್ರಭಾವಶಾಲಿಗಳಾಗಿ ಕೆಲಸವನ್ನೇನೋ ಪಡೆಯುತ್ತಾರೆ ಆದರೆ ಅವರಿಂದ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ದೊರಕುತ್ತಿಲ್ಲ. ಹಿಂದಿನ ತಲೆಮಾರಿನಲ್ಲಿ ನಮ್ಮ ತಾತ ಮುತ್ತಾತಂದಿರ ಕಾಲದಲ್ಲಿ ನಾವು ಯಾವ ಮಟ್ಟದಲ್ಲಿದ್ದೆವು ಮತ್ತು ಈಗ ನಮ್ಮ ಕಾಲದಲ್ಲಿ ವಿದ್ಯಾಭ್ಯಾಸದ ಮಟ್ಟ ಹೇಗಿದೆ ಎನ್ನುವುದನ್ನು ಯೋಚನೆ ಮಾಡಿ ನೋಡಿದರೆ ನಿಮಗೇ ಗೊತ್ತಾಗುತ್ತದೆ. ಮುಂದಕ್ಕೆ ಈ ವಿದ್ಯಾಭ್ಯಾಸದ ಮಟ್ಟ ಇನ್ನೂ ಅರ್ಧದಷ್ಟು ಇಳಿದು ಹೋಗುವ ಸಂದರ್ಭ ಬಂದರೂ ಬರಬಹುದು. ಹೀಗೆ ಎಲ್ಲ ಇಲಾಖೆಯ ಸ್ಥಿತಿಯೂ ಆಗಿದೆ.

ಇನ್ನು ಕೋ-ಆಪರೇಷನ್ನು ಇಲಾಖೆಯನ್ನು ನೋಡುವುದಾದರೆ ಬರೀ ಒಂದು ಆಳುವ ಪಕ್ಷದವರ ಜನರೇ ಎಲ್ಲ ಸಂಸ್ಥೆಗಳಲ್ಲೂ ಇರುವಂತೆ ಮಾಡುತ್ತಿದ್ದಾರೆ. ಇಲ್ಲಿಂದ ಹಿಡಿದು ಗ್ರಾಮದ ಮಟ್ಟದಲ್ಲಿರುವ ಎಲ್ಲ ಸಹಕಾರ ಸಂಘಗಳಲ್ಲೂ ಇವರ ಪಕ್ಷದವರೇ ಇದ್ದಾರೆ. ಒಂದು ಸಣ್ಣ ನಿದರ್ಶನವನ್ನು ಹೇಳಬೇಕೆಂದರೆ ಬೆಂಗಳೂರು ಡಿಸ್ಟ್ರಿಕ್ಟು ಬ್ಯಾಂಕಿನಲ್ಲಿ ರೈತರಿಗಾಗಿ ಹೊಸದಾದ ಆಲೂಗೆಡ್ಡೆ ಬೀಜ ರೈಲಿನಲ್ಲಿ ಬಂದು ಬಿದ್ದಿದೆ. ಇದರ ಮೇಲೆ ಏನೇನೋ ವ್ಯವಹಾರಗಳಾಗಿ ಇದು ಕೋರ್ಟಿನಲ್ಲಿದ್ದು ಈಗ ಇದರ ಬಗ್ಗೆ ಸ್ಟೇ ಆರ್ಡರೂ ಆಗಿದೆ ಎಂದು ತಿಳಿದು ಬಂದಿದೆ. ಸಿವಾಲ್ದಿಂದ ಬಡ ರೈತರಿಗೆ ಉಪಯೋಗವಾಗಲಿ ಎಂದು ಸಹಕಾರ ಸಂಘದ ಮೂಲಕ ಆಲೂಗೆಡ್ಡೆ ಬೀಜವನ್ನು ತರಿಸಿರುವುದರ ಮೇಲೆ ಪ್ರತಿದಿನವೂ ಡೆಮ್ಯುರೇಜು ಬೆಳೆಯುತ್ತಿದೆ ಮತ್ತು ಇನ್ನು ಕೆಲವು ದಿನಗಳು ಹೋದರೆ ಇವುಗಳೆಲ್ಲಾ ಕೆಟ್ಟು ಹೋಗುವುದೂ ಉಂಟು. ಹೀಗೆ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುವಂತೆ ಮಾಡಿದರೆ ಇದರಿಂದ ಆಡಳಿತ ಸುಸೂತ್ರವಾಗಿ ಸಾಗುತ್ತದೆಯೇ ಎಂದು ನಾನಿಲ್ಲಿ ಕೇಳಬೇಕಾಗಿದೆ. ಇವೆಲ್ಲ ಸಾಮಾನ್ಯವಾದ ವಿಚಾರಗಳು. ಆದರೂ ಇವನ್ನೆಲ್ಲಾ ಹೇಳುವುದಕ್ಕೆ ಹೊರಟರೆ ಮನಸ್ಸಿಗೆ ಬಹಳ ಯಾತನೆಯಾಗುತ್ತದೆ. ನಮ್ಮ ಆಡಳಿತ ಪಕ್ಷದವರು ಈ ದಿನ ಅಧಿಕಾರದಿಂದ ಇಳಿಯುವ ಸ್ಥಿತಿಯಲ್ಲೂ ಇಲ್ಲ ಎಂದು ಈ ರೀತಿ ಮಾಡುತ್ತಿರಬಹುದು. ಇದರ ಬಗ್ಗೆ ನಾನೂ ಹೇಳಿದ್ದೇನೆ ಇನ್ನು ಮುಂದೆ ನನ್ನ ಸ್ನೇಹಿತರು ಇನ್ನೂ ಅನೇಕ ವಿಷಯಗಳನ್ನು ಹೇಳುವವರಾಗಿದ್ದಾರೆ. ಇವೆಲ್ಲಾ ನಿಮಗೂ ಗೊತ್ತಿಲ್ಲದೇ ಇಲ್ಲ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ ದುರ್ನಡತೆಗಳು ಇವೆಲ್ಲ ನಿಮ್ಮ ಕಣ್ಣು ಮುಂದೆ ನಡೆಯುತ್ತಿದ್ದರೂ ನೋಡಿಕೊಂಡು ಕುರುಡರಾಗಿದ್ದೀರಿ. ನೀವು ಕುರುಡರಾಗಿದ್ದರೂ ಈ ದೇಶದ ಜನ ಕುರುಡರಾಗಿಲ್ಲ. ಇಂತಹ ಕ್ಲೇಶದಾಯಕವಾದ ದುರ್ನಡತೆಗಳ ಮೂಲಕ ನಡೆಸುತ್ತಿರುವ ಅಧಿಕಾರದ ಪರಿಣಾಮದಿಂದಾಗಿ ಈ ದೇಶಕ್ಕೆ ದೊಡ್ಡ ಪರಿಣಾಮವುಂಟಾಗತಕ್ಕ ಪರಿಸ್ಥಿತಿ ಈ ಸೊಸೈಟಿಗಳಿಂದಾಗಿ ಬರುತ್ತದೆ ಎಂದು ನನಗಾದರೂ ಅನಿಸುತ್ತದೆ.

ಇನ್ನು ಸುಮ್ಮನೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಎಂದು ಮಾಡಿ ಅದರಿಂದ ದೇಶವನ್ನು ಅಭಿವೃದ್ಧಿ ಮಾಡಬೇಕು ಎಂದು ತಂದಿದ್ದಾರೆ. ಎಲ್ಲೆಲ್ಲಿ ಈ ಯೋಜನೆಗಳನ್ನು ತಂದಿದ್ದಾರೋ ಅಲ್ಲೆಲ್ಲಾ ತಮ್ಮ ಜನರೇ ಇರಬೇಕು ತಮ್ಮ ಸ್ನೇಹಿತರೇ ಇರಬೇಕೆಂದು ತಂದಿದ್ದಾರೆ. ಅಲ್ಲದೆ ಅವರುಗಳು ವಿದ್ಯಾವಂತರಾಗಿಲ್ಲದಿದ್ದರೂ ಯೋಗ್ಯತೆ ಇಲ್ಲದಿದ್ದರೂ ತಮ್ಮ ಪಕ್ಷದವರು ಇರಬೇಕೆಂದು ಮಾಡಿದ್ದಾರೆ. ಅವರ ಪಕ್ಷದವರೇ ಇರಲಿ ಬೇಡ ಎನ್ನುವುದಿಲ್ಲ. ಈ ಯೋಜನೆಯ ತಿಳಿವಳಿಕೆ ಇಲ್ಲದಿದ್ದ ಜನರಿದ್ದರೆ ಅವರಿಂದ ಜನರಿಗೆ ಆ ಬಗ್ಗೆ ಹೇಗೆ ತಿಳಿವಳಿಕೆ ಕೊಡಬಲ್ಲರು? ಆದ್ದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಿಸ್ಪೃಹರಾದಂಥವರನ್ನೊಳಗೊಂಡ

(ಶ್ರೀ ಟಿ. ಎನ್. ಮಾದಪ್ಪಗೌಡ)

ಒಂದು ಸಮಿತಿಯನ್ನು ಮಾಡಿ, ಅವರು ಒಂದು ಹೊಸ ಆಡಳಿತ ವ್ಯವಸ್ಥೆಯನ್ನು ನಿರ್ಮಾಣ ಮಾಡ ತಕ್ಕಂಥ ವಿಚಾರವನ್ನು ಆಳವಾಗಿ ಪರಿಶೀಲಿಸಿ, ರೀತಿ ನೀತಿಯನ್ನು ರೂಪಿಸುತ್ತಾರೆ. ಅನಂತರ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಕ್ಯಾಬಿನೆಟ್ ಪಾಯಿಂಟ್ ಆಫ್ ಆರ್ಡರ್ ಮಿನಿಸ್ಟರು ಒಬ್ಬರೂ ಇಲ್ಲ. ಈಗ ಇಲ್ಲಿರುವವರೆಲ್ಲಾ Deputy Ministers without portfolios. ಅವರು ಯಾವ ಕ್ಯಾಬಿನೆಟ್ ಮೀಟಿಂಗಿಗೂ ಹೋಗುವ ಹಾಗಿಲ್ಲ. ನಾವು ಸಂಕಟ ದಿಂದ ಹೇಳುವ ವಿಚಾರ ಯಾವುದೂ ಕ್ಯಾಬಿನೆಟ್ ಮೀಟಿಂಗಿಗೆ ಹೋಗುವ ಹಾಗಿಲ್ಲ. ಬಹುಭಾಗ ಈ ಉಪಮಂತ್ರಿಗಳಿಗೆ ಯಾವ ಖಾತೆಯೂ ಇಲ್ಲ. ಮಿನಿಸ್ಟರು ಯಾರಾದರೂ ಬರುವ ಹಾಗೆ ಮಾಡಿ. ಚರ್ಚೆಯನ್ನು ಐದು ನಿಮಿಷ ತಡೆಹಿಡಿದರೂ ಪರವಾಗಿಲ್ಲ, ಯಾರಾದರೂ ಕ್ಯಾಬಿನೆಟ್ ಮಿನಿಸ್ಟರನ್ನು ಕರೆಸುವ ವ್ಯವಸ್ಥೆ ಮಾಡಬೇಕು.

ಸಭಾಪತಿಯವರು.—Point of order ಏನೂ ಇಲ್ಲ. ಇದ್ದ ಡೆಪ್ಯುಟಿ ಮಿನಿಸ್ಟರುಗಳು ನೋಟ್ ಮಾಡಿಕೊಂಡು ಮಿನಿಸ್ಟರಿಗೆ ತಿಳಿಸುತ್ತಾರೆ. ಮೂರು ಡೆಪ್ಯುಟಿ ಮಿನಿಸ್ಟರುಗಳಿದ್ದಾರೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಇನ್ನೊಂದು ವಿಚಾರ. ರಾಜ್ಯದ ಹೆಸರು ಕರ್ಣಾಟಕವೇ, ಮೈಸೂರೇ ಎನ್ನುವ ಪ್ರಶ್ನೆ ಇದೆ, ಅದು ಏನೋ ಆಗುತ್ತದೆ. ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಲೆಜಿಸ್ಲೇಟೀವ್ ಕೌನ್ಸಿಲ್ ಅಧ್ಯಕ್ಷರಾಗಿರತಕ್ಕಂಥವರೂ, ದೇಶದ ಮುಖ್ಯಮಂತ್ರಿಯಾದಂಥವರೂ ಯಾವುದೋ ವೇದಿಕೆಯ ಮೇಲೆ ನಿಂತುಕೊಂಡು ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ, ಹಳೇ ಮೈಸೂರಿನ ಜನಕ್ಕೆ ಮೈಸೂರು ಅನ್ನುವ ಹೆಸರಿನ ಮೇಲೆ ಬಹಳ ವ್ಯಾಮೋಹವಿದೆ ಎಂದು ಹೇಳು ತ್ತಾರೆ. ಶ್ರೀ ಹಳ್ಳಿಕೇರಿ ಗುಡ್ಲಪ್ಪನವರು ಕರ್ಣಾಟಕವೆಂಬ ಹೆಸರು ಇಟ್ಟುಬಿಡೋಣ, ಏನಾಗುತ್ತದೆ ನೋಡಿಯೇ ಬಿಡೋಣ ಎಂದು ಹೇಳಿದ್ದಾರೆ. ಅಷ್ಟೇ ಕೆಚ್ಚು, ಹುಮ್ಮಸ್ಸೂ ನಮ್ಮಲ್ಲಿಯೂ ಇದೆ. ಅಂಥ ಪರಿಸ್ಥಿತಿ ಬಂದಾಗ ಅದನ್ನು ನಾವು ಹೇಗೆ ಎದುರಿಸುತ್ತೇವೆ ಎನ್ನುವುದನ್ನು ನೋಡಲಿ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—Point of order. ಭ್ರಷ್ಟಾಚಾರ ನಿರ್ಮೂ ಲಕ್ಕೂ, ಕರ್ಣಾಟಕದ ಹೆಸರಿಗೂ ಎಲ್ಲಿ ಸಾಮ್ಯವಿದೆ? ಅದನ್ನು ಈಗ ಪ್ರಸ್ತಾಪಿಸುವ ಆವಶ್ಯಕತೆ ಎಲ್ಲಿದೆ?

ಸಭಾಪತಿಯವರು.—ಕೌನ್ಸಿಲ್ ಚೇರ್ಮನ್ನರವರ ಹೆಸರನ್ನು ಪ್ರಸ್ತಾಪ ಮಾಡಬೇಡಿ.

ಶ್ರೀ ಟಿ. ಎನ್. ಮಾದಪ್ಪಗೌಡ.—ಕೌನ್ಸಿಲ್ ಅಧ್ಯಕ್ಷರು ಹಾಗೆ ಜಬರದಸ್ತಿ ಭಾಷಣ ಮಾಡಿದರೆ ಏನು ಮಾಡುತ್ತೇವೆ ಎಂಬ ವಿಷಯವನ್ನು ಹೇಳುವುದಕ್ಕೆ ಹೇಳಿದೆ. ಸ್ವಜನ ಪಕ್ಷಪಾತವಿದೆ; ಒಂದು ಗುಂಪನ್ನು ಕಟ್ಟುವುದಕ್ಕೆ ಮತ್ತು ಇಲ್ಲಿನವರ ಅಭಿಪ್ರಾಯವನ್ನು ನೀವು ತುಳಿಯುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಿ.

ಶ್ರೀ ಎ. ಜೆ. ದೊಡ್ಡಮೇಟಿ.—ನಾವೂ ನೀವೂ ಎಲ್ಲರೂ ಕರ್ಣಾಟಕದವರು, ಸ್ವಜನ ಪಕ್ಷ ಪಾತ ಎಲ್ಲಿ ಬಂತು?

ಶ್ರೀ ಟಿ. ಎನ್. ಮಾದಪ್ಪಗೌಡ.—ನಾವೂ ನೀವೂ ಒಂದೇ, ಈ ದೇಶ ಒಂದೇ. ಕನ್ನಡ ಮಾತ ನಾಡತಕ್ಕಂಥವರು ನಾವೂ ಇದ್ದೇವೆ. ಆದರೆ ಇದು ಕನ್ನಡ ದೇಶ ಎಂಬ ಭಾವನೆ ನಿಮ್ಮಲ್ಲಿ ಇದ್ದರೆ, ಇದು ಒಪ್ಪತಕ್ಕಂಥ ವಿಚಾರ. ನಾನಾ ರೂಪದಲ್ಲಿ, ಒಂದರಲ್ಲಿಲ್ಲ, ಪ್ರತಿಯೊಂದರಲ್ಲಿಯೂ ನಾವು ಅನುಭವಿಸುತ್ತಾ ಇರತಕ್ಕಂಥ ತೊಂದರೆಯನ್ನು ನಾವು ಇನ್ನು ಯಾವ ರೂಪದಲ್ಲಿ ಹೇಳಿಕೊಳ್ಳಬೇಕು? ನಮಗೆ ಇರುವ ಅವಕಾಶ ಈ ಮಾನ್ಯ ಸಭೆಯಲ್ಲಿ, ಇಲ್ಲಿ ಹೇಳಿಕೊಳ್ಳಬೇಕು.

ಸಭಾಪತಿಯವರು.—ರೆಸಲ್ಯೂಷನ್ ಮೇಲೆ ಮಾತನಾಡಿ.

ಶ್ರೀ ಟಿ. ಎನ್. ಮಾದಪ್ಪಗೌಡ.—ಸ್ವಜನ ಪಕ್ಷಪಾತ, ಜಾತೀಯತೆ ಇದೆ; ಅದನ್ನು ನಾವು ಕಾಣುತ್ತಿದ್ದೇವೆ.

Mr. CHAIRMAN.—Order, order ಹಾಗೆ ಮಾತನಾಡಬಾರದು.

ಶ್ರೀ ಟಿ. ಎನ್. ಮಾದಪ್ಪಗೌಡ.—ಈ ಎಲ್ಲ ನೋವುಗಳೂ ನಮಗೆ ಜಾಸ್ತಿಯಾಗಿವೆ. ಈ ಆಡಳಿತದಿಂದ, ಈಗ ದೇಶವನ್ನು ಆಳುತ್ತಾ ಇರತಕ್ಕಂಥ ಸರ್ಕಾರದಿಂದ ಎಳ್ಳಷ್ಟೂ ಪ್ರಯೋಜನ ವಾಗುವುದಿಲ್ಲ. ದಿನದಿನಕ್ಕೆ ಭಿನ್ನಾಭಿಪ್ರಾಯಗಳನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಇವರ ಆಡಳಿತ ದಕ್ಷತೆಯನ್ನು ನೋಡಿದರೆ, ಇವರು ಜನಕ್ಕೆ ಒಳ್ಳೆಯ ಕೆಲಸ ಮಾಡತಕ್ಕಂಥ ಶಕ್ತಿ ಕಳೆದು ಕೊಂಡಿದ್ದಾರೆ. ಅದಕ್ಕಾಗಿ ಒಂದು ಸಮಿತಿ ಮಾಡಿ. ದೇಶದ ಆಡಳಿತವನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡು ಹೋಗತಕ್ಕಂಥ ಪ್ರಯತ್ನ ಮಾಡುವುದಕ್ಕೆ ಈ ಸಮಿತಿಯನ್ನು ಮಾಡಬೇಕು.

ಇಷ್ಟು ಹೇಳಿ, ನನಗೆ ಈ ಎರಡು ಮಾತನಾಡುವ ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದಿರುವ ಪ್ರಶ್ನೆ malpractices, nepotism and corruption ಯಾವುದಾದರೂ ಒಂದು ದುಷ್ಟಭಾವನೆ ಬರಬೇಕಾದರೆ, ಕೆಟ್ಟ ಕೆಲಸ ಮಾಡಬೇಕಾದರೆ ಅದು ಎಲ್ಲೋ ಒಂದು ಜಾಗದಿಂದ ಮೂಡಿಬರುತ್ತದೆ. ಅದಕ್ಕೆ ಸರಿಯಾದ ಬೀಜವಿರುತ್ತದೆ ಅನ್ನುವುದು ಎಲ್ಲರಿಗೂ ಶತಸ್ಸಿದ್ಧವಾಗಿ ಗೊತ್ತು. ಈ ದೃಷ್ಟಿಯಿಂದ ಯೋಚನೆ ಮಾಡುವಾಗ ನನಗನಿಸುತ್ತದೆ. ಈ ಬೀಜ ಹುಟ್ಟುವುದು ಸರಕಾರದ ಧೋರಣೆ ಮೇಲೆ. ಹೀಗೆ ಏಕೆ ಆಗುತ್ತದೆ? ಪ್ರಾಮಾಣಿಕತೆಯ ಅಭಾವದಿಂದ. ಈ malpractices, nepotism, Corruption ಒಬ್ಬರಿಗೇ ನೀಮಿತವಾಗಿಲ್ಲ, ಎಲ್ಲೆಲ್ಲಿಯೂ ತಾಂಡವಾಡುತ್ತಿದೆ. ಇವಕ್ಕೆ ಮೂಲ ಎಲ್ಲಿದೆಯೆಂದರೆ, ಮುಖ್ಯವಾಗಿ ಎಲ್ಲರಲ್ಲಿಯೂ ಅಪ್ರಮಾಣಿಕತೆ ಇದೆ. ನಾನು ಇದನ್ನು ರುಜುವಾತು ಮಾಡಿಕೊಡಬಲ್ಲೆ. ಈ ಭ್ರಷ್ಟಾಚಾರಗಳಲ್ಲಿ ಸರಕಾರ ಭಾಗಿಯಾಗಿದೆ. ಇದನ್ನು ರುಜುವಾತು ಮಾಡಿಕೊಡಬಲ್ಲೆ. ಸರಕಾರದವರು ಭಾಗಿಗಳಾಗಿದ್ದರೆಂದು ಹೇಳಬೇಕಾದರೆ, ನಿರ್ದಿಷ್ಟವಾಗಿ prove ಮಾಡುವುದಕ್ಕೆ ಆಗದೆ ಇದ್ದರೆ ಹೇಳುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿಯೂ ನೀವು ಘಟನಾನುಘಟಿಗಳು ಇದ್ದೀರಿ. ಏನಾದರೂ ಅದರಿಂದ ಅನುಕೂಲವಾಗುತ್ತದೆಂದರೆ, Government order, Reference No; ಅದರ ಜೊತೆಗೆ date ನಾನು ಕೊಡಬಲ್ಲೆ, ಹೀಗೆ ಹೇಳಿಕೊಟ್ಟರೂ ಏನಾದರೂ ಮಾಡುತ್ತೀರ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ನಾವು, ನೀವು, ಯಾರೂ ಕೂಡ ಸೀರಿಯಸ್ ಆಗಿಲ್ಲ. ಏನೋ ಹುಡುಗ, ಮಾತನಾಡಿಕೊಂಡು ಹೋಗಲಿ ಎಂಬ ಮನೋಭಾವ ಈ ಸಭೆಯಲ್ಲಿ ಎದ್ದು ಕಾಣುತ್ತಾ ಇದೆ, ಇದು ಬಹಳ ವಿಷಾದನೀಯ.

ಇನ್ನೊಂದು ವಿಷಯವೇನೆಂದರೆ ಇದು ಎಲ್ಲಿ ಹುಟ್ಟುತ್ತದೆ? ಮನುಷ್ಯನಿಗೆ ಒಳ್ಳೆಯ ಧ್ಯೇಯವಿದ್ದರೆ ಅವನಿಗೆ ಈ ದೃಷ್ಟಿ ಹುಟ್ಟುವುದಿಲ್ಲ. ಮನುಷ್ಯನಿಗೆ ಕೆಟ್ಟ ಧ್ಯೇಯವಿದ್ದರೆ, ಅವನು ಬಾಯಿನಲ್ಲಿ ಒಳ್ಳೆಯದನ್ನು ಹೇಳಿದರೂ ಕೆಲಸದಲ್ಲಿ ಕೆಟ್ಟದ್ದನ್ನು ಮಾಡುತ್ತಾನೆ.

ಶ್ರೀಮಾನ್ ಮಾದಪ್ಪ ಗೌಡರು ಒಳ್ಳೆಯ ಪಾಯಿಂಟ್ಸ್ ಹೇಳಿದರು. ಅವರು ಒಂದು ವಿಷಯದಲ್ಲಿ nepotism ಗೂ ಕರ್ಣಾಟಕಕ್ಕೂ ಗಂಟು ಹಾಕಿದರು. ಇದು ಎಷ್ಟು ತಪ್ಪು ಎನ್ನುವುದನ್ನು ಹೇಳಬೇಕಾಗುತ್ತದೆ. ನಮಗೆ ಕರ್ಣಾಟಕ ಏಕೆ ಬೇಕು? ಒಂದು ಜಾತಿಗೆ ಬೇಕೇ? ಮತಕ್ಕೆ ಬೇಕೇ? ಭ್ರಷ್ಟಾಚಾರ ಮಾಡುವುದಕ್ಕೆ ಬೇಕೇ? ಈ ರೀತಿಯ ಭಾಷಾವಾರ ರಾಜ್ಯ ಏಕೆ ಬೇಕು? ಎನ್ನುವುದು ಪ್ರಪಂಚದಲ್ಲೇ ಸಿದ್ಧಾಂತವಾಗಿರುವುದು. ಒಂದೊಂದು ಭಾಷೆಯ ಜನ ಸೇರಿ ಒಂದೊಂದು ರಾಜ್ಯ ಕಟ್ಟುವುದಕ್ಕೆ ಪ್ರಯತ್ನ ಮಾಡಿದರು. ಮನುಷ್ಯ ರಾಜ್ಯ ಕಟ್ಟಬೇಕಾದರೆ ಬುದ್ಧಿಶಕ್ತಿ ಬೇಕಾಗುತ್ತದೆ, ಭಾವನೆ ಬೇಕಾಗುತ್ತದೆ, ಮಾತು ಬೇಕಾಗುತ್ತದೆ. ಇವೆಲ್ಲ ಒಂದುಗೂಡಿದರೆ ಬಹಳ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಇಂಥ ಒಂದು ಸಿದ್ಧಾಂತವನ್ನು ಮಾಡಿದರೇ ಹೊರತು ಇನ್ನೇನೂ ಇಲ್ಲ. ಇದನ್ನು ಬಿಟ್ಟು ಮಾನ್ಯ ಸದಸ್ಯರು ಜಾತೀಯತೆಯ ಪ್ರಭಾವದಿಂದ ಏನೋ ತೊಂದರೆಯಾಗಿದೆ ಎಂದರೆ ನನಗನ್ನಿಸುತ್ತದೆ ಒಕ್ಕಲಿಗರು ರಾಜ್ಯವಾಳುತ್ತಿದ್ದರು, ಆವಾಗ ಎಷ್ಟು ಪ್ರಮಾಣದಲ್ಲಿ ಇತರರಿಗೆ ಪ್ರಾತಿನಿಧ್ಯವಿತ್ತು? ಎಷ್ಟೊಂದು percentage ಈಗಿದೆ ಮತ್ತು ಯಾರಿಗೂ ಇಲ್ಲದ ಹಾಗೆ ಹೆಚ್ಚು ಪ್ರಗತಿಗೆ ಅದು ಎದ್ದಿದ್ದರೆ ಈಗ ಕರ್ಣಾಟಕವಾದುದರಿಂದ ಅದಕ್ಕೆ ತೊಂದರೆಯಾಯಿತು. ಮಂತ್ರಿಮಂಡಲವನ್ನು ಹಿಡಿದುಕೊಂಡು ಯಾರಿಗೆ ಹೆದರಬೇಕು ಎನುವಂಥ ಕೆಟ್ಟ ಸಂಸ್ಕಾರ ಹೋಗಿಲ್ಲವೆಂದು ಭಾವಿಸಬೇಕಾಗುತ್ತದೆ. ಅವರು ದುರುದ್ದೇಶದಿಂದ ಹೇಳಿಲ್ಲ, ಯಾವುದೋ ಮಾತನಾಡಲಿಕ್ಕೆ ಹಾಗೆ ಹೇಳಿದ್ದಾರೆಂದು ನನಗನ್ನಿಸುತ್ತದೆ.

ಸಮಾಜವಾದ ಮಾದರಿ ಸಮಾಜವನ್ನು ಕಟ್ಟಬೇಕು ಎನ್ನುವ ದೃಷ್ಟಿಯಿಂದ ಪ್ರಪಂಚದ ಮೂಲೆ ಮೂಲೆಯಲ್ಲಿಯೂ ಭಾಷಾವಾರು ರಾಜ್ಯಗಳಾಗಬೇಕೆನ್ನುವ ದೃಷ್ಟಿಯಿಂದ ಒಂದೊಂದು ಕಡೆಯೂ ಕೆಲಸ ಮಾಡಿದ್ದಾರೆ. ಅಲ್ಲಿ ಭ್ರಷ್ಟಾಚಾರದ ವಿಚಾರವೇ ಇಲ್ಲ. ಇದ್ದರೂ ಈ ಪ್ರಮಾಣದಲ್ಲಿಲ್ಲ. ಅಂಥ ದೇಶಗಳಲ್ಲಿ ಪ್ರತಿಯೊಂದು ಜಾತಿ; ಮತದವರಿಗೂ ಕೂಡ ಇವನು ಬಡವ, ಇವನು ಬಲ್ಲಿದ ಎನ್ನುವ ವ್ಯತ್ಯಾಸವಿಲ್ಲದೆ ಬಹಳ ಮುಂದೆ ಹೋಗಿ ವಿಶ್ವದ ರಹಸ್ಯಗಳನ್ನು ಅರಿಯುವುದಕ್ಕೆ ಎಂದರೆ ವೈಯಕ್ತಿಕವಾಗಿ ಆಧ್ಯಾತ್ಮಿಕವಾಗಿ ಮನುಷ್ಯ ಮುಂದುವರಿಯುವುದಕ್ಕೆ ಆರ್ಥಿಕವಾಗಿ ಮುಂದೆ ಹೊರಟಿರುವುದಕ್ಕೆ ಬಹಳ ಮುಖ್ಯವಾದ ಕಾರಣವಾಗಿದೆ. ಈ ದೃಷ್ಟಿಯಲ್ಲಿ ಈ ಸರ್ಕಾರದವರು ಮಾಡುತ್ತಿರುವ ವಿಚಾರಗಳನ್ನು ನೋಡಿದರೆ ಅದು ಮೂಲಕ್ಕೇ ಹೋಗುತ್ತದೆ. ಒಂದು ಸಲ departmental enquiry ನಡೆಯಿತು. ಅದರಲ್ಲಿ ಒಬ್ಬ ಅಧಿಕಾರಿಗೆ ಯಾವ ರೀತಿಯ ಪ್ರಮೋಷನ್ ಸಹ ಕೊಡಬಾರದೆಂದು ಹೇಳಿದರು. ಆದರೆ ಅಲ್ಲಿ ಒಬ್ಬ ಕ್ಲಾರ್ಕ್ ಆದವನನ್ನು ಕೆಲಸದಿಂದ ತೆಗೆದು ಹಾಕಿ ಅಧಿಕಾರಿಯಾದವನಿಗೆ ಪ್ರಮೋಷನ್ ಕೊಟ್ಟರು. ಇದು ನಿಜವಾಗಿಯೂ ನ್ಯಾಯವಾದ

(ಶ್ರೀ ವಿ. ಎಂ. ದೇವ್)

ದೃಷ್ಟಿಯಲ್ಲ—ಇದು ಏನು ತೋರಿಸುತ್ತದೆಂದರೆ ಐಶ್ವರ್ಯ ನಿಮ್ಮ ಕಣ್ಣು ಕುಕ್ಕಿದೆ, ಅಧಿಕಾರ ನಿಮ್ಮ ಕಣ್ಣು ಕುಕ್ಕಿದೆ, ಇಂಥ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೀರಿ. ಈ ಒಬ್ಬ ಗುಮಾಸ್ತನು ಕೆಡುವುದಕ್ಕೂ ಕೂಡ ಮೇಲಿನ ಅಧಿಕಾರಿಯೇ ಹೊಣೆ. ಹೀಗಿರುವಾಗ ಗುಮಾಸ್ತನನ್ನು ಕೆಲಸದಿಂದ ತೆಗೆದುಹಾಕಿ ಅಧಿಕಾರಿಗೆ ಪ್ರಮೋಷನ್ ಕೊಟ್ಟರು. ಈ ತರಹ ನಡೆಯುತ್ತದೆ. Enquiry ಮಾಡಿದ ಅಧಿಕಾರಿ ಕೂಡ ಕೆಟ್ಟ ಮನುಷ್ಯನಲ್ಲ. ಇದರಿಂದ there is some lacuna ಎಂದು ಗೊತ್ತಾಗುತ್ತದೆ. ಏಕೆ ಹಾಗೆ ಮಾಡಿದರು ಎಂದರೆ ಅದಕ್ಕೆ ಕಾರಣ ಇಷ್ಟೆ. ನಾವು ಯಾವ ಹಿನ್ನಲೆಯಲ್ಲಿದ್ದೇವೆ, ಯಾವ ಅಂತಸ್ತಿನಲ್ಲಿದ್ದೇವೆ ಅಂತಸ್ತು ಏನಿರುತ್ತದೆ, ಅಧಿಕಾರದ ಅಂತಸ್ತು ಏನಿರುತ್ತದೆ. ಅದಕ್ಕೆ ತಕ್ಕ ಮನೋಭಾವ, ಗುಣಗಳು ಬರುತ್ತವೆ. ಅಷ್ಟೋ ಇಷ್ಟೋ ಪ್ರತಿಭೆ, ದಿಟ್ಟತನ ಯಾವಾಗ ಬರುತ್ತದೆಂದರೆ, ಹಿನ್ನೆಲೆ, limitations ಇರುತ್ತದಲ್ಲ ಅದನ್ನು ಹರಿಹಾಯ್ದು ದಿಟ್ಟತನದಿಂದ ಮುಂದಕ್ಕೆ ಹೋಗುವುದಕ್ಕೆ ಪ್ರಯತ್ನಪಟ್ಟರೆ, ಮನುಷ್ಯ ತೇರ್ಗಡೆ ಹೊಂದುತ್ತಾನೆ. Enquiry ಮಾಡಿಲ್ಲವೆಂದರೆ ಅವಗುಣಗಳಿಗೆ ಕೆಟ್ಟಗುಣಗಳಿಗೆ ಪುರಸ್ಕಾರ ಕೊಟ್ಟಹಾಗೆ ಆಗುತ್ತದೆ. ಆಮೇಲೆ ಕೆಲಸದಲ್ಲಿ ಒಟ್ಟು ಗುರಿ ಕಾಣುವುದು ಏನೆಂದರೆ ಹಣ ಕಾಣುತ್ತದೆ, ಅಧಿಕಾರ ಕಾಣುತ್ತದೆ, ಇಷ್ಟು ಮಾತ್ರ ಕಾಣುತ್ತದೆ. ಇದರಿಂದ ಏನಾಗುತ್ತದೆಂದರೆ ದೌರ್ಜನ್ಯವನ್ನು ಈ ತರಹ ಆಡಳಿತ ಪ್ರಚೋದಿಸುತ್ತದೆ. ಆ ಆಡಳಿತದಲ್ಲಿ, ನನಗನ್ನಿಸುತ್ತದೆ ಬೃಹತ್ತರವಾದ ಧ್ಯೇಯದ ನಿಜವಾದ ಸ್ವರೂಪವನ್ನು ಅರಿತು ಕೊಳ್ಳಬೇಕು. ಆ ಆಧಾರದ ಮೇಲೆ ನಾವು ಆಡಳಿತವನ್ನು ರೂಪಿಸಬೇಕು. ಮೊದಲನೆಯದಾಗಿ ಕೇಳಿಕೊಳ್ಳುವುದೇನೆಂದರೆ ಇವೆರಡಕ್ಕೂ ಪುರಸ್ಕಾರಬೇಕು. ಈವಾಗ ಆಡಳಿತ ಪಕ್ಷವನ್ನೇ ತೆಗೆದುಕೊಳ್ಳಿ. ನೆಹರೂ ಅವರು ಒಂದು ಸರ್ತಿ ಮಾಡಿದ ಕೆಲಸ, ಅದು ಪೂರ್ತಿ ಆಗದೇ ಇದ್ದರೂ ಪ್ರಾಮಾಣಿಕವಾಗಿ ಪ್ರಯತ್ನಮಾಡಿದ್ದೇನೆಂದು ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಮಾಜಿ ಹಣಕಾಸಿನ ಮಂತ್ರಿಗಳಾದ ದೇಶ್‌ಮುಖ್ ಅವರು ಇದ್ದರು, ಅದರ ಕಾರಣಗಳೇನೇ ಇರಲಿ ಅವರು ಆಡಳಿತ ಪಕ್ಷಕ್ಕೆ ಸೇರಿದವರಲ್ಲದಿದ್ದರೂ, ಅವರನ್ನು ತೆಗೆದುಕೊಂಡಿದ್ದರು. ಈ ರೀತಿಯ ಮನೋಭಾವ ಅವರಲ್ಲಿ ಬರಬೇಕು. ಆದರೆ ಅವರಲ್ಲಿ ಅಧಿಕಾರಿ ಷಾಹಿ ಮನೋಭಾವವಿರುತ್ತದೆ. ಒಂದು ಹೊಣೆಗಾರಿಕೆಯ ಸ್ಥಾನವನ್ನು ನಿಜವಾಗಿ ಅರ್ಹತೆ ಇರುವವರಿಗೆ ಕೊಡಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ.

ಒಂದು ಮಂತ್ರಿ ಮಂಡಳದಲ್ಲಿ ಒಬ್ಬ ವ್ಯಕ್ತಿಗೆ ತಾತ್ವಿಕ ತಿಳಿವಳಿಕೆ ಅಷ್ಟೋ ಇಷ್ಟೋ ಚೆನ್ನಾಗಿ ಗೊತ್ತಾಗಿರುವವರಿರುತ್ತಾರೆ. ಇದು ಒಂದು ತರಹ ಕನ್ನಡಿ ಇದ್ದ ಹಾಗೆ. ಯಾವ ತರಹ ಕನ್ನಡಿ ಎಂದರೆ ಅದರಲ್ಲ ಕೆಲಕೆಲವು ವಿಚಾರಗಳು ಕೆಲಕೆಲವು ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿರುತ್ತವೆ. ಇಂಥವರು ಎಷ್ಟು ಜನ ಆ ಪಕ್ಷದಲ್ಲಿದ್ದಾರೆ? ಇಂಥವರು ಮಂತ್ರಿಯಾಗಬೇಕಾಗಿದೆ. ಅದರಲ್ಲಿ ಅರ್ಹತೆ ಇರುವವರು ಇರಲಿ ಎನ್ನುವುದು ಒಂದೇ ವಿಷಯ.

ಎರಡನೆಯ ವಿಷಯವೆಂದರೆ ದಕ್ಷತೆಯ ಮಾತು ಬೇರೆ, ಅರ್ಹತೆಯ ಮಾತು ಬೇರೆ. ಇವೆರಡಕ್ಕೂ ಸಂಬಂಧವಿದ್ದರೂ ಕೂಡ ದಕ್ಷತೆಯ ವಿಷಯ ಹೇಳುತ್ತೇನೆ. ದಕ್ಷತೆ ಇರಬಹುದು. ಆದರೆ ಸಾಹುಕಾರ ರಾಜ್ಯ ಮಾಡಬಾರದು. ದಕ್ಷತೆಯನ್ನೆಲ್ಲ ಅದಕ್ಕೆ ಉಪಯೋಗಿಸಬಾರದು. ಈ ದೃಷ್ಟಿಯಿಂದ ಕೆಲಸ ಮಾಡಿದರೆ ಅದು ಸಮಾಜವಾದದ ಕಡೆಗೆ ಹೋಗುತ್ತದೆ.

ಸಭಾಪತಿಯವರು.—ಮಾನ್ಯ ಸದಸ್ಯರು resolution ಮೇಲೆ ಮಾತನಾಡಬೇಕು.

ಶ್ರೀ ವಿ. ಎಂ. ದೇವ್.—ತಾತ್ಕಾಲಿಕವಾಗಿ ನಾನು ಕೇಳುವುದಿಷ್ಟೆ. ಇದರಲ್ಲಿ—

"This Assembly recommends to Government to appoint immediately a suitable committee to investigate into the malpractices, nepotism and corruption prevailing in Government and Semi-Government administrative and corporate bodies........."

10-30 A.M.

ಇದು ಬೃಹತ್ ಪ್ರಮಾಣದ ಪ್ರಶ್ನೆಯಲ್ಲಿ ಒಂದು ಭಾಗ ಮಾತ್ರ, ಇದಕ್ಕೆ ಕಾರಣವೇನು? ಮಂತ್ರಿಗಳೇ ಇದರಲ್ಲಿ ತೊಡಗಿರುವಾಗ ಇದಕ್ಕೆ ನೀವೇನು ಹೇಳುತ್ತೀರಿ? ಇದರಲ್ಲಿ ಎರಡು ಭಾಗ ಇದೆ, ಒಂದು ಭಾಗದ ಹೊರೆಯನ್ನು ಕ್ಯಾಬಿನೆಟ್ ಹೊರಬೇಕು, ತಾತ್ವಿಕವಾಗಿ ಹೇಳಿದ್ದನ್ನು ಪ್ರಾಮಾಣಿಕತೆಯಿಂದ ಅದನ್ನು ಟ್ರಾನ್ಸ್‌ಲೇಟ್ ಮಾಡಬೇಕು, ಆದರೆ ಆ ರೀತಿ ಮಾಡುತ್ತಾ ಇಲ್ಲ.

ಮಾಲ್ ಪ್ರ್ಯಾಕ್ಟೀಸ್ ಕೆಳಗಿನ ಮಟ್ಟದಲ್ಲಿದ್ದರೆ ಅದನ್ನು ಹೇಗಾದರೂ ಸರಿಪಡಿಸಬಹುದು ಆದರೆ ಉನ್ನತ ಮಟ್ಟದಲ್ಲಿ ಕೆಟ್ಟದ್ದರೆ ಅದನ್ನು ಸರಿಪಡಿಸುವುದಕ್ಕೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ನೀವೂ ಕೂಡ ಹೊಣೆಗಾರಿಕೆಯನ್ನು ಹೊತ್ತುಕೊಂಡು ನಿಮ್ಮ ಧ್ಯೇಯಕ್ಕನುಗುಣವಾಗಿ ನಡೆಯತಕ್ಕ ವ್ಯಕ್ತಿಗಳು ಮತ್ತು ಸಚಿವರು ಇಲ್ಲದೇ ಇದ್ದರೆ ಅವರನ್ನು ತಕ್ಷಣ ತೆಗೆದು ಹಾಕಬೇಕು. ಇದು ನಿಮಗೆ ಒಬ್ಬರಿಗೇ ಸಂಬಂಧಪಟ್ಟದ್ದು ಆಗಿಲ್ಲ, ಪ್ರಪಂಚಕ್ಕೇ ಈ ರೋಗ ತಗಲಿದೆ ಮತ್ತು ಇದು 1939 ರಿಂದ ಈಚೆಗೆ ಬಹಳ ಜಾಸ್ತಿಯಾಗಿದೆ. ಅದಕ್ಕೆ ಮುಂದೆ ಪಾರ್ಟಿ ಎಂದರೆ ಒಂದು ಲಂಗು ಲಗಾಮು ಇರುತ್ತಾ ಇತ್ತು ಈಗ ಆ ತರಹ ಇಲ್ಲ ಎಲ್ಲಾ ಕುಲಬೆರಕೆಯಾಗಿದೆ. ಆ ದೃಷ್ಟಿಯಿಂದ ನಾನು ಹೇಳುವುದು ಇಷ್ಟೇ, ಪ್ರತಿಯೊಬ್ಬ ಕಾರ್ಯಕರ್ತರಿಗೂ ಕೂಡ ಅದರಲ್ಲೂ ಆಡಳಿತ ಪಾರ್ಟಿಯವರಿಗೆ ಹೊಣೆಗಾರಿಕೆ ಜಾಸ್ತಿ ಇರುತ್ತದೆ ಆದ್ದರಿಂದ ಕ್ಯಾಬಿನೆಟ್‌ಗೆ ಆರಿಸಿಕೊಳ್ಳುವಾಗ ನಿಮ್ಮ ಧ್ಯೇಯಕ್ಕನುಗುಣವಾಗಿ ನಡೆಯತಕ್ಕವರನ್ನು ತೆಗೆದುಕೊಳ್ಳಿ.

ನಾನು ಬಹಳ ದಿವಸಗಳ ಹಿಂದೆ ಒಂದು ಸಂಚಾರಿ ಕಮಿಷನ್—ರೋವಿಂಗ್ ಕಮಿಷನ್—ರಚನೆ ಮಾಡಬೇಕೆಂದು ಹೇಳಿದ್ದೆ ಆ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇವತ್ತು ಅವಕಾಶ ಸಿಕ್ಕಿದ್ದಕ್ಕೆ ಬಹಳ ಸಂತೋಷಪಡುತ್ತೇನೆ. ಒಬ್ಬಿಬ್ಬರು ಅಡ್ಮಿನಿಸ್ಟ್ರೇಟಿವ್ ಆಫೀಸರುಗಳು ಮತ್ತು ಒಂದೆರಡು ಜನ ಆಡಿಟರುಗಳು ಇರತಕ್ಕ ಒಂದು ರೋವಿಂಗ್ ಕಮಿಷನನ್ನು ನೇಮಕಮಾಡಿ, ಅವರಿಗೆ ಪ್ರತಿಯೊಂದು ಆಫೀಸಿಗೂ ಹೋಗಿ ಫೈಲುಗಳನ್ನು ಸೀಸ್ ಮಾಡುವುದಕ್ಕೂ, ಮತ್ತು ಅಲ್ಲಿರತಕ್ಕ ಪೆಟ್ಟಿಗೆ ಮುಂತಾದುವುಗಳಿಗೆ ಬೀಗ ಹಾಕಿದ್ದರೆ ಅವುಗಳನ್ನು ಒಡೆಯುವುದಕ್ಕೂ, ಮತ್ತು ತಪ್ಪು ಮಾಡಿದವರ ಮೇಲೆ ಉಗ್ರ ಡಿಸಿಪ್ಲಿನರಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೂ ಅಧಿಕಾರ ಕೊಡಬೇಕು. ಹಾಗೆ ಮಾಡಿದ್ದೇ ಆದರೆ ಅವರು ದೇಶದ ನಾನಾ ಭಾಗಗಳಿಗೆ ಸಂಚಾರಮಾಡಿ ಅಲ್ಲಿರತಕ್ಕ ಸರ್ಕಾರಿ ಮತ್ತು ಸೆಮಿ ಸರ್ಕಾರಿ ಆಫೀಸುಗಳಿಗೆ ಹೋಗಿ ಅಲ್ಲಿನ ಆಫೀಸುಗಳನ್ನು ತನಿಖೆ ಮಾಡಲು ಅವಕಾಶವಾಗುತ್ತದೆ. ಅವರಿಗೆ ಎರಡು ತರಹ ಕರ್ತವ್ಯಗಳು ಇರಬೇಕು ಒಂದನೆಯದು ಅವರು ಒಂದು ಜಾಗದಲ್ಲಿ ಎರಡು ಅಥವಾ ಮೂರು ದಿನಗಳಿಗಿಂತ ಹೆಚ್ಚಿಗೆ ಇರುವುದಕ್ಕೆ ಅವಕಾಶ ಕೊಡಕೂಡದು. ಮತ್ತು ಎರಡನೆಯದಾಗಿ ಇಂಟೆನ್ಷನ್ ಇಲ್ಲದೇ ಯಾರಾದರೂ ತಪ್ಪುಮಾಡಿದ್ದರೆ ಅದನ್ನು ಸರಿಮಾಡಿಕೊಳ್ಳಿ ಎಂದು ಆಯಾ ಲೋಕಲ್ ಬಾಡೀಸ್‌ಗೆ ಹೇಳಬೇಕು. ಇಷ್ಟೆಲ್ಲಾ ಆದ ಮೇಲೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರದವರಿಗೆ ಅವರು ತಿಳಿಸಬೇಕು. ಅವರ ಮೇಲೆ ಸರ್ಕಾರದವರು ಕಡ್ಡಾಯವಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳಲೇ ಬೇಕೆಂಬ ಒಂದು ಕ್ಲಾಸ್ ಇರಲೇಬೇಕು.

ಈಗ ನಮ್ಮಲ್ಲಿರತಕ್ಕ ಆಂಟಿಕರಪ್ಷನ್ ಬಾಡಿ ಎನಿದೆ ಅದು It is a most highly corrupt body ಎಂದು ಹೇಳುತ್ತಾರೆ ಇದು ಜನಜನಿತವಾಗಿದೆ. ಇದಕ್ಕೆ ಕಾರಣವೇನು? ಯಾರಾದರೂ ಈ ರೀತಿ ಲಂಚ ರುಷುವತ್ತು ನಡೆಯುತ್ತಾ ಇದೆ ನೋಡಿ ಬನ್ನಿ ಎಂದು ಕೂಗಿದರೆ ಮಾತ್ರ ಅವರು ಹೋಗುತ್ತಾರೆ, ಇಲ್ಲದೇ ಇದ್ದರೆ ಇಲ್ಲ, ಎಂದರೆ ಇದಕ್ಕಿಂತ ಅನುಕೂಲ ಸಿಂಧು ಬೇರೆ ಯಾವುದೂ ಇಲ್ಲವೇ ಇಲ್ಲ. ಇದು ಬಹಳ ತಪ್ಪು. ಆ ದೃಷ್ಟಿಯಿಂದ ನಾನು ಹೇಳುವುದಿಷ್ಟೇ ನಾನು ಈ ಮೊದಲೇ ಹೇಳಿದಂತೆ ತಾತ್ಕಾಲಿಕವಾಗಿ ಒಂದು ರೋವಿಂಗ್ ಕಮಿಷನ್ ರಚನೆಮಾಡಿ ಅವರು ಹೇಳದೇ ಕೇಳದೆ ಸಂಸ್ಥಾನದಲ್ಲೆಲ್ಲಾ ತಿರುಗಿ ಸರ್ಕಾರ ಮತ್ತು ಸೆಮಿ ಸರ್ಕಾರ ಅಲ್ಲದೇ ಕಾರ್ಪೋರೇಟ್ ಬಾಡೀಸ್‌ಗಳ ಮೇಲೆ ತನಿಖೆ ಮಾಡುವುದಕ್ಕೆ ಅವರಿಗೆ ವಿಶೇಷವಾದ ಅಧಿಕಾರಗಳನ್ನು ಕೊಡಿ, ಫೈಲ್ ಕೊಡುವುದಿಲ್ಲ ಎಂದರೆ ಬೀಗ ಒಡೆಯುವುದಕ್ಕೆ ಅಧಿಕಾರವಿರಬೇಕು, ಮತ್ತು ಆ ಫೈಲುಗಳನ್ನು ತನಿಖೆ ಮಾಡುವುದಕ್ಕೆ ಅವಕಾಶವಿರಬೇಕು, ಏನೇ ಆಗಲಿ ಅವರು ಒಂದು ಊರಿನಲ್ಲಿ ಮೂರು ದಿನಗಳಿಗಿಂತ ಹೆಚ್ಚಿಗೆ ಇರಬಾರದು. ಇಷ್ಟಾದ ಮೇಲೆ ಈ ಲಂಚ ರುಷುವತ್ತಿನಲ್ಲಿ ಕೈಹಾಕತಕ್ಕ ಕೆಟ್ಟ ಪ್ರವೃತ್ತಿಯ ವ್ಯಕ್ತಿಗಳು ಯಾರಿರುತ್ತಾರೆ ಅವರಿಗೆ ಪುರಸ್ಕಾರ ಕೊಡಬಾರದು, ಅಂತಹವರನ್ನು ಮಂತ್ರಿತ್ವಕ್ಕೆ ನೇಮಕ ಮಾಡಬಾರದು ಆ ರೀತಿ ಮಾಡಿದ್ದೇ ಆದರೆ ಇಷ್ಟೆಲ್ಲಾ ಮಾಡಿದ್ದೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಆ ದೃಷ್ಟಿಯಿಂದ ಈ ನಿರ್ಣಯವನ್ನು ಬಹಳ ಚೆನ್ನಾಗಿ ಯೋಚನೆಮಾಡಿ ತೆಗೆದುಕೊಂಡು ಬಂದಿದ್ದಾರೆ, ಇದನ್ನು ಅರ್ಧ ಭಾಗಕ್ಕೆ ಮಾತ್ರ ಅನ್ವಯಿಸುತ್ತೇವೆ ಎಂದರೆ ಒಬ್ಬ ಮನುಷ್ಯನಿಗೆ ತಲೆ ಕೈಕಾಲು ತೊಡೆ ಎಲ್ಲಾ ಕಡೆಯೂ ಗಾಯವಾಗಿದ್ದು ಕಾಲು ತೊಡೆಗೆ ಮಾತ್ರ ಆಯಿಂಟ್‌ಮೆಂಟ್ ಹಚ್ಚಿ ತಲೆಗೆ ಹಚ್ಚದಿದ್ದರೆ ಅಲ್ಲಿ ಗಾಯ ಮಾಯವಾಗುವುದಿಲ್ಲ, ಹಾಗೆಯೇ ತಾವು ಯಾವುದೇ ಒಂದು ಮಾಡಿದರೂ ಅದು ಮೇಲಿನಿಂದ ಹಿಡಿದು ಕೆಳಗಿನವರೆಗೂ ಅನ್ವಯವಾಗುವಂತೆ ಇರಬೇಕು. ಮುಖ್ಯವಾಗಿ ಒಬ್ಬ ಮನುಷ್ಯ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅದಕ್ಕೆ ತಕ್ಕ ಪ್ರತಿ ಫಲ ಇರಬೇಕು. ಅದಕ್ಕೆ ಪುರಸ್ಕಾರವಿರಬೇಕು. ಅಲ್ಲಿ ಚುನಾವಣೆಗಳು ನಡೆಯಬೇಕಾಗಿದೆ. ಅಂಥ ವೇಳೆಯಲ್ಲಿ ಇಲ್ಲಿ ಮಸೂದೆಗಳನ್ನು ತಂದು ಯಾರಿದ್ದರೇನು, ಯಾರು ಇಲ್ಲದಿದ್ದರೇನ ಎಂದು ಅವುಗಳನ್ನು ಸಾಕಷ್ಟು ಚರ್ಚೆ ಮಾಡದೆ ಪಾಸ್ ಮಾಡಿಸಿ

(ಶ್ರೀ ವಿ. ಎಂ. ದೇವ್)

ಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ಶ್ರೀ ಮುಕ್ಕಣ್ಣಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾವು ಈ ಹಿಂದೆ ಇದ್ದೇ ಅಸೆಂಬ್ಲಿಯಿಂದ ಒಂದಾವರ್ತಿ ವಾಕೌಟ್ ಮಾಡಿದಾಗ ಕೆಲವು ಬಿಲ್ಲುಗಳನ್ನು ಪಾಸ್ ಮಾಡಿಸಿದ್ದಾರೆ. ಇದನ್ನು ತಾವು ಅಷ್ಟು ತಾತ್ಸಾರ ಭಾವನೆಯಿಂದ ನೋಡಬಾರದು, ಇದು ಬಹಳ ಮುಖ್ಯವಾದ ವಿಚಾರ. ಇದೇ ಸಂದರ್ಭದಲ್ಲಿ ನಾನು ಅಧ್ಯಕ್ಷರಲ್ಲಿ ಆ ಬಿಲ್ಲುಗಳ ಮೇಲಿನ ಚರ್ಚೆಯನ್ನು ಪುನಃ ರೀಓಪನ್ ಮಾಡಿಸಬೇಕೆಂದು ಕೇಳಿಕೊಂಡಿದ್ದೆನು. ಆಗ ಅಧ್ಯಕ್ಷರೂ ಕೂಡ ಐ ಷಲ್ ಕನ್‌ಸಿಡರ್ ಇಟ್ ಎಂತ ಹೇಳಿದ್ದರು. ಆದರೆ ರೂಲ್ಸನಲ್ಲಿ ಇನ್‌ಕನ್‌ಸಲ್ಟೇಷನ್ ವಿತ್ ದಿ ಲೀಡರ್ ಎಂತ ಇದೆ, ಅದನ್ನು ನೋಡಿಕೊಂಡು ನಾನು ಪುನಃ ಅಧ್ಯಕ್ಷರಲ್ಲಿ ಆ ವಿಚಾರವನ್ನು ಒತ್ತಾಯಪಡಿಸಲಿಲ್ಲ. ಅಷ್ಟಕ್ಕೆ ಸುಮ್ಮನಾಗಿಬಿಟ್ಟೆ. ಇಷ್ಟನ್ನೆಲ್ಲಾ ನಾನು ಏಕೆ ಹೇಳುತ್ತಿದ್ದೇನೆಂದರೆ ಇದು ಜನತಾ ಸರ್ಕಾರ. ನಾವು ಸರ್ಕಾರದವರ ಕೆಲಸ ಕಾರ್ಯಗಳನ್ನು ಟೀಕಿಸುವುದಕ್ಕಾಗೇ ಇಲ್ಲಿರುವುದು, ಆದರೆ ಎಲ್ಲಾ ಮಂತ್ರಿಗಳೂ ಒಂದೇ ತರಹ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಹೆಚ್ಚು ಜನ ಮಂತ್ರಿಗಳು ತಪ್ಪನ್ನು ಮಾಡುತ್ತಾರೆಂದು ಹೇಳಬಹುದು. ಪ್ರತಿಯೊಂದು ಆಫೀಸಿನಲ್ಲಿಯೂ ಕೆಲಸ ಮಾಡುವುದಕ್ಕೆ ಗುಮಾಸ್ತನಿಂದ ಹಿಡಿದು—ಸೆಕ್ರೆಟರಿಗಳವರೆಗೂ ಇಂತಿಷ್ಟೇ ಕೆಲಸಮಾಡಬೇಕೆಂಬ ಕ್ಲುಪ್ತವಾದ ಮಿತಿ ಇದೆ. ಅಳತೆ ಇದೆ. ಇದನ್ನು ಎಕಾನಮಿ ಕಮಿಟಿಯವರೂ ಹೇಳಿದ್ದಾರೆ. ಆಡಳಿತದಲ್ಲಿ ಆಗಾಗ್ಗೆ ಲೋಪದೋಷಗಳಾಗುವುದು ಸಹಜ. ಅದನ್ನು ಟೀಕಿಸುವುದಕ್ಕಾಗೇ ನಾವೂ ಇಲ್ಲಿಗೆ ಚುನಾಯಿತರಾಗಿ ಬರುತ್ತಿರುವುದು. ನಾವು ಬರೀ ಟೀಕೆಗಳಷ್ಟನ್ನೇ ಅಲ್ಲದೆ ಉತ್ತಮವಾದ ಸಲಹೆಗಳನ್ನೂ ಸಹಾ ಕೊಡುತ್ತಿದ್ದೇವೆ. ಆದುದರಿಂದ ಸರ್ಕಾರದವರು ನಾವು ಹೇಳತಕ್ಕ ವಿಚಾರಗಳಿಗೆ ಹೆಚ್ಚಿನ ಗಮನ ಕೊಡಬೇಕಾದ್ದು ಅಗತ್ಯ. ಕೆಲವು ಸಂದರ್ಭಗಳಲ್ಲಿ ನಾವು ಕಟುವಾಗಿ ಟೀಕೆಗಳನ್ನು ಮಾಡಬೇಕಾಗುತ್ತದೆ. ಆದರೆ ವಿರೋಧ ಪಕ್ಷದವರಿಗೆ ಇಲ್ಲಿಯತನಕ ಎಷ್ಟರಮಟ್ಟಿಗೆ ಪುರಸ್ಕಾರ ದೊರೆತಿದೆ ಎಂಬುದು ಮೇಲೆಯೇ ಎದ್ದು ಕಾಣುತ್ತದೆ. ಇದನ್ನೆಲ್ಲಾ ನೋಡಿದರೆ ಸದಸ್ಯರಿಗೆ ಇಲ್ಲಿ ಮಾತನಾಡುವುದಕ್ಕಿಂತ ಎದ್ದು ಹೋಗುವುದೇ ಲೇಸೆಂದು ಅನಿಸುತ್ತದೆ. ಇಲ್ಲಿ ಅನೇಕ ವಿಚಾರಗಳನ್ನು ಹೇಳಬೇಕಾಗಿರುತ್ತದೆ. ಆದರೆ ಅತ್ತ ಕಡೆ ಚುನಾವಣೆಗಳು ಬೇರೆ ನಡೆಯುತ್ತಿವೆ. ಇದ್ದಷ್ಟೇ ಜನ ಸಾಕೆಂದು ಇಲ್ಲಿ ಬಿಲ್ಲುಗಳನ್ನು ಪಾಸ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟರೆ ಇದು ಖಂಡಿತ ಸರಿಯಾದ್ದಲ್ಲ. ಇಲ್ಲಿ ಮಂತ್ರಿಗಳೂ ಹಾಜರಿರಬೇಕು, ಸದಸ್ಯರುಗಳೂ ಹಾಜರಿರಬೇಕು.

ಸಭಾಪತಿಯವರು.—ಈಗ ಚರ್ಚೆ ನಡೆಯುತ್ತಿರುವ ನಿರ್ಣಯದಲ್ಲಿ ಚುನಾವಣೆಯ ವಿಚಾರ ಬಂದಿಲ್ಲ. ಆದುದರಿಂದ ತಾವು ನಿರ್ಣಯದ ಮೇಲೆ ಮಾತ್ರ ಮಾತನಾಡಬೇಕು.

ಶ್ರೀ ವಿ. ಎಂ. ದೇವ್.—ತಾವು ಇರುವುದರಿಂದ ನಾನು ಏನನ್ನೂ ಈಗ ಹೇಳಲಾರೆ.........

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ಅಧ್ಯಕ್ಷರು ಈ ನಿರ್ಣಯದಲ್ಲಿ ಚುನಾವಣಾ ವಿಚಾರವಿದೆಯೇ ಎಂದು ಕೇಳುತ್ತಿದ್ದಾರೆ, ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ಸ್ವಜನ ಪಕ್ಷಪಾತದ ಬಗ್ಗೆ ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳುತ್ತಿದ್ದರು. ಆದರೆ ಶೇಂದಿ ಈ ಕಡೆ ಕಾಂಗ್ರೆಸ್ ಲಾರಿಯಲ್ಲಿ ಬಂದರೆ, ಷರಾಬು ಆ ಕಡೆ ಇನ್ನೊಂದು ಕಾಂಗ್ರೆಸ್ ಲಾರಿಯಲ್ಲಿ ಬರುತ್ತದೆ ಎಂದು ಕಾಂಗ್ರೆಸ್ಸಿನವರೇ ಹೇಳುತ್ತಿದ್ದಾರೆ. ಇದು ಸ್ವಜನ ಪಕ್ಷಪಾತ ಎಷ್ಟರ ಮಟ್ಟಿಗೆ ಆಗುತ್ತದೆಂದು ಹೇಳುವುದಕ್ಕೆ ಇದಕ್ಕಿಂತಲೂ ಹೆಚ್ಚಿನ ಉದಾಹರಣೆ ತಮಗೆ ಬೇಕೆ ?

ಶ್ರೀ ವಿ. ಎಂ. ದೇವ್.—ಆ ವಿಚಾರಗಳನ್ನೆಲ್ಲಾ ಸರಿಪಡಿಸಲು ಒಂದು ಸಮಿತಿಯನ್ನು ನೇಮಕ ಮಾಡುವುದು ಅಗತ್ಯ ಎಂದು ಹೇಳಿ ಅಧ್ಯಕ್ಷಿಣಿಯರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಈಗ ಸಭೆಯ ಮುಂದೆ ಬಂದಿರತಕ್ಕ ಖಾಸಗಿ ನಿರ್ಣಯದ ಬಗ್ಗೆ ಈಗಾಗಲೇಅನೇಕ ಮಾನ್ಯ ಸದಸ್ಯರುಗಳು ಸರಿಯಾದ ರೀತಿಯಲ್ಲೇ ಹೇಳಿದ್ದಾರೆ. ನಾನಾದರೋ ಈ ನಿರ್ಣಯವನ್ನು ಸ್ವಾಗತಿಸುತ್ತಾ ಈ ಸರ್ಕಾರ ಎಷ್ಟರಮಟ್ಟಿಗೆ ಆದಿಯಿಂದ ಹಿಡಿದು ಮುಂದಿಯವರೆಗೂ ಲಂಚಾ, ಭ್ರಷ್ಟಾಚಾರ, ಇತ್ಯಾದಿ ದೇಶದಲ್ಲಿ ಕಾಂಗ್ರೆಸ್ ರಾಜ್ಯ ಸ್ಥಾಪನೆಯಾದ ಮೇಲೆ ಹೇಗೆ ನಡೆಯುತ್ತಿದೆ ಎಂಬುದನ್ನು ಈ ಸಭೆಯಲ್ಲೂ, ಹೊರಗಡೆ ಬಹಿರಂಗ ಸಭೆಗಳಲ್ಲೂ ಅನೇಕ ನಾಟಕಗಳ ರೂಪದಲ್ಲೂ ಎತ್ತಿ ತೋರಿಸುತ್ತಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬಂದವೇಲಂತೂ ದೇಶದಲ್ಲಿ ಈ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಲಂಚಾವತಾರ ಬೃಹದಾಕಾರವನ್ನು ತಾಳಿರುತ್ತವೆ. ಕಾಂಗ್ರೆಸ್ ಸರ್ಕಾರ ದೇಶದ ಆಡಳಿತವನ್ನು ವಹಿಸಿಕೊಂಡ ಮೇಲೆ ನಮ್ಮ ದೇಶದಲ್ಲಿ ಏನೇನು ಅನಾಹುತಗಳಾಗಿವೆ ಎಂಬುದಕ್ಕೆ ಒಂದೆರೆಡು ಉದಾಹರಣೆಗಳನ್ನು ಕೊಡುತ್ತಾ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಕೇಂದ್ರ ಸರಕಾರದಲ್ಲಿದ್ದಂಥ ಮಂತ್ರಿಗಳ ಮೇಲೆ ಹೊರಿಸಿದಂತಹ ಭ್ರಷ್ಟಾಚಾರ ಹಾಗೂ ಲಂಚದ ಅಪಾದನೆಗಳನ್ನು ಮಾಡಿದುದರಿಂದ ಕೆಲವು ಮಂತ್ರಿಗಳು

ರಾಜೀನಾಮೆ ಕೊಡಬೇಕಾದ ನಿದರ್ಶನಗಳು ನಮ್ಮಲ್ಲಿ ಸಹಸ್ರಾರು ಇವೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಮೊನ್ನೆ ತಾನೆ ಲೋಕಸಭೆಯಲ್ಲಿ ನಡೆದ ಮಾಳವೀಯರವರ ಪ್ರಕರಣ ಹಾಗೂ ಈಚೆಗೆ ಕೈರಾನರವರ ಮೇಲೆ ಮತ್ತು ಅವರ ಮಂತ್ರಿಮಂಡಲದ ಮೇಲೆಹೊರಿಸಿರುವ ಅಪಾದನೆಗಳು.

Sri B. D. JATTI (Minister for Finance).—It will not be correct to make a reference to the Minister and persons who are not in a position to defend themselves in this House. I would request the Hon. Member not to mention names of Ministers and Members who are not here.

Sri G. V. GOWDA (Palya).—Some allegations have been made against some Ministers. It is a fact and the whole world knows it.

Sri B. D. JATTI.—My friend is a lawyer and if he feels he is doing the just thing, let him proceed.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ರೆಫರೆನ್ಸ್‌ಅನ್ನು ಮಾಡುವಾಗ ಕೈರಾನ್‌ನವರ ರೆಫರೆನ್ಸು ಹೇಳಿದರೆ, ಅದು ಸಾರ್ವಜನಿಕರ ಮುಂದೆ ಈಗಾಗಲೇ ಬಂದಿರುವುದರಿಂದ ಅದನ್ನು ಇಲ್ಲಿ ಹೇಳುವುದಕ್ಕೆ ಅಭ್ಯಂತರವೇನೂ ಇರಲಾರದು ಎಂದು ನನ್ನ ಭಾವನೆ.

ಸಭಾಪತಿಯವರು.—ಮಾನ್ಯ ಸದಸ್ಯರು ಹೆಸರುಗಳನ್ನು ಹೇಳುವ ಗೋಜಿಗೆ ಹೋಗಬಾರದು. ಇನ್ನುಮುಂದೆಯಾದರು ಹೆಸರುಗಳನ್ನು ಹೇಳಬೇಡಿ.

ಶ್ರೀ ಕೆ. ಲಕ್ಕಪ್ಪ.—ಬಹುಶಃ ನಮ್ಮ ಅರ್ಥಿಕ ಮಂತ್ರಿಗಳು ಹಿಂದೆ ಅವರೇ ಮಂತ್ರಿಮಂಡಲ ನಡೆಸುತ್ತಿದ್ದ ಕಾಲದಲ್ಲಿ ಅದಂತಹ ನಡವಳಿಕೆಗಳನ್ನು ಮತ್ತು ಇದೇ ಪಕ್ಷದವರು ಮಾಡಿದಂತಹ ವಿಚಾರಗಳನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಅವಕಾಶವಿದೆ. ನಮ್ಮ ಅರ್ಥಿಕ ಮಂತ್ರಿಗಳು ಇಲ್ಲಿಯೇ ಇರುವುದರಿಂದ ಅದು ಅವರಿಗೂ ಗೊತ್ತಿದೆ. ಸಾರ್ವಜನಿಕರು, ಸಂಘ ಸಂಸ್ಥೆಗಳು ಮತ್ತಿತರ ಸದಸ್ಯರುಗಳು ಲಂಚದ ಅಪಾದನೆಗಳನ್ನು ಮಾಡಿ ಅದು ಸರಕಾರಕ್ಕೆ ಬಂದ ಮೇಲೂ ಲಂಚಗುಳಿತನ, ಭ್ರಷ್ಟಾಚಾರ ಇತ್ಯಾದಿಗಳು ಇನ್ನೂ ಜಾಸ್ತಿಯಾಗುತ್ತಿದೆ ಎಂದು ಕೇಂದ್ರದ ಗೃಹಸಚಿವರಾದ ಶ್ರೀಮಾನ್ ನಂದಾರವರು ಹಾಗೂ ಪಂಡಿತ ನೆಹರೂರವರು ಕೂಡ ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ಸರಕಾರ ಈ ಭ್ರಷ್ಟಾಚಾರವನ್ನು ಎಲ್ಲಿಯವರೆಗೆ ತೆಗೆದುಕೊಂಡುಹೋಗಿದ್ದಾರೆ ಎಂದರೆ ಅಧಿಕಾರಿಗಳು ಹೇಳಿದುದನ್ನು ಮಾಡಿಕೊಡಬೇಕು ಮತ್ತು ತಾವೂ ಅಧಿಕಾರದಲ್ಲಿರಬೇಕು ಎಂದು ಹೋಗುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಾವು ಈ ದೇಶವನ್ನು ಮುಂದಕ್ಕೆ ತರಬೇಕೆಂದು ಹೇಳುತ್ತಾ ತಮ್ಮ ಅಧಿಕಾರದ ದೆಸೆಯಿಂದ ಅಧಿಕಾರಿಗಳ ಮೂಲಕ ಇಂತಹ ಸರಕಾರವನ್ನುಳಿಸಬೇಕೆಂದು ಮಾಡಿರತಕ್ಕ ನಿದರ್ಶನಗಳೂ ಸಾವಿರಾರು ಇವೆ. ದೇಶದ ಜನತೆಯ ಮುಂದೆ ತಮ್ಮ ತತ್ವವನ್ನು ದೇಶದಲ್ಲಿ ಎಲ್ಲಾ ಕಡೆಯಲ್ಲೂ ಹರಡಿ ಅಂತಹ ಪಾಲಿಸಿಗೆ ಜನರ ವಿಶ್ವಾಸ ಪಡೆದು ನಿಷ್ಪಕ್ಷಪಾತವಾಗಿ ಕೆಲಸ ಮಾಡಿದಂತಹ ನಿದರ್ಶನಗಳು ಯಾವುದೂ ಇಲ್ಲ. ಜನತೆಗೆ ತೊಂದರೆ ಮಾಡಿರುವಂತಹ ನಿದರ್ಶನಗಳು ಬಹಳವಾಗಿವೆ. ತಾವು ಸರಕಾರ ನಡೆಸಬೇಕು ಎಂದು ಅಧಿಕಾರಿಗಳ ಕೈಯಲ್ಲೇ ಎಲ್ಲಾ ಅಧಿಕಾರವನ್ನು ಸರಕಾರದ ಯಂತ್ರವನ್ನು ಕೊಟ್ಟು ನಡೆಯುವಂತೆ ಮಾಡಲು ಆ ಜನಕ್ಕೆ ಬೆಂಬಲ ಕೊಡುತ್ತಿದ್ದಾರೆಯೇ ವಿನಾ ಬೇರೇನೂ ಮಾಡುತ್ತಿಲ್ಲ, ಅಧಿಕಾರವನ್ನು ವಹಿಸಿಕೊಂಡಿರುವ ಕಾಂಗ್ರೆಸ್ಸು ಸರಕಾರ ಅಧಿಕಾರಿಗಳ ಮೂಲಕ ತಮ್ಮ ಅಧಿಕಾರವನ್ನುಳಿಸಬೇಕೆನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ. ಒಂದು ನಿದರ್ಶನ ಇಲ್ಲಿ ಹೇಳಿದರೆ ತಪ್ಪಾಗುವುದಿಲ್ಲ. ಯಾವಾಗ ಒಂದು ಅಧಿಕಾರಿಯು ಮೇಲೆ ಲಂಚದ ಅಪಾದನೆ ಸ್ಪಷ್ಟವಾಗಿದೆ ಎಂದುಹೇಳಿ ಸರಕಾರಕ್ಕೆ ಗೊತ್ತಿದ್ದರೂ ಕೂಡ ಅಂತಹ ಅಧಿಕಾರಿಗಳಿಗೆ ಸರಕಾರ ರಕ್ಷಣೆ ಕೊಟ್ಟಿರತಕ್ಕ ನಿದರ್ಶನಗಳು ಸಹಸ್ರಾರು ಇವೆ. ಇದರಲ್ಲಿ ಸ್ವಜನ ಪಕ್ಷಪಾತವೇನಿಲ್ಲವೆಂದು ಇಲ್ಲಿ ಉತ್ತರ ಹೇಳಿಬಿಟ್ಟರು. ನಮ್ಮ ನ್ಯಾಯಾಂಗ ಮಂತ್ರಿಗಳು ಹಿಂದೆ ಇಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಅವರ ಇಲಾಖೆಯಲ್ಲಿ ಅವರ ಪಕ್ಷಕ್ಕೆ ಸೇರಿದಂತಹ ಪಬ್ಲಿಕ್ ಪ್ರಾಸಿಕ್ಯೂಟರುಗಳು, ಸರಕಾರಿ ಪ್ಲೀಡರುಗಳು ಎಂದು ಒಂದೇ ಕೋಮಿಗೆ ಸೇರಿದವರನ್ನು ನೇಮಿಸಿದ್ದಾರೆಯೇ ಎಂದು ಕೇಳಿದಾಗ ಅವರು ನನ್ನ ಜಾತಿಯೇ ನನಗೆ ಗೊತ್ತಿಲ್ಲವೆಂದು ಹೇಳಿದರು. ಮಂತ್ರಿಗಳಾಗಿ ನನ್ನ ಜಾತಿ ಗೊತ್ತಿಲ್ಲ ಎಂದು ಹೇಳುವಂತಹ ಮಂತ್ರಿಗಳು ಕೂಡ ಈ ಮಂತ್ರಿಮಂಡಲದಲ್ಲಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ನಮ್ಮ ಜಾತಿಯೇ ಗೊತ್ತಿಲ್ಲ ಎನ್ನತಕ್ಕ ಕೀಳು ರೀತಿಯಲ್ಲಿ ಅಧಿಕಾರಿಗಳನ್ನು ಡಿಫೆಂಡು ಮಾಡಿಕೊಳ್ಳುವಂತಹ ಮಂತ್ರಿ ಮಂಡಲದಲ್ಲಿದ್ದಾರೆನ್ನುವುದು ಸ್ಪಷ್ಟವಾಗಿದೆ. ಇದಕ್ಕಿಂತ ಬೇರೆ ನಿದರ್ಶನವನ್ನೇನೂ ಹೇಳಬೇಕಾಗಿಲ್ಲ. ಈ ಬಗ್ಗೆ ನೇರವಾಗಿ ಸರಕಾರಕ್ಕೆ ತಿಳಿಸಿದಾಗಲೂ ಯಾವ ಒಂದು ನಿರ್ಧಾರವನ್ನೂ ತೆಗೆದುಕೊಳ್ಳದೇ ಈ ರೀತಿ ಆಗಿರತಕ್ಕ ಅನ್ಯಾಯಗಳನ್ನು ಸರಿಯಾಗಿ ಮಾಡದೇ ಇರತಕ್ಕದ್ದು ಸ್ಪಷ್ಟವಾಗಿದೆ. ಸರಕಾರ ತನ್ನ ಪಕ್ಷಕ್ಕೆ ಸೇರಿದವರನ್ನು, ಮತ್ತು ತಮಗೆ ಬೇಕಾದವರನ್ನು ನೇರವಾಗಿ ನೇಮಿಸಿಕೊಳ್ಳುವುದು, ಮತ್ತು ತಮಗೆ ಬೇಕಾದವರಿಗೆ

(ಶ್ರೀ ಕೆ. ಲಕ್ಕಪ್ಪ)

ಪ್ರಮೋಷನ್ನುಗಳನ್ನು ಕೊಡುವುದು ಇಂತಹ ಉದಾಹರಣೆಗಳು ನಮ್ಮ ಸರಕಾರದ ಮುಂದೆ ಇವೆ. ಲಂಚದ ಅಪಾದನೆಯ ಮೇಲೆ ಮತ್ತು ಅಧಿಕಾರಿಗಳು ಮಾಡುತ್ತಿರುವ ಭ್ರಷ್ಟಾಚಾರದ ವಿಚಾರಗಳು ಪ್ರಬಲವಾಗಿರುವುದು ಸರಕಾರಕ್ಕೆ ಗೊತ್ತಿದ್ದರೂ ಅಂತಹ ಅಧಿಕಾರಿಗಳೇ ಈ ಸರಕಾರಕ್ಕೆ ಬೇಕಾಗಿದೆ. ಇವರಿಂದ ನಿಷ್ಪಕ್ಷಪಾತವಾದ ಕೆಲಸವಾಗಬೇಕೆಂದರೆ ಹೇಗೆ ತಾನೇ ಆಗಲು ಸಾಧ್ಯ. ಯಾವಾಗ ಪಕ್ಷ ಪಂಗಡಗಳ ಗುಂಪುಗಳನ್ನು ಬೆಳೆಸಬೇಕೆಂದು ಹೊರಟರೋ ಅದರಂತೆ ಆಡಳಿತ ನಡೆಸಲು ಹೊರಟರೆ ಜನತೆಗೆ ಹೆಚ್ಚಿನ ಸಹಾಯ ದೊರೆಯುವುದು ಕಷ್ಟವಾಗುತ್ತದೆ. ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡಬೇಕೆಂದು ಅಧಿಕಾರಿಗಳು ಮಾಡುವ ಕೆಲಸದಲ್ಲಿ ಸರಕಾರ ಕೈಹಾಕಿ ಆಡಳಿತದ ಕೆಲಸ ಕಾರ್ಯಗಳಿಗೆ ಅಡ್ಡಿ ಮಾಡಿದಂತಹ ಪ್ರಸಂಗಗಳು ಬೇಕಾದಷ್ಟಿವೆ. ತಮಗೆ ಬೇಕಾದವರು ಎಂದು ಕೆಲಸಗಳನ್ನು ಕೊಟ್ಟಿರುವ ನಿದರ್ಶನಗಳೂ ಬೇಕಾದಷ್ಟಿವೆ. ಇಂತಹ ನಿದರ್ಶನಗಳನ್ನೇ ಹೇಳಬೇಕು ಎಂದರೆ, ತುಮಕೂರಿನಲ್ಲಿ ಆದದ್ದು ಒಂದು ವಿಚಾರ ಇಲ್ಲಿ ಹೇಳುತ್ತೇನೆ. ಸ್ಪಷ್ಟವಾದ ಮತ್ತು ನೇರವಾದ ಆಪಾದನೆಯನ್ನು ಕಾಗದದಲ್ಲಿ ಬರೆದು ಕೊಟ್ಟು ಅದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ನಮ್ಮ ಅರ್ಥ ಸಚಿವರಿಗೂ ಹೇಳಿದ್ದೆ ಮತ್ತು ಈ ಸಭೆಯಲ್ಲಿಯೂ ಅದರ ಬಗ್ಗೆ ಪ್ರಶ್ನೆ ಮಾಡಿದಾಗ ಅಂತಹದೇನೂ ಆಗಿಲ್ಲ ಎಂದು ಉತ್ತರ ಹೇಳಿದ್ದಾರೆ. ನಾವು ಯಾವಾಗಲೂ ಈ ಸಭೆಯಲ್ಲಿ ಆಪಾದನೆಗಳನ್ನು ಮಾಡುವಾಗ ಬಹಳ ಜವಾಬ್ದಾರಿಯಿಂದ ಮಾಡುತ್ತೇವೆ. ಇದೇ ತುಮಕೂರಿನಲ್ಲಿ, ಒಬ್ಬ ತಹಶೀಲುದಾರರಿದ್ದಾರೆ. ಅವರು ಕೋಳಿಮೊಟ್ಟೆಯ ಆರ್ಡರುಗಳನ್ನು ಪಡೆಯುತ್ತಿದ್ದಾರೆ. ಈಗ ಕೋಳಿಯನ್ನೇ ಬಿಡುವುದಿಲ್ಲ. ಇನ್ನು ಮೊಟ್ಟೆ ಬಿಡುತ್ತಾರೆಯೇ ? ಇಲ್ಲ. ಇವರ ಕೆಲಸವೇನು ? ಇವರ ಕಾರ್ಯ ದಕ್ಷತೆ ಏನು ? ಅಧಿಕಾರವನ್ನು ಉಪಯೋಗಿಸುವುದಕ್ಕೆ ಶಕ್ತಿಯಿಲ್ಲದೇ ಇರುವಂತಹ ಅಧಿಕಾರಿಗಳನ್ನು ಈ ತಾಲ್ಲೂಕಿನಲ್ಲೇಕೆ ಇರಿಸಿದ್ದೀರಿ ? ಇದನ್ನೆಲ್ಲಾ ತಾವು ಯೋಚನೆ ಮಾಡಿದ್ದೀರಾ ? ಯಾವ ಒಬ್ಬ ರೈತ ಒಂದು ಅರ್ಜಿಯನ್ನು ಅವರ ಹತ್ತಿರ ತೆಗೆದುಕೊಂಡು ಹೋದರೂ ಕೂಡ ಅಧಿಕಾರಿಗಳಿಗೆ ಲಂಚವನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ (in kinds) ಕೊಡದೇ ಹೋದರೆ ಯಾವ ಕೆಲಸವೂ ಆಗುವಂತಿಲ್ಲ. ಇಂತಹ ನಿದರ್ಶನಗಳನ್ನು ಎಷ್ಟೋ ಹೇಳಬಹುದು. ಇದರ ಬಗ್ಗೆ ಆರೋಪಣೆ ಮಾಡಿ ರೆವಿನ್ಯೂಮಂತ್ರಿಗಳಿಗೆ ಬರೆದು ಕೊಟ್ಟಿದ್ದರೂ ಇದುವರೆಗೇನೂ ಕಾರ್ಯ ರೂಪಕ್ಕೆ ಬರಲಿಲ್ಲ. ಅಲ್ಲದೆ ಈ ಆರೋಪಣೆ ನಿಜವೇ, ಸುಳ್ಳೇ ಎನ್ನುವುದಕ್ಕೆ ಇದುವರೆಗೆ ಎನ್‌ಕ್ವೈರಿಯೇನೂ ಮಾಡಲಿಲ್ಲ. ಸ್ಪಷ್ಟವಾಗಿ ಲಂಚದ ಅಪಾದನೆ ಮಾಡಿ ಭ್ರಷ್ಟಾಚಾರ ನಡೆದಿದೆಯೆಂದು ಹೇಳಿದ್ದರೂ ಇದುವರೆಗೆ ಎನ್‌ಕ್ವೈರಿ ಕೂಡ ಆಗಿಲ್ಲ. ಇವರಿಗೆ ಎಲ್ಲಾ ಕೆಲಸಗಳೂ ಬೆಂಗಳೂರಿನಲ್ಲಿಯೇ ಫೋನ್‌ಗಳ ಮೂಲಕ ನಡೆಯಬೇಕು. ಆದರೆ ಇಲ್ಲಿ ಎನ್‌ಕ್ವೈರಿ ಮಾಡಿ ಇಂತಹ ಅಧಿಕಾರಿಗಳನ್ನು ಇಲ್ಲಿಂದ ತೆಗೆಯಬೇಕೆಂದು ಹೇಳಿದ್ದರೂ ಏನೂ ಮಾಡಿಲ್ಲ. ಈ ಅಧಿಕಾರಿಗಳಿರುವಾಗ ಅಲ್ಲಿ ಎನ್‌ಕ್ವೈರಿ ಮಾಡುವಾಗ ಇದ್ದರೆ ಸರಿಯಾಗಿರುವುದಿಲ್ಲ. ಇವರನ್ನು ತೆಗೆಯಬೇಕೆಂದು ಹೇಳಿದ್ದರೂ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇದರಿಂದ ಆಡಳಿತದಲ್ಲಿ ದಕ್ಷತೆ ಎಷ್ಟು ಮಟ್ಟಿಗೆ ಸಾಧನೆಯಾಗುತ್ತಿದೆ ಎನ್ನುವುದು ತಿಳಿಯುತ್ತದೆ. ಭ್ರಷ್ಟಾಚಾರ, ಲಂಚ ಹೆಚ್ಚಾಗಿದೆ ಎಂದು ಹೇಳುವಾಗ ಎಲ್ಲಿ ಹೆಚ್ಚಾಗಿದೆ ಎಂದು ಕೇಳಬಹುದು. ಉದಾಹರಣೆಯಾಗಿ ನಮ್ಮ ತುಮಕೂರಿನ ಬಳಿ ಒಂದು ಆಸ್ಪತ್ರೆಯಲ್ಲಿ ಒಬ್ಬರು ಸರ್ಜನ್ನರಾಗಿರುವವರನ್ನು ಒಬ್ಬ ಪೇಷಂಟು ಬಹುಬಡವರಾಗಿರುವವರು ಒಂದು ಆಪರೇಷನ್ನು ಅರ್ಜೆಂಟಾಗಿ ಆಗಬೇಕೆಂದು ಕೇಳಿಕೊಂಡಾಗ ಅವರು ನೂರು ರೂಪಾಯಿ ಕೊಡಬೇಕೆಂದು ಹೇಳಿದರು. ಕೊಟ್ಟರೆ ಆಪರೇಷನ್ನು ಮಾಡುತ್ತೇವೆ. ಇಲ್ಲದಿದ್ದರೆ ಇಲ್ಲ ಎಂದರು. ಅದಕ್ಕೆ ಅವರು ಆಗಲೀ ಎಂದು ಒಪ್ಪಿಕೊಂಡರೂ ಅಲ್ಲೇ ಪಕ್ಕದಲ್ಲಿದ್ದ ಒಬ್ಬ ಸಣ್ಣ ಡಾಕ್ಟರಾಗಿರುವವರು ಆಪರೇಷನ್ನಾದಮೇಲೆ ಕೇಳಿದರೆ ದುಡ್ಡು ಕೊಡುವ ಶಕ್ತಿಯಿಲ್ಲವೋ ಏನೋ, ಮೊದಲೇ ದುಡ್ಡು ಬೇಕೆಂದು ಕೇಳಿದರು. ಈ ಸಂದರ್ಭದಲ್ಲಿ ಆಪರೇಷನ್ನು ಮಾಡುವಾಗ ಅವನ ಹೊಟ್ಟೆಯಲ್ಲಿಯೇ ಕತ್ತರಿಯನ್ನು ಬಿಟ್ಟು ಬಿಟ್ಟು ಆಪರೇಷನ್ನು ಮಾಡಿದರೆ ಸರಿಯೇ ? ಇಂತಹ ಅಧಿಕಾರಿಗಳು ಆಸ್ಪತ್ರೆಯಲ್ಲಿರಲು ಲಾಯಕ್ಕಾದವರೇ ?

11-00 A.M.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕತ್ತರಿ ಎಷ್ಟು ಇತ್ತು ?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬನ್ನಿ ಕರೆದುಕೊಂಡು ಹೋಗಿ ರೋಗಿಯಿಂದ ಹೇಳಿಕೆ ಕೊಡಿಸುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಒಬ್ಬ ರೈತ ಒಂದು ಅರ್ಜಿಯನ್ನು ತಾಲ್ಲೂಕು ಅಫೀಸಿಗಾಗಲಿ, ಸಬ್ ಡಿವಿಜನ್ ಆಫೀಸಿಗಾಗಲಿ, ಲ್ಯಾಂಡ್ ಅಕ್ವಿಸಿಷನ್ ಆಫೀಸಿಗಾಗಲಿ, ಡೆಪ್ಯುಟಿ ಕಮಿಷನರ ಆಫೀಸಿಗಾಗಲಿ ಕೊಟ್ಟರೆ, ಎಷ್ಟು ಸಾರಿ ಅಲೆದರೂ ತೀರ್ಮಾನ ಮಾಡುವ ಹಾಗೇ ಇಲ್ಲ. ಅದನ್ನು ತೀರ್ಮಾನ ಮಾಡುವುದಕ್ಕೆ ಇಷ್ಟು ಹಣ ಕೊಡಬೇಕೆಂದು ಏನಾದರೂ ಒಂದು ಸರ್‌ಕ್ಯುಲರಾದರೂ ಕಳುಹಿಸಿ, ರೈತ ಕೊಟ್ಟ ಕೆಲಸವಾದರೂ ಬೇಗವಾಗಲಿ. ಇಂಥ ದಕ್ಷ ಆಡಳಿತವನ್ನು ನಡೆಸುತ್ತಿದ್ದಾರೆ. ಲಂಚಗೂಳಿತನ ತಾಲ್ಲೂಕು ಆಫೀಸಿನಿಂದ ಹಿಡಿದು ರೆವಿನ್ಯೂ ಸೆಕ್ರೆಟೇರಿಯಟ್‌ವರೆಗೆ ಬೃಹದಾಕಾರವಾಗಿ ಬೆಳೆದಿದೆ, ಇಂಥದರಲ್ಲಿ ದೇಶಕ್ಕೆ ಎಷ್ಟರಮಟ್ಟಿಗೆ ಸುಭದ್ರವಾದ ಆಡಳಿತವನ್ನು ಕೊಡುವುದಕ್ಕೆ ಸಾಧ್ಯ ಅನ್ನುವುದನ್ನು ಯೋಚನೆ ಮಾಡಬೇಕು. ತಾಲ್ಲೂಕು ಬೋರ್ಡುಗಳು, ಮುನಿಸಿಪಾಲಿಟಿಗಳು, ಖಾದಿ ಬೋರ್ಡುಗಳು, ಅದರಲ್ಲಿಯೂ ಸಾಂಘಿಕ ಸಂಸ್ಥೆಗಳಲ್ಲಿರತಕ್ಕ ದುರಾಚಾರದ ಬಗ್ಗೆ ನಿದರ್ಶನಗಳನ್ನು ನಾವು ಕೊಡಬೇಕೆಂದರೆ, ಈ ಸಭೆಯಲ್ಲಿ ಅವುಗಳ ಬಗ್ಗೆ ವಿಪುಲವಾದ ಚರ್ಚೆ ಈಗಾಗಲೇ ನಡೆದಿದೆ. ಖಾದಿ ಬೋರ್ಡಿನಲ್ಲಿ ನಡೆದಿರುವ ಅವ್ಯವಸ್ಥೆ, ಭ್ರಷ್ಟಾಚಾರ, ಲಂಚಗೂಳಿತನವನ್ನು ತೊಳೆದುಹಾಕುವುದಕ್ಕೆ ಯಾವ ಕಾರ್ಯಕ್ರಮವನ್ನೂ ಇದುವರೆಗೆ ತೆಗೆದುಕೊಂಡಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶರಾವತಿ ಬಿಟ್ಟುಬಿಟ್ಟಿರಿ.

ಶ್ರೀ ಕೆ. ಲಕ್ಕಪ್ಪ.—ನಿಮಗೆ ಮಾತನಾಡಲು ಚಾನ್ಸ್ ಇಲ್ಲ ತಾನೆ ?

ಹಿಂದೆ ಚುನಾವಣೆಗಳ ಕಾಲದಲ್ಲಿ ಇವರು ಎಷ್ಟರ ಮಟ್ಟಿಗೆ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರು ಅನ್ನುವುದನ್ನು ಸ್ವಲ್ಪ ಹೇಳುತ್ತೇನೆ. ಕೊರಟಗೆರೆಯಲ್ಲಿ ಉಪಚುನಾವಣೆಯಲ್ಲಿ ನಡೆಸಿರತಕ್ಕಂಥ ಭ್ರಷ್ಟಾಚಾರ, ದುರಾಚಾರ ಹೇಳತೀರದು ಎಷ್ಟು ಜನ ಮಂತ್ರಿಗಳು ಈ ಉಪಚುನಾವಣೆ ಕಾಲದಲ್ಲಿ ಅಲ್ಲಿಗೆ ಹೋದದ್ದು. 20-22 ಜನ ಮಂತ್ರಿಗಳು ಸರಕಾರದ ವಾಹನಗಳನ್ನು ಉಪಯೋಗಿಸಿಕೊಂಡು, ಸರಕಾರದ ಆಡಳಿತದ ಮರೆಯಲ್ಲಿ, ಅಧಿಕಾರಿಗಳ ಮರೆಯಲ್ಲಿ, ಭ್ರಷ್ಟಾಚಾರವನ್ನು ನೀವು ಮಾಡಲಿಲ್ಲವೆ? ಎಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಉಪಚುನಾವಣೆ ಸಂಬಂಧದಲ್ಲಿ ನೀವು ಹೋಗಲಿಲ್ಲ. ಎಷ್ಟು ಜನ ಪೋಲಿಂಗ್ ಏಜೆಂಟುಗಳನ್ನು ಹಾಕಿಕೊಂಡಿದ್ದಿರಿ? ಅದೇ ರೀತಿಯಲ್ಲಿ ಈಗ ನಡೆಯಬೇಕಾದಂಥ ಉಪಚುನಾವಣೆಗಳಲ್ಲಿ ಅಷ್ಟೇ ಭ್ರಷ್ಟಾಚಾರ ಮಾಡಬೇಕೆಂದು ಸರಕಾರ ನಿಂತಿದೆ. ಅದಕ್ಕೆ ಉದಾಹರಣೆಯಾಗಿ ನಿಮ್ಮ ಸಂಸ್ಥೆಯಲ್ಲಿಯೇ ಇರತಕ್ಕಂಥ ಮಾಜಿ ಮಂತ್ರಿಗಳು ಒಬ್ಬರು ಮಾಡಿರತಕ್ಕಂಥ ಆರೋಪಣೆಗಳು ಸಾಲದೇ ? ಇದಕ್ಕೆ ಬೇರೆ ನಿದರ್ಶನ ಬೇಕೆ ? ಚುನಾವಣೆಯಲ್ಲಿ ಸರಕಾರದವರು ನೇರವಾಗಿ ಭ್ರಷ್ಟಾಚಾರ ಮಾಡುತ್ತಾ ಇದ್ದಾರೆ. ಓಟರುಗಳಿಗೆ ವ್ಹಿಸ್ಕಿ, ಸಾರಾಯಿ ಶೀಸೆಗಳಲ್ಲಿ ತುಂಬಿ ಒದಗಿಸುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾಜಿ ಮಂತ್ರಿಗಳು ಒಬ್ಬರು ಅಂತ ಶ್ರೀ ಲಕ್ಕಪ್ಪನವರು ಹೇಳಿದರು ಕಡಿದಾಳ್ ಮಂಜಪ್ಪನವರೂ ಮಾಜಿ ಮಂತ್ರಿಗಳು, ಇಲ್ಲಿದ್ದಾರೆ. ಅವರೊಳಗೆ ಯಾರು ಅಂತ ಹೇಳುವುದು ಒಳ್ಳೆಯದು. ಹೆಸರು ಹೇಳದಿದ್ದರೂ Ex-Law Minister, Ex-Revenue Minister, ಹೀಗೆ ಹೇಳಬಹುದು.

ಸಭಾಪತಿಯವರು.—ಹೆಸರು ಹೇಳುವುದು ಬೇಡ.

ಶ್ರೀ ಕೆ. ಲಕ್ಕಪ್ಪ.—ಅಪಾದನೆಯನ್ನು ನೇರವಾಗಿ ತುರುವೇಕೆರೆ ಚುನಾವಣೆಯಲ್ಲಿ ಸೋತ ಮಾಜಿ ಮಂತ್ರಿಗಳಾದ ಶ್ರೀ ಟಿ ಸುಬ್ರಹ್ಮಣ್ಯರವರು ಮಾಡಿದ್ದಾರೆ.

ಸಭಾಪತಿಯವರು.—ಹೆಸರುಗಳನ್ನು ಹೇಳಬೇಡಿ.

ಶ್ರೀ ಕೆ. ಲಕ್ಕಪ್ಪ.—ಮಾಜಿ ಮಂತ್ರಿಗಳೊಬ್ಬರು, ಆಡಳಿತ ಪಕ್ಷದ ಹಿರಿಯ ನಾಯಕರೊಬ್ಬರು ಇಂಥ ಸ್ಪಷ್ಟವಾದ ಆರೋಪಣೆ ಮಾಡುವಾಗ, ಈ ಸರಕಾರದ ಆಡಳಿತದಲ್ಲಿ ಭ್ರಷ್ಟಾಚಾರ ಇಲ್ಲವೆಂಬ ನಿಲುವನ್ನು ಹೇಗೆ ಈ ಸಭೆಗೆ ಸ್ಪಷ್ಟಪಡಿಸುತ್ತಾರೆ. ಅಂಥ ಹಿರಿಯ ನಾಯಕರೂ, ಕಾಂಗ್ರೆಸ್ ಪಕ್ಷದವರೂ ಮಾಡಿರುವ ಅಪಾದನೆಗಳನ್ನು ಈ ಸರಕಾರ ಅಲ್ಲಗೆಳೆದಿಲ್ಲ ಇದನ್ನು ಬಹುಶಃ ಸರಕಾರದವರು ಒಪ್ಪಿಕೊಂಡಿದ್ದಾರೆ ಅಂತ ಕಾಣುತ್ತೆ. ನೆಹ್ರುರವರೆ ಲಂಚ ಬೆಳೆಯುತ್ತಿದೆ ಅನ್ನುವುದನ್ನು ಒಪ್ಪಿಕೊಂಡಿದ್ದಾರೆ. ಪಾಪ ! ಮೈಸೂರು ಮಂತ್ರಿಗಳು ಒಪ್ಪಿಕೊಳ್ಳುವುದರಲ್ಲಿ ಆಶ್ಚರ್ಯವೇನು, ಭ್ರಷ್ಟಾಚಾರ ಮಾಡತಕ್ಕಂಥ ಸರಕಾರದಿಂದ ನಿಜವಾಗಿಯೂ ಜನಗಳಿಗೆ ಏನಾದರೂ ಪ್ರಯೋಜನವಾಗುತ್ತದೆಯೆ ? ಜನಗಳಲ್ಲಿ "ಸುಖೀರಾಜ್ಯ" ಸ್ಥಾಪನೆ ಮಾಡುವುದಕ್ಕೆ ಸಾಧ್ಯವೇ ?

ದೇಶದಲ್ಲಿ ಎಷ್ಟು ಕೊಲೆಗಳು ನಡೆಯುತ್ತಾ ಇಲ್ಲ, ಅನ್ಯಾಯ ಅಕ್ರಮಗಳು ನಡೆಯುತ್ತಾ ಇಲ್ಲ, ಎಷ್ಟು ದರೋಡೆಗಳು ನಡೆಯುತ್ತಾ ಇಲ್ಲ. ಇಂಥ ನಿದರ್ಶನಗಳನ್ನು ನೇರವಾಗಿ, ಬಹಿರಂಗವಾಗಿ ಈ ಸಭೆಯ ಮುಂದೆ ಇಟ್ಟರೂ ಕೂಡ, ಯಾವ ಒಂದನ್ನೂ ಕೂಡ ಪರಿಶೀಲನೆ ಮಾಡಲಿಲ್ಲ. ಮೊನ್ನೆ ನಾನು ರಾಮನಗರಕ್ಕೆ ಹೋಗಬೇಕಾಗಿ ಬಂತು. ಆ ಪೋಲೀಸು ಸ್ಟೇಷನ್ನಿನೊಳಗೆ 40-45 ವರ್ಷದ ಸಬ್-ಇನ್‌ಸ್ಪೆಕ್ಟರು ಇದ್ದಾರೆ. ಈ ಸಬ್-ಇನ್‌ಸ್ಪೆಕ್ಟರು ಮಾಡಿರತಕ್ಕಂಥ

(ಶ್ರೀ ಕೆ. ಲಕ್ಕಪ್ಪ)

ಅನ್ಯಾಯ ಇಷ್ಟು ಅಂತ ಹೇಳುವುದಕ್ಕಾಗುವುದಿಲ್ಲ. ಕೋರ್ಟಿನಲ್ಲಿ ಇಂಜಂಕ್ಷನ್ ತೆಗೆದುಕೊಂಡಿರ ತಕ್ಕಂಥ, ಆರ್ಡರ್ ಆಗಿರತಕ್ಕಂಥ ಪಾರ್ಟಿಗೆ, ಕೋರ್ಟಿನ ನ್ಯಾಯಸಂರಕ್ಷಣೆ ಪಡೆದಿರತಕ್ಕಂಥ ಪಾರ್ಟಿಗೆ, ಜಮೀನು ಸ್ವಾಧೀನವನ್ನು ಕೊಡದೆ, ಬೇರೆ ಪಕ್ಷದವನಿಗೆ ಸ್ವಾಧೀನನ್ನು ಕೊಟ್ಟಿದ್ದಾರೆ. ಹೀಗೆ ಕೋರ್ಟಿನ ಸಂರಕ್ಷಣೆ ಮಾಡಿಕೊಂಡಿರತಕ್ಕಂಥ ಒಬ್ಬ ಮನುಷ್ಯನ ಮೇಲೆ 107ನೇ ಪ್ರೊಸೀಡಿಂಗ್ಸ್ ತೆಗೆದುಕೊಂಡು ಅವನನ್ನು ಕೋರ್ಟಿನಲ್ಲಿ ಹಾಜರು ಮಾಡಿದ್ದಾರೆ. ಮೂರು ದಿವಸ ಅವನನ್ನು wrongful confinementನಲ್ಲಿ ಇಟ್ಟಿದ್ದರು. ಅವನಿಗೆ ಹೊಡೆದು ಬಡಿದು ಏನೇನು ಅವಮಾನ ಮಾಡಬೇಕೋ ಎಲ್ಲಾ ಮಾಡಿದರು. ಇಂಥ ಅನ್ಯಾಯ, ದ್ರೋಹ, ಮಾಡಿದಂಥ, ಬೇಜವಾಬ್ದಾರಿಯಿಂದ ವರ್ತಿಸಿರತಕ್ಕಂತ ಅಧಿಕಾರಿಗಳು ಇದುವರೆಗೂ ಕೂಡ ಸರಕಾರದ ಕಣ್ಣಿಗೆ ಬಿದ್ದಿಲ್ಲ. ಅವರ ಮೇಲೆ ಸರಕಾರ ಯಾವ ಒಂದು ಕ್ರಮವನ್ನೂ ತೆಗೆದುಕೊಳ್ಳದೆ ಇರತಕ್ಕಂಥಾದ್ದು ದುರದೃಷ್ಟಕರ, ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಕೆಲವು ಸಾರಿ ನಾವು ಅರ್ಜಿಗಳನ್ನು ಮಂತ್ರಿಗಳಿಗೆ ಸಾರ್ವಜನಿಕ ಕೆಲಸಗಳಿಗೆ ಹೋದಾಗ ಕೊಡುವುದುಂಟು, ಸಾರ್ವಜನಿಕರಿಗೆ ಕೆಲಸ ಆಗಬೇಕು ಅಂತ. ಆದರೆ ಈ ಪಕ್ಷದವರು ಕೊಟ್ಟ ಅರ್ಜಿಗಳು ಸಾರ್ವಜನಿಕ ದೃಷ್ಟಿಯಿಂದ ಸರಿಯಾಗಿ, ನ್ಯಾಯವಾಗಿ ಇದ್ದರೂಕೂಡ, ಆ ಅರ್ಜಿಗಳಿಗೆ ಯಾವ ಪುರಸ್ಕಾರ, ಮಾನ್ಯತೆ, ಗೌರವ ಇಲ್ಲದೆ ತಿರಸ್ಕಾರ ಮಾಡಿರತಕ್ಕಂಥ ನಿದರ್ಶನಗಳನ್ನು ಸರಕಾರದ ಮುಂದೆ ಇಡಬಯಸುತ್ತೇನೆ. ಖಾಸಗಿ ಜನಗಳು ಮುಂದೆ ಬಂದು ಹೈಸ್ಕೂಲುಗಳನ್ನು ಸ್ಥಾಪನೆ ಮಾಡಲಿ ಅಂತ ಇದೇ ಸರಕಾರ ಒಂದೇ ಕೂಗಿನಿಂದ ಹೇಳುತ್ತಿದೆ. ಇದೇ ಸರಕಾರ ಖಾಸಗಿಯವರು ಹೈಸ್ಕೂಲನ್ನು ಮಾಡಬೇಕಾದಂಥ ಸಂದರ್ಭದಲ್ಲಿ ಹಣವನ್ನು ಜೋಡಿಸಿಕೊಂಡು ಎಲ್ಲ ಅಧಿಕಾರಿಗಳಿಂದಲೂ ಹೈಸ್ಕೂಲು ಸರಿಯಾಗಿ ನಡೆಯುತ್ತದೆ ಎಂದು ಶಿಫಾರಸು ತರಬೇಕೆಂದು ಹೇಳುತ್ತದೆ. ಎಲ್ಲ ಅಧಿಕಾರಿಗಳೂ ಶಿಫಾರಸು ಮಾಡಿದ್ದಕ್ಕೆ ಕೊನೆಯ ಘಳಿಗೆಯಲ್ಲಿ ಒಬ್ಬ ಮಂತ್ರಿ, ಅದರಲ್ಲಿಯೂ ಜನಗಳಿಂದ ಚುನಾವಣೆಯಾಗದೆ ಇರತಕ್ಕಂಥ ಮಂತ್ರಿ, ವಿದ್ಯಾ ಇಲಾಖೆಯ ಪೋರ್ಟ್‌ಫೋಲಿಯೊ ಇರುವ ಬೇರೆ ಮಂತ್ರಿಗಳ ಮೇಲೆ ಜಂಬೂಸವಾರಿ ಮಾಡಿ, ಮಾನ ಮರ್ಯಾದೆ, ಘನತೆ ಗೌರವ, ಏನಾದರೂ ಬರತಕ್ಕಂಥ ಕೆಲಸ ಮಾಡುತ್ತಾ ಇದ್ದಾರೆಯೇ. ಏತಕ್ಕೋಸ್ಕರ ಅಂಥ ಮಂತ್ರಿಗಳನ್ನು ಮಂತ್ರಿ ಸ್ಥಾನದಲ್ಲಿ ಇಟ್ಟುಕೊಂಡಿದ್ದಾರೆ. ಪ್ರಜಾಪ್ರಭುತ್ವ ಹೆಸರನ್ನು ಅವಹೇಳನ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಇಡತಕ್ಕಂಥ ಕೆಲಸವನ್ನು, ಹೀನ ಕೃತ್ಯವನ್ನೂ ಮಾಡುತ್ತಾ ಇರಬೇಕಾದರೆ ಪ್ರಬಲವಾಗಿ ವಿರೋಧಿಸಬೇಕಾಗಿದೆ. ಚುನಾವಣೆಯಲ್ಲಿ ಜನಗಳಿಂದ ಪುರಸ್ಕರಿಸಿ ಬಂದಂಥ ಜನಗಳಿಗೆ, ಪುರಸ್ಕಾರ ಕೊಡದೆ, ಅಗೌರವ ಮಾಡಿರತಕ್ಕಂಥ ಕೀಳುಮಟ್ಟದ ಜನಗಳನ್ನು ಮಂತ್ರಿ ಮಂಡಲದಲ್ಲಿ ಸೇರಿಸಿಕೊಂಡಿರುವುದು ನ್ಯಾಯವೇ ಎಂದು ಕೇಳಬೇಕಾಗಿದೆ. ಇದು ಭ್ರಷ್ಟಾಚಾರವಲ್ಲವೇ, ಲಂಚದ ಅಪರಾವತಾರವಲ್ಲವೇ, ಸ್ವಜನಪಕ್ಷಪಾತ ವಲ್ಲವೇ ? ಇದು ಕಾಂಗ್ರೆಸ್ ಪಕ್ಷದ ಧ್ಯೇಯವೋ ?

ಇದು ಮಹಾತ್ಮಗಾಂಧಿಯವರು ಹೇಳಿಕೊಟ್ಟ ಪಾಠವೇ ? ಯಾವ ತತ್ವವನ್ನು ನೀವು ಅನುಸರಿಸುತ್ತಿದ್ದೀರಿ ?

ಸ್ವಾಮಿ ಇಂಥ ಅನ್ಯಾಯಗಳನ್ನು ಎಷ್ಟೋ ಮಾಡುತ್ತಿದ್ದಾರೆ. ರಾಜಕೀಯ ಸಂತ್ರಸ್ತರು ಅಥವಾ ರಾಜಕೀಯದಲ್ಲಿ ನೊಂದವರು ಜೈಲಿನ ಅಧಿಕಾರಿಗಳಿಂದ ಸರ್ಟಿಫಿಕೇಟನ್ನು ತರದೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಂದ ಅವರ ಸಹಿಯೊಡನೆ ಅವರ ಮೂಲಕ ಬಂದಂಥ ಅರ್ಜಿಗಳಿಗೆ ಪುರಸ್ಕಾರ ಮಾಡಿರತಕ್ಕದ್ದು ಇದೆ. ರಾಜಕೀಯದಲ್ಲಿ ನೊಂದವರಿಗೆ ಸಹಾಯ ಮಾಡಲು ಒಂದು ಪವಿತ್ರವಾದ ಕಾನೂನನ್ನು ಮಾಡಿದ್ದೀರಿ. ಅಂಥ ಕಾನೂನಿಗೆ ವಿರೋಧವಾಗಿ ಕೇವಲ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಸಹಿಯೊಡನೆ ಬಂದಿರತಕ್ಕ ಅರ್ಜಿಗಳವರಿಗೆ ಜಮೀನನ್ನು ಹಂಚಿರತಕ್ಕದ್ದು ಎಷ್ಟೋ ಇದೆ.

ಸ್ವಾಮಿ ಸ್ವಾತಂತ್ರ್ಯ ಬಂದಮೇಲೆ ಎಷ್ಟು ಜನ ನಾವು ಕಾಂಗ್ರೆಸ್ ಸಂತ್ರಸ್ತರು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಂದ ಸಹಿಯನ್ನು ಪಡೆದು ಬೋಗಸ್ ಟ್ರಾನ್ಸಾಕ್ಷನ್ ಮಾಡಿಕೊಂಡು ಜಮೀನುಗಳನ್ನು ಪಡೆದಿರತಕ್ಕ ನಿದರ್ಶನಗಳು ಎಷ್ಟಿಲ್ಲ ? ಉದಾಹರಣೆಗೆ ಹೇಳಬೇಕು ಎಂದರೆ ಈ ಕಾಂಗ್ರೆಸ್ ಸರ್ಕಾರದ ಒಬ್ಬ ಮಂತ್ರಿಗಳು ಕೈಗೊಂಬೆಯಾಗಿರತಕ್ಕ ತುಮಕೂರು ಕಾಂಗ್ರೆಸ್ ಅಧ್ಯಕ್ಷ ಮೂರು ಸಾರಿ ಜಮೀನುಗಳನ್ನು ತಾನು ಕಾಂಗ್ರೆಸ್ಸಿಗೆ ಬಹಳ ಸೇವೆ ಮಾಡಿದ್ದೇನೆ ಎಂದು ಪಡೆದು ಅದನ್ನು ಪರಭಾರೆ ಮಾಡಿ ಜೀವನವನ್ನು ಮಾಡತಕ್ಕ, ಹಂದಿ ನಾಯಿಗಳು ಜೀವನ ಮಾಡುವಂಥ ಕೀಳು ಜೀವನವನ್ನು ಮಾಡತಕ್ಕ ಇಂಥ ಜನರನ್ನು ಇಟ್ಟುಕೊಂಡು ಸರ್ಕಾರವನ್ನು ನಡೆಸಬೇಕೇನು ?

ಸ್ವಾಮಿ, ಅಮೇರಿಕದಿಂದ ವಿದ್ಯಾರ್ಥಿಗಳಿಗೆ ಹಂಚಲು ಉಚಿತವಾಗಿ ಬಂದಂಥ ಹಾಲಿನ ಪುಡಿಯನ್ನು ಮಾರಿ, ಹೈಸ್ಕೂಲನ್ನು ನಡೆಸುತ್ತೇವೆಂದು ಹೆಬ್ಬೂರು ಹೈಸ್ಕೂಲಿನಲ್ಲಿ ಬರತಕ್ಕ ಹಣವನ್ನೆಲ್ಲ ತಿಂದು, ಹಾಸ್ಟಲಿಗೆ ಕೊಡತಕ್ಕ ಗ್ರ್ಯಾಂಟನ್ನು ತಿಂದು, ವಿದ್ಯಾರ್ಥಿಗಳು ಶಾಲೆಗೆ ಕೆಂಪು ಟೋಪಿಯನ್ನು ಹಾಕಿಕೊಂಡು ಹೋದರೆ ಬಿಳಿ ಟೋಪಿ ಮಾತ್ರ ಹಾಕಿಕೊಂಡು ಬರಬೇಕು ಎಂದು ಕಳಿಸಿದ್ದರಿಂದ ಮೂರುದಿನಗಳಿಂದಲೂ ಹುಡುಗರು ಮುಷ್ಕರ ಹೂಡಿದ್ದಾರೆ. ಇಂಥ ಭ್ರಷ್ಟಾಚಾರ ಮಾಡತಕ್ಕ ಜನಗಳಿಗೆ, ಅನ್ಯಾಯ ಮಾಡತಕ್ಕ ಜನಗಳಿಗೆ, ನಿಮ್ಮ ಬೆಂಬಲ ಸಹಾನುಭೂತಿ ಇದೆ. ಇದನ್ನೆಲ್ಲ ಎಷ್ಟು ಸಾರಿ ಹೇಳಿದ್ದೇವೆ, ಎಷ್ಟು ಸಾರಿ ಬರೆದುಕೊಟ್ಟಿದ್ದೇವೆ, ಈ ಸಭೆಯಲ್ಲಿಯೇ ಎಷ್ಟು ಸಾರಿ ಹೇಳಬೇಕು ? ಯಾವ ಒಬ್ಬ ಅಧಿಕಾರಿ ಲಂಚ ತೆಗೆದುಕೊಳ್ಳುತ್ತಾನೆ ಮುಂತಾಗಿ ಸ್ಪಷ್ಟವಾಗಿ ಬರೆದು ಕೊಟ್ಟಾಗ್ಯೂ ಕೂಡ ಆ ಅಧಿಕಾರಿಯನ್ನು ಅಲ್ಲಿಯೇ ಇಟ್ಟು ಪುರಸ್ಕಾರ ಮಾಡಿದರೆ ಹೇಗೆ ? ಒಂದು ವರ್ಷವಾದರೂ ಅವರನ್ನು ಅಲ್ಲಿಂದ ವರ್ಗಮಾಡುವುದಕ್ಕಾಗಿಲ್ಲ. ಕೆಲವು ಅಧಿಕಾರಿಗಳನ್ನು ಆರಾರು ತಿಂಗಳಿಗೆ ವರ್ಗ ಮಾಡಿದ್ದಾರೆ. ಅದಕ್ಕೆ ಏನು ಪ್ರಬಲವಾದ ಕಾರಣವಿದೆ ಎಂದು ಕೇಳುತ್ತೇನೆ. ಇದು ರಾಜಕೀಯವಲ್ಲವೇ ? ಅಧಿಕಾರಿಗಳ ನೆರವನ್ನು ಪಡೆಯುತ್ತಿದ್ದಾರೆ. ಇವರಿಗೆ ಜನತೆಯ ಸಹಾನುಭೂತಿಯಿಲ್ಲ. ಜನಗಳು ಇವರನ್ನು ಧಿಕ್ಕರಿಸಿದ್ದಾರೆ. ಚುನಾವಣೆಯಲ್ಲಿ ಇವರಿಗೆ ಬಂದಿರತಕ್ಕದ್ದು ಕೇವಲ ಶೇಕಡ 45 ಅಥವಾ 46 ರಷ್ಟು ಓಟುಗಳು. ಆದರೂ ಇವರು ಅಧಿಕಾರದಲ್ಲಿ, ಅಧಿಕಾರದ ಅಂಧಕಾರದಲ್ಲಿ, ಅಮಲಿನಲ್ಲಿ ಇದ್ದುಕೊಂಡು ಭ್ರಷ್ಟಾಚಾರ, ಲಂಚಕೋರತನ ನಡೆಯುತ್ತದೆ ಎನ್ನುವುದನ್ನು ತಿಳಿದೂ ಸುಮ್ಮನೆ ಇರುವುದರಿಂದ ದೇಶಕ್ಕೆ ಬಹಳ ಕೆಟ್ಟದ್ದು ಆಗುತ್ತದೆ.

ಸ್ವಾಮಿ, ಸಹಕಾರ ಚಳುವಳಿಯ ಸಂಬಂಧದಲ್ಲಿ ಮೊನ್ನೆ ಡೆವಲಪ್‌ಮೆಂಟ್ ಕಮಿಷನರು : ಬಂದಿದ್ದು ಎಲ್ಲ ಜನರನ್ನೂ ಸೇರಿಸಿ ಮೀಟಿಂಗ್ ಮಾಡಿಸಿ ಸಪ್ತಾಹಗಳನ್ನು ನಡೆಸಿ ಸಹಕಾರ ತತ್ವದಿಂದಲೇ ನಮ್ಮ ದೇಶಕ್ಕೆ ಬಹಳ ಒಳ್ಳೆಯದಾಗುತ್ತದೆ, ಬಹಳ ಪ್ರಯೋಜನವಾಗುತ್ತದೆ ಎಂದು ಹೇಳಿದರು. ತುಮಕೂರು ಜಿಲ್ಲೆಯಲ್ಲಿ ಎಷ್ಟು ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ, ಅದನ್ನು ದುರುಪಯೋಗ ಮಾಡಿರತಕ್ಕ ಜನ ಯಾರು, ಈ ವಿಚಾರದಲ್ಲಿ ತನಿಖೆ ಏನಾದರೂ ಮಾಡಿದ್ದೀರಾ ಎಂದರೆ ಹಣ ದುರುಪಯೋಗವಾಗಿಲ್ಲ ಎಂದು ಅಧಿಕಾರಿಗಳು ಏಕ ಕಂಠದಿಂದ, ಮುಕ್ತ ಕಂಠದಿಂದ ಹೇಳಿದರು. ಬಹುಶಃ ಅವರು ಸರ್ಕಾರದ ನೆರವಿನಿಂದ ಬಂದಿರತಕ್ಕ ಅಧಿಕಾರಿಗಳಾದ್ದರಿಂದ ಹಾಗೆ ಹೇಳಿರಬಹುದು. ಸರ್ಕಾರದ ಉಪ್ಪನ್ನು ತಿನ್ನುತ್ತಿರತಕ್ಕ ಕಾಲದಲ್ಲಿ ಏಕಪಕ್ಷವಾದ ನ್ಯಾಯವನ್ನು, ಒಂದೇ ಪಕ್ಷಕ್ಕೆ ಸಹಾನುಭೂತಿಯನ್ನು ತೋರಿಸತಕ್ಕ ಅಧಿಕಾರಿಗಳು ಎಂದು ಕಾಣುತ್ತದೆ. ಅದಾದ 15 ದಿವಸಗಳಲ್ಲಿ ತುಮಕೂರು ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ 65 ಸಹಸ್ರ ರೂಪಾಯಿಗಳ ದುರುಪಯೋಗ ನಡೆದಿದೆ. ಜಿಲ್ಲಾ ಬ್ಯಾಂಕಿನಲ್ಲಿ ನಡೆದ ಒಂದು ಸಮಾರಂಭದಲ್ಲಿ ಅವರ ಅಧ್ಯಕ್ಷತೆಯನ್ನು ಮುಖ್ಯಮಂತ್ರಿಗಳು, ವಹಿಸಿದ್ದು ಅದರ ಉದ್ಘಾಟನೆಯನ್ನು ನ್ಯಾಯಾಂಗ ಮಂತ್ರಿಗಳು ನೆರವೇರಿಸಿದರು. ಅದರ ಅಧ್ಯಕ್ಷರು ಇನ್ನೊಬ್ಬರ ಹೆಸರಿನಲ್ಲಿ ದುಡ್ಡನ್ನು ಪಡೆದು ಅದನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಆ ಹಣವನ್ನು ಜಮೀನುಗಳನ್ನು ತೆಗೆದುಕೊಳ್ಳಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ಹರಿಜನರಿಗೆ ಜಮೀನುಗಳನ್ನು ಕೊಡಿಸುತ್ತೇವೆಂದು ಅವರಿಂದ ಅಗ್ರಿಮೆಂಟುಗಳನ್ನೂ ಪ್ರಾಮಿಸರಿಗಳನ್ನೂ ಬರೆಸಿಕೊಳ್ಳುತ್ತಿದ್ದಾರೆ. ಕುರುಬಾ ರಾಮೇನಹಳ್ಳಿಯಲ್ಲಿ 106 ಎಕರೆ ಜಮೀನನ್ನು ಅಲ್ಲಿ ಕೆರೆ ಕಟ್ಟುತ್ತಾರೆ, ಜಮೀನು ಮುಳುಗಡೆಯಾಗುತ್ತದೆ ಎಂದು ಹೇಳಿದರೂ ಕೂಡ ಕೇಳದೆ 30-40 ಹರಿಜನರಿಗೆ ಕೊಡಿಸುವ ಪ್ರಯತ್ನದಲ್ಲಿದ್ದಾರೆ. ಈ ಜಿಲ್ಲಾ ಬ್ಯಾಂಕ್ ಅಧ್ಯಕ್ಷರಮೇಲೆ ಇದುವರೆಗೂ ಏತಕ್ಕೋಸ್ಕರ ಕ್ರಮ ತೆಗೆದುಕೊಳ್ಳಲಿಲ್ಲ ?

ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ವಿಚಾರದಲ್ಲಿ ನಾವು ನೇರವಾಗಿ ಆಡಿಟ್ ರಿಪೋರ್ಟನ್ನು ಪೋಸ್ಟ್ ಮೂಲಕ ಮಾನ್ಯ ಮಂತ್ರಿಗಳಾದ ರಾಮಕೃಷ್ಣ ಹೆಗ್ಗಡೆಯವರಿಗೆ ಕಳಿಸಿದೆವು. ಇಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಗವಾಗಿದೆ. ಹಣವನ್ನೆಲ್ಲ ಪ್ರೆಸಿಡೆಂಡರು ಮತ್ತು ಕಾರ್ಯದರ್ಶಿಗಳೂ ತಿಂದು ಹಾಕಿದ್ದಾರೆ. ಎಂದು ಆಡಿಟ್ ರಿಪೋರ್ಟಿನಲ್ಲಿ ಹೇಳಿದ್ದಾರೆ ಆ ವರದಿಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕಳಿಸಿಕೊಟ್ಟೆವು. ಅದು ನಮ್ಮ ವರದಿಯಲ್ಲ. ಇಲಾಖೆಯ ಆಡಿಟರವರ ವರದಿ. ಆ ವರದಿಯನ್ನು ಕಳಿಸಿದ 15 ದಿವಸಗಳಿಗೆ ಮಾರ್ಕೆಟಿಂಗ್ ಸೊಸೈಟಿಯ ಭವ್ಯ ಭವನದ ಪ್ರಾರಂಭೋತ್ಸವ ನಡೆಯಿತು. ಮುಖ್ಯ ಮಂತ್ರಿಗಳ ಅಧ್ಯಕ್ಷತೆ, ನ್ಯಾಯಾಂಗ ಮಂತ್ರಿಗಳ ಭಾಷಣ ರಾಮಕೃಷ್ಣ ಹೆಗ್ಗಡೆಯವರಿಂದ ಉದ್ಘಾಟನೆ, ಲಂಚದ ಉದ್ಘಾಟನೆ. ಯಾರು ಹಣವನ್ನು ತಿಂದಿದ್ದರೋ ಅವರ ಭಾವ ಚಿತ್ರ ಅನಾವರಣ ಮಹೋತ್ಸವ ರಾಮಕೃಷ್ಣ ಹೆಗ್ಗಡೆಯವರಿಂದ. ಇಂಥ ಭ್ರಷ್ಟಾಚಾರಗಳು ನಡೆದಿರುವುದನ್ನು ಎಷ್ಟು ಸಾರಿ ಹೇಳಿದರೂ ಇನ್ನು ಯಾವ ತನಿಖೆಯೂ ಇಲ್ಲ.

(ಶ್ರೀ ಕೆ. ಲಕ್ಕಪ್ಪ)

ಇದೇ ರೀತಿಯಾಗಿ ಕುಣಿಗಲ್ ಸೊಸೈಟಿಯಲ್ಲಿಯೂ ನಡೆದಿದೆ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಬಹುಶಃ ಸಹಕಾರ ಮಂತ್ರಿಗಳು ಇದ್ದಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ. ಶ್ರೀ ಜತ್ತಿಯವರು ಒಂದೇ ಮಾತಿನಲ್ಲಿ ನುಣುಚಿಕೊಂಡು ಜಾರಿಬಿಡುತ್ತಾರೆಂದು ಕಾಣುತ್ತದೆ. ಸಹಕಾರ ಸಂಘಗಳಿಂದಲೇ ಜೀವನ ಎಂದು ತಿಳಿದುಕೊಂಡಿದ್ದಾರೆ. ಸಹಕಾರದಿಂದಲೇ ಈ ಕಾಂಗ್ರೆಸ್ಸಿನವರ ಜೀವನ, ಸಹಕಾರ ತತ್ವದಿಂದಲೇ ಕಾಂಗ್ರೆಸ್ಸಿನವರಿಗೆ ಉದ್ಧಾರ, ಸಹಕಾರ ಸಂಘಗಳು ಇಲ್ಲದೆ ಹೋದರೆ ಚುನಾವಣೆಗಳಲ್ಲಿ ಮೂರು ಜನರೂ ಆರಿಸಿ ಬರುವುದಕ್ಕಾಗುವುದಿಲ್ಲ ಡಿಪಾಜಿಟ್ಟನ್ನು ಕೂಡ ಕಳೆದುಕೊಳ್ಳುತ್ತಾರೆ. ಮೊನ್ನೆ ಒಬ್ಬರು ಕುಣಿಗಲ್ ತಾಲ್ಲೂಕಿನಲ್ಲಿ 30 ಸಹಸ್ರ ರೂಪಾಯಿಗಳನ್ನು ಸೊಸೈಟಿಗೆ ಕೊಡುತ್ತೇವೆಂದು ಹೇಳಿದರು. ಸೊಸೈಟಿಯಿಂದ ಹಣ ಬರುತ್ತದೆ ಎಂದು ರುಜು ಹಾಕಿಸಿಕೊಂಡು ಹಣವನ್ನು ತೆಗೆದುಕೊಂಡು ಅದನ್ನು ಜನಗಳಿಗೆ ಹಂಚದೆ ಅಧಿಕಾರ ಮಂಡಲಿಯಲ್ಲಿರುವ ಡೈರೆಕ್ಟರ್‌ಷಿಪ್‌ಗೆ ಸ್ಪರ್ಧಿಸಿ 15 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರು.

ಕುಣಿಗಲ್ ಹತ್ತಿರ ಒಂದು ಸೊಸೈಟಿ. ಶ್ರೀ ಅಂದಾನಯ್ಯನವರಿಗೆ ಅದರ ಹೆಸರು ಗೊತ್ತಿರ ಬೇಕು. ರೈತರು ಬೆಳೆಯನ್ನು ಚೆನ್ನಾಗಿ ಬೆಳೆಯಲಿ, ರೈತರು ಚೆನ್ನಾಗಿರಲಿ ಎಂದು ಕೊಟ್ಟಂಥ ಅಮೋನಿಯಂ ಸಲ್ಫೇಟನ್ನು ಕಾಳಸಂತೆಯಲ್ಲಿ ಮಾರಿ ಜೀವನ ಮಾಡತಕ್ಕ ಒಂದು ಏಜೆನ್ಸಿಯನ್ನು ಸರ್ಕಾರದವರು ನಿರ್ಮಿಸಿದ್ದಾರಲ್ಲ, ಚುನಾವಣೆಯಲ್ಲಿ ಓಟುಗಳನ್ನು ಪಡೆಯಲು ಇದ್ದಕ್ಕಿಂತ ಇನ್ನು ಭ್ರಷ್ಟಾಚಾರಗಳನ್ನು ಎಷ್ಟು ಹೇಳಬೇಕು ! ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಸ್ವಾಮಿ ?

ಪಂಚಾಯ್ತಿ ರಾಜ್ಯ ಮಾಡುತ್ತೇವೆ, ನಾವು ದೇಶದಲ್ಲಿ ಅಧಿಕಾರವನ್ನು ವಿಕೇಂದ್ರಿಕರಣ ಮಾಡುತ್ತೇವೆ ಎಂದು ಹೇಳಿ ಈ ಪಂಚಾಯಿತಿಗಳಿಗೆ ಕೊಟ್ಟಿರತಕ್ಕ ಅಧಿಕಾರವನ್ನು ನಿಮ್ಮ ಪಕ್ಷದವರು ಎಷ್ಟುಮಟ್ಟಿಗೆ ಉಪಯೋಗಿಸಿಕೊಂಡಿದ್ದಾರೆ ಎಂದರೆ, ಪಂಚಾಯ್ತಿ ಸೆಕ್ರೆಟರಿ ಅವರೇ ಪಂಚಾಯ್ತಿ ಪ್ರೆಸಿಡೆಂಟರವರು ಅವರೇ. ಸುಮಾರು 30-40 ಪಂಚಾಯಿತಿಗಳವರು ನಮ್ಮ ತುಮಕೂರು ತಾಲ್ಲೂಕಿನಲ್ಲಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ, ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ, ಈ ಬಗ್ಗೆ ತಮ್ಮ ಅಧಿಕಾರಿಗಳು ಏನು ತನಿಖೆ ನಡೆಸಿದ್ದಾರೆ, ಯಾವ ಅಧಿಕಾರಿಗಳು ಈ ಬಗ್ಗೆ ಅವರಮೇಲೆ ಸೂಪರ್‌ವಿಜನ್ ಇಟ್ಟಿದ್ದಾರೆ ? ಈ ದುರುಪಯೋಗ ಪಡಿಸಿರತಕ್ಕ ಜನ ನಿಮ್ಮನ್ನು ಆಶ್ರಯ ಮಾಡಿಕೊಂಡಿದ್ದಾರೆ. ಅವರು ನಿಮ್ಮನ್ನು ಬೆಂಬಲಿಸುತ್ತಾ ಇದ್ದಾರೆ ಅವರು ನಿಮ್ಮ ಕೃಪಾಕಟಾಕ್ಷದಿಂದ ಹೇಡಿ ಜೀವನವನ್ನು ಸಾಗಿಸುತ್ತಾ ಇದ್ದಾರೆ. ಅಂತಹ ಜೀವನವನ್ನು ನಡೆಸುತ್ತಾ ಇರತಕ್ಕ ಅವರು ನಿಮ್ಮ ಬೆಂಬಲಿಗರಾಗಿದ್ದಾರೆ. ಈ ದೇಶ ರಾಮ ರಾಜ್ಯವಾಗಲಿ, ಈ ದೇಶ ಸುಭಿಕ್ಷವಾಗಲಿ, ಪ್ರಜಾಪ್ರಭುತ್ವದಲ್ಲಿ ಜನತಾ ಸೇವೆ ಮಾಡಬೇಕೆಂದು ಹೇಳುತ್ತಾ ಇದ್ದ ನಿಮ್ಮ ಸೇವಾ ಮನೋಭಾವ ನಿಮ್ಮಲ್ಲಿ ಈ ದಿನ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನೀವೇ ಹೇಳಬೇಕು. ಸ್ವಾಮಿ ಇನ್ನು ಮಂತ್ರಿಗಳು ಟೂರ್ ಮಾಡತಕ್ಕ ವಿಷಯ, ನಿಮಗೆ ಇನ್ನೇನೂ ಕೆಲಸವಿಲ್ಲವೆ ? 27 ಜನ ಮಂತ್ರಿಗಳು 27 ಕಾರುಗಳು, ಅವರಿಗೆ ಇರತಕ್ಕ ಸಿಬ್ಬಂದಿ, ಅದರಿಂದ ಆಗತಕ್ಕ ನಷ್ಟ, ಡಿಸ್ಟ್ರಿಕ್ಟ್‌ನಲ್ಲಿರತಕ್ಕ ಅಧಿಕಾರಿಗಳು ಅವರ ಕೆಲಸವನ್ನೆಲ್ಲಾ ಬಿಟ್ಟು ಬಂದು ನೀವು ಬಂದಾಗ ನಿಮ್ಮ ಎದುರಿಗೆ ಕೈಕಟ್ಟಿಕೊಂಡು, ಬಹುಪರಾಕ್ ಹೇಳಿಕೊಂಡು, ಹೂವಿನ ಹಾರ ಹಿಡಿದುಕೊಂಡು ನಿಂತಿರಬೇಕು, ನಿಮಗೆ ಅಲ್ಲಿ ದೊರೆಯತಕ್ಕ ಹೂವಿನ ಹಾರಗಳೇನು, ತೆಗೆಯತಕ್ಕ ಫೋಟೋಗಳೇನು ? ಇಷ್ಟೆಲ್ಲಾ ಆಗಿ ನೀವು ಮಾಡುವುದಾದರೂ ಏನು ಕೆಲಸ ?

ಶ್ರೀ ಬಿ. ಡಿ. ಜತ್ತಿ.—ಇರತಕ್ಕ ವಾಸ್ತವಾಂಶಗಳನ್ನು ತಪ್ಪಾಗಿ ಹೇಳಬೇಡಿ, 27 ಸರ್ಕಾರಿ ಕಾರುಗಳು ಇಲ್ಲ, 15 ಇರುವುದು.

ಶ್ರೀ ಕೆ. ಲಕ್ಕಪ್ಪ.—15 ಆದರೂ ಪರವಾಗಿಲ್ಲ. ಅರ್ಥವಾದರೂ ನಮ್ಮ ಮಾತು ನಿಜವಾಯಿತಲ್ಲ ; (ನಗು) ಈ ಮಂತ್ರಿಗಳಿಗೆ ಕೆಲಸ ಏನು ಎಂದರೆ ಟೂರ್ ಮಾಡುತ್ತಾರೆ ಎಂದರೆ ಅವರ ಟೂರ್ ಪ್ರೋಗ್ರಾಂ ಕಾಪಿ ತಯಾರಾಗಬೇಕು, ಟೂರ್ ಏಕೆ ಬರುತ್ತಾರೆ ? ಅವರಿಗೆ ಏನೂ ಕೆಲಸವೇ ಇರುವುದಿಲ್ಲ ಯಾರನ್ನೋ ಕಾಣಬೇಕು ಎಂದು ಅಲ್ಲಿಗೆ ಬಂದು ಹೇಳಿಕಳುಹಿಸುತ್ತಾರೆ. ಸರಿ ಇನ್ನು ಮೀಟಿಂಗ್ ಮಾಡುತ್ತಾರೆ. ಮೀಟಿಂಗ್ ಆದ ಮೇಲೆ ಲಂಚ್ ಅಂಡ್ ರೆಸ್ಟ್ ಅಂತ ಅವರ ಪ್ರೋಗ್ರಾಂನಲ್ಲಿ ಹಾಕಿರುತ್ತಾರೆ, ಸರಿ ಅದಾದ ಮೇಲೆ ಟು ಮೀಟ್ ಕಾಂಗ್ರೆಸ್ ವರ್ಕರ್ಸ್ ಎಂದು ಇರುತ್ತದೆ. ಸರ್ಕಾರಿ ಕಾರಿನಲ್ಲಿ ಬಂದಾಗ ಇವರು ಕಾಂಗ್ರೆಸ್ ಆಫೀಸಿಗೆ ಏಕೆ ಹೋಗಬೇಕು, ಅಲ್ಲಿ ಅವರಿಗೆ ಸರ್ಕಾರಿ ಕೆಲಸ ಏನು ಇದೆ ? ಖಿಸಗಿಯಾಗಿ ಬನ್ನಿ, ನಿಮ್ಮ ನೀತಿ ಏನಿದೆ ಎಂಬುದನ್ನು ಜನತೆಯ ಮುಂದೆ ಇಡಿ. ಅದು ಬಿಟ್ಟು

ಅಧಿಕಾರಯುತವಾಗಿ ಬಂದು, ಸರ್ಕಾರದವರ ಕಾರನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ ಆಫೀಸಿಗೆ ಹೋಗುವುದು ಎಂದರೆ ಇದು ಸರಿಯೇ? ಬಾ ಭೇಟಿ ಮಾಡಿಸುತ್ತೇನೆ, ಬಾ ಅರ್ಜಿ ಕೊಡಿಸುತ್ತೇನೆ, ಬಾ ಕೆಲಸ ಮಾಡಿಸಿಕೊಡುತ್ತೇನೆ, ಅವರನ್ನು ಡಿಸ್‌ಮಿಸ ಮಾಡಿಸುತ್ತೇನೆ, ಇವರನ್ನು ಸಸ್ಪೆಂಡ್ ಮಾಡಿಸುತ್ತೇನೆ ಎಂದು ಹೇಳಿ ಶೌರ್ಯ ಹೇಳಿಕೊಳ್ಳ ತಕ್ಕ ಕಾಂಗ್ರೆಸ್ ಕಾರ್ಯಕರ್ತರನ್ನು ನೋಡುವುದಕ್ಕೆ ಏಕೆ ಹೋಗಬೇಕು? ಅದಕ್ಕೆ ಬೇಕಾದರೆ ಬೇರೆ ಕಾರು ಹಾಕಿಕೊಂಡು ಬನ್ನಿ, ನಮ್ಮ ಕಾಂಗ್ರೆಸ್ ಸರ್ಕಾರ ಇಷ್ಟೊಂದು ತೆರಿಗೆ ಹಾಕಿದೆ, ಇಷ್ಟೊಂದು ಭ್ರಷ್ಟಾಚಾರ ಮಾಡಿದೆ, ಇಷ್ಟೊಂದು ಅನ್ಯಾಯ ಮಾಡಿದೆ ಅದಕ್ಕೆ ಓಟು ನಮಗೇ ಕೊಡಿ (ಸಭೆಯಲ್ಲಿ ನಗು); ನಾವು ಮಹಾತ್ಮಾ ಗಾಂಧಿ ಶಿಷ್ಯರು ಎಂದು ಬಹಿರಂಗವಾಗಿ ಜನಗಳನ್ನು ಕೇಳಿ, ನೀವ್ ಅವರನ್ನು ಒಪ್ಪಿಸಿ ಅವರಿಂದ ಓಟು ತೆಗೆದುಕೊಳ್ಳಿ, ಅಧಿಕಾರ ರೂಢರಾಗಿ, ಅದಕ್ಕೆ ನಾವು ಬೇಡ ಎನ್ನುವುದಿಲ್ಲ. ಮುಚ್ಚು ಮರೆಯಲ್ಲಿ ಹೇಡಿಗಳು ಬಂದಹಾಗೆ ಮಹಾತ್ಮಾ ಗಾಂಧಿಯವರ ಹೆಸರನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದು ನಿಮ್ಮ ಅಧಿಕಾರವನ್ನು ನಡೆಸುತ್ತಾ ಇರುವಾಗ ನೀವು ಟೂರ್ ಮಾಡತಕ್ಕ ಕಾಲದಲ್ಲಿ ಎಷ್ಟು ಜನ ವಿರೋಧ ಪಕ್ಷದ ಸದಸ್ಯರನ್ನು ಕರೆಸಿ ನಿಮ್ಮ ಕ್ಷೇತ್ರದಲ್ಲಿ ಏನು ಕೆಲಸ ವಾಗಿದೆ ಎಂದು ನಿಷ್ಪಕ್ಷಪಾತವಾಗಿ ಕೇಳಿದ್ದೀರಾ? ಹೇಳಿ. ಮಂತ್ರಿಗಳು ಬಂದರೆ ಮೊದಲು ಅವರು ಕೇಳುವುದು ಕಾಂಗ್ರೆಸ್ ಎಂ.ಎಲ್.ಎ. ಎಲ್ಲಿ ಅಂತ ನನ್ನ ಮುಂದೆಯೇ ಈ ಮಂತ್ರಿಗಳು ಒಂದು ಸಾರಿ ಕೇಳುತ್ತಾ ಇದ್ದರು, ನಾನು ಅಲ್ಲಿಯೇ ನಿಂತುಕೊಂಡಿದ್ದೆ, ಏಕೆ ನಾವು ಆ ಕ್ಷೇತ್ರದ ಪ್ರತಿನಿಧಿಸ ತಕ್ಕ ಸದಸ್ಯರಲ್ಲವೇ? (ನಗು) ಇದನ್ನು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಪ್ರಜಾ ಪ್ರಭುತ್ವ ಇರತಕ್ಕ ಇಂತಹ ಕಾಲದಲ್ಲಿ ಕಾಂಗ್ರೆಸ್ ಎಂ.ಎಲ್.ಎ. ಎಂದು ಅವರು ಕೇಳುತ್ತಾ ಹೋದರೆ ಇದು ನಾಚಿಕೆಗೇಡಿನ ವಿಷಯ. ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಗಳ ಮೇಲೆ ನಂಬಿಕೆ ಇಲ್ಲದೇ ಇರತಕ್ಕ ಮಂತ್ರಿಮಂಡಲ ಇವತ್ತು ಇದೆ. ನಾವು ಉಂಟು, ಕಾಂಗ್ರೆಸ್ ಜನ ಉಂಟು ಇತರರಿಗೆ ನಿಮ್ಮ ಸರ್ಕಾರದಲ್ಲಿ ಜಾಗ ಇಲ್ಲ ಎಂದು ಏಕೆ ನೀವು ಕಾನೂನು ಮಾಡಬಾರದು? ಕಾಂಗ್ರೆಸ್‌ಗೆ ಸೇರಿದ ಜನಗಳಿಗೆ ಮಾತ್ರ ಸಹಾಯ ಮಾಡುತ್ತೇವೆ, ಕಾಂಗ್ರೆಸ್ ಜನಗಳಿಗೆ ಮಾತ್ರ ನಮ್ಮ ಬೆಂಬಲ ಇದೆ, ಕಾಂಗ್ರೆಸ್‌ಗೆ ಸೇರಿದವರಿಗೆ ಮಾತ್ರ ಈ ಸರ್ಕಾರ ಇದೆ, ಇತರ ಜನಗಳಿಗೆ ಇದರಲ್ಲಿ ಅವಕಾಶವಿಲ್ಲ ಎಂದು ಒಂದು ಘೋಷಣೆ ಹೊರಡಿಸಿ, ನಾಳೆ ನಿಮ್ಮ ಸರ್ಕಾರ ಹೇಗೆ ನಡೆಯುತ್ತದೆ ಎಂಬುದನ್ನು ನೋಡಿ. ನಿಮಗೆ ಧೈರ್ಯ ಇದ್ದರೆ ಹಾಗೆ ಮಾಡಿ, ಹಾಗಲ್ಲದೇ ಈ ರೀತಿ ಹೇಡಿಗಳಂತೆ ಜೀವನ ನಡೆಸುವುದು ಸರಿಯಲ್ಲ, ಹೇಡಿಗಳಾಗಿ ಈ ದೇಶದಲ್ಲಿ ರಾಜ್ಯವನ್ನು ಆಳಬೇಡಿ ಹೇಡಿಗಳಾಗಿ ರಾಜ್ಯದಲ್ಲಿ ಅಧಿಕಾರಾರೂಢರಾಗಬೇಡಿ. ಧೈರ್ಯವಾಗಿ ಒಳ್ಳೆಯ ಆಡಳಿತವನ್ನು ನಡೆಸತಕ್ಕ ಶಕ್ತಿಯುಳ್ಳ ಪ್ರತಿ ಭಾವಂತರನ್ನು ಇಟ್ಟುಕೊಂಡು ಯಾವ ಪಕ್ಷಪಾತವೂ ಇಲ್ಲದೇ ರಾಜ್ಯವನ್ನು ಆಳಿ. ದೇಶದಲ್ಲಿರತಕ್ಕ ಲಂಚಗುಳಿತನವನ್ನು ತೊಡೆದುಹಾಕುವುದಕ್ಕೆ ಪ್ರಯತ್ನ ಮಾಡಿ, ಯಾವ ದಾಕ್ಷಿಣ್ಯವೂ ಇಲ್ಲದೇ ಕೆಲಸ ಮಾಡುವುದಕ್ಕೆ ನೀವು ಅಲ್ಲಿ ಕುಳಿತರೆ ಅದಕ್ಕೆ ಯಾರು ನಿಮಗೆ ಬೇಡ ಅನ್ನುತ್ತಾರೆ? ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಧೈರ್ಯವಾಗಿ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ನೇರ ವಾದ ಕಾರ್ಯಕ್ರಮವನ್ನು ಹಾಕಿಕೊಂಡು, ಲಂಚಗುಳಿತನವನ್ನು, ಸ್ವಜನ ಪಕ್ಷಪಾತವನ್ನು ನಿರ್ಮೂ ಲನ ಮಾಡುವುದಕ್ಕೆ ಯಾವುದಾದರೂ ಒಂದು ವಿಧಾನವನ್ನು ಕಂಡುಹಿಡಿಯಬೇಕು ಇದು ಅನಿ ವಾರ್ಯ. ಈಗ ಮೂರು ಉಪಚುನಾವಣೆಗಳು ಆಗುವುವು ಇವೆ, ಚುನಾವಣೆಯ ಕಾಲದಲ್ಲ ಸಚಿವರು ಈ ಸಭೆ ನಡೆಯುತಕ್ಕ ಕಾಲದಲ್ಲಿ ಮುಂದಿನ ವರ್ಷ ಯಾವ ತೆರಿಗೆಯನ್ನೂ ಹಾಕುವುದಿಲ್ಲ ಎಂದು ಹೇಳಿದರು. ಆ ವಿಷಯವನ್ನು ಕೇಳಿದಾಗ ಅಧ್ಯಕ್ಷರು ಸರ್ಕಾರದವರು ತಮ್ಮ ನೀತಿಯನ್ನು ಯಾವಾಗ ಬೇಕಾದರೂ ಬದಲಾವಣೆ ಮಾಡಬಹುದು. ಎಂದು ಹೇಳಿದರು, ಇದು ಒಂದು ತರಹ ಫ್ಲೆಕ್ಸಿಬಲ್ ಆಗಿದೆ.

ಶ್ರೀ ಬಿ. ಡಿ. ಜತ್ತಿ.—ಅಧ್ಯಕ್ಷರು ಹೇಳಿದ್ದಕ್ಕೆ ವಿರುದ್ಧವಾಗಿ ಮಾತನಾಡಬೇಡಿ.

ಶ್ರೀ ಕೆ. ಲಕ್ಕಪ್ಪ.—ಅವರಿಗೆ ವಿರುದ್ಧವಾಗಿ ಮಾತನಾಡುತ್ತಾ ಇಲ್ಲ. ಸರ್ಕಾರದಲ್ಲಿ ಈ ದಿವಸ ಯಾವ ಖಚಿತವಾದ ನೀತಿ ಇದೆ ಎಂಬುದನ್ನು ಜನತೆ ಈಗಾಗಲೇ ಅರಿತುಕೊಂಡಿದ್ದಾರೆ.

ಲಂಚಗುಳಿತನ ದೇಶದ ಮೇಲೆ ಬಹಳ ದುಷ್ಪರಿಣಾಮವನ್ನುಂಟುಮಾಡಿದೆ. ದೇಶದ ಜನತೆಗೆ ನ್ಯಾಯ ನೇರವಾಗಿ ಸಿಕ್ಕುತ್ತಾ ಇಲ್ಲ. ದೇಶದಲ್ಲಿ ಒಬ್ಬ ರೈತ ಅಧಿಕಾರಿಯ ಹತ್ತಿರ ಹೋಗಬೇಕಾದರೆ, ಅವನಿಗಿರತಕ್ಕ ಕಷ್ಟಸುಖಗಳನ್ನು ಆ ಅಧಿಕಾರಿಯ ಹತ್ತಿರ ಹೇಳಿಕೊಳ್ಳಬೇಕಾದರೆ ಅವನಿಗಿರತಕ್ಕ ಅವ ಕಾಶಗಳು ಬಹಳ ಕಡಿಮೆಯಾಗಿವೆ. ವಿಶ್ವಾಸದಿಂದ ಅವರ ಕಷ್ಟಸುಖಗಳನ್ನು ಕೇಳತಕ್ಕ ಅಧಿಕಾರಿ ಗಳೂ ಕೂಡ ಕಡಿಮೆಯಾಗಿದ್ದಾರೆ ಮತ್ತು ಅವರು ದಕ್ಷತೆಯಿಂದಲೂ ಕೂಡ ಕೆಲಸಮಾಡುತ್ತಾ ಇಲ್ಲ. ನೀವು ನಡೆಸುತ್ತಾ ಇರತಕ್ಕ ಅಧಿಕಾರ ಬಲಹೀನವಾಗಿದೆ. ಸ್ವಜನ ಪಕ್ಷಪಾತದಿಂದ ಕೂಡಿದೆ. ಇದನ್ನು ನಿರ್ಮೂಲನ ಮಾಡಬೇಕಾದರೆ ದಕ್ಷವಾದಂಥ ಅಧಿಕಾರಯುತವಾದಂಥ ಒಂದು ಕಮಿಟಿ ಯನ್ನು ಸರ್ಕಾರದವರು ನೇಮಕ ಮಾಡಬೇಕು. ಈ ನಿರ್ಣಯಕ್ಕೆ ಬೆಂಬಲವನ್ನು ತಾವೂ ಕೂಡ

(ಶ್ರೀ ಕೆ. ಲಕ್ಕಪ್ಪ)

ಬೆಂಬಲವನ್ನು ಕೊಟ್ಟು ಇದನ್ನು ಸ್ವಾಗತಿಸಬೇಕು ಎಂದು ಹೇಳುತ್ತೇನೆ. ಶ್ರೀಮಾನ್ ಜತ್ತಿಯವರು ಆ ರೀತಿ ಮಾಡುತ್ತಾರೆ ಎಂದು ಹೇಳಿ ನಾನು ನಂಬಿದ್ದೇನೆ. ಈಗಲಾದರೂ ಕೂಡ ನೀವು ಈಗಿನ ಸನ್ನಿವೇಶ ಯಾವ ರೀತಿ ಇದೆ ಎಂಬುದನ್ನು ಅರಿತುಕೊಂಡು ಭ್ರಷ್ಟಾಚಾರವನ್ನು ತೊಲಗಿಸುವುದಕ್ಕೆ ನಮ್ಮ ಮುಂದೆ ಇರತಕ್ಕ ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಜನಗಳ ಹಿತದೃಷ್ಟಿಯಿಂದ, ಮತ್ತು ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡುವುದಕ್ಕೋಸ್ಕರ ಒಪ್ಪಿಕೊಂಡು ಸ್ವಾಗತ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರವರನ್ನು ವಂದಿಸಿ ಎಲ್ಲಾ ವಿಚಾರಗಳನ್ನೂ ಬರೆದುಕೊಂಡ ಮಾನ್ಯ ಜತ್ತಿಯವರು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕುತೂಹಲದಿಂದ ನಿರೀಕ್ಷಣೆ ಮಾಡುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎ. ಪಿ. ಅಪ್ಪಣ್ಣ (ವೀರರಾಜಪೇಟೆ).—ಅಧ್ಯಕ್ಷರೇ, ಇದುವರೆಗೂ ಈ ನಿರ್ಣಯದ ವಿಚಾರವಾಗಿ ಅನೇಕ ಜನರು ಮಾತನಾಡಿದ್ದಾರೆ. ನಮ್ಮ ದೇಶದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ದುರಾಚಾರ ಮೊದಲಿಗಿಂತಲೂ ಜಾಸ್ತಿಯಾಗಿದೆ ಎಂದು ಒಪ್ಪಿಕೊಳ್ಳುವುದರಲ್ಲಿ ಸಂಶಯವಿಲ್ಲ.

HON'BLE MEMBERS.—Hear hear

ಶ್ರೀ ಎ. ಪಿ. ಅಪ್ಪಣ್ಣ.—ಇದು ಜಾಸ್ತಿಯಾಗುವುದಕ್ಕೆ ಕಾರಣರು ಯಾರು ? ಇದನ್ನು ನಿವಾರಣೆ ಮಾಡುವುದಕ್ಕೆ ಯಾವ ಪ್ರಯತ್ನವನ್ನು ಮಾಡಬೇಕು ಎನ್ನುವ ಪ್ರಶ್ನೆಯನ್ನು ನಮ್ಮ ಮುಂದೆ ಇಟ್ಟುಕೊಳ್ಳಬೇಕಾಗಿದೆ.

11-30 A.M.

ನಾವು ಇದಕ್ಕೆಲ್ಲಾ ಸರ್ಕಾರ ಒಂದೇ ಕಾರಣ ಎಂಬ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು, ಆ ಒಂದು ತಳಹದಿಯಮೇಲೆ ಇದನ್ನು ಸರಿಪಡಿಸುತ್ತೇವೆಂದು ನಂಬಿಕೊಂಡಿದ್ದರೆ ಇದು ಖಂಡಿತಾ ಸಾಧ್ಯವಾಗುವುದಿಲ್ಲ, ಈ ಒಂದು ಭಾವನೆಯ ಮೇಲೆ ದೇಶದಲ್ಲಿ ಲಂಚಾ, ಭ್ರಷ್ಟಾಚಾರ ಇತ್ಯಾದಿಗಳನ್ನು ನಿರ್ಮೂಲ ಮಾಡುತ್ತೇವೆಂದು ಭಾವಿಸಿದ್ದರೆ ಅದು ತಪ್ಪು ಭಾವನೆ ಆಗುತ್ತದೆ. ಇಲ್ಲಿಯವರೆಗೂ ಮಾತನಾಡಿದ ಮಾನ್ಯ ಸದಸ್ಯರುಗಳು ಈ ಲಂಚಾ, ಭ್ರಷ್ಟಾಚಾರ ಇತ್ಯಾದಿಗಳಿಗೆಲ್ಲಾ ಮೂಲ ಕಾರಣವೆಲ್ಲಿದೆ, ಅದನ್ನು ಹೇಗೆ ನಿರ್ಮೂಲನ ಮಾಡಬೇಕು ಎನ್ನತಕ್ಕ ಬಗ್ಗೆ ಯಾರೂ ಒಂದು ಸಲಹೆಯನ್ನು ಕೊಡಲಿಲ್ಲ. ಆದರೆ ಈಗ ನಿರ್ಣಯದಲ್ಲಿ ದೇಶದಲ್ಲಿ ಲಂಚಾ, ದುರಾಚಾರ, ಭ್ರಷ್ಟಾಚಾರ ಇತ್ಯಾದಿಗಳು ಹೆಚ್ಚುತ್ತಿವೆ. ಅವುಗಳನ್ನು ತಡೆಗಟ್ಟುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಹೇಳಲಾಗಿದೆ. ಇದಕ್ಕಾಗಿ ಈಗ ಒಂದು ಸಮಿತಿಯನ್ನು ಮಾಡಿ, ಆ ಸಮಿತಿ ಈ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಿ, ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸುವ ವೇಳೆಗೆ ಈ ದುರಾಚಾರಗಳು ಮತ್ತಷ್ಟು ಹೆಚ್ಚಾಗುತ್ತವೆ. ಇದಕ್ಕೆ ಬದಲಾಗಿ ಇಷ್ಟೊಂದು ಜನ ಮಾನ್ಯ ಸದಸ್ಯರು ಮಾತನಾಡಿದ್ದರೂ ಒಬ್ಬರಿಗಾದರೂ ಇದರ ಬಗ್ಗೆ ಒಂದು ಸಲಹಾ ಸೂಚನೆಯನ್ನು ಕೊಡುವುದಕ್ಕೆ ಅವರಲ್ಲಿ ಸಾಹಿತ್ಯವಿರಲಿಲ್ಲವೇ? ಇದು ಏನನ್ನು ಸೂಚಿಸುತ್ತಿದೆ ಎಂದರೆ-ಇಂಥ ಭ್ರಷ್ಟಾಚಾರಗಳಿಗೆ ಸಹಕರಿಸತಕ್ಕಂಥ ಕೆಲವು ಮಂದಿ ಸದಸ್ಯರುಗಳು ಇಲ್ಲಿರಬಹುದು ಎಂಬುದನ್ನು ಇದು ಸೂಚಿಸುತ್ತದೆ. ಈ ದುರಾಚಾರಗಳಿಗೆಲ್ಲಾ ಕೇವಲ ಸರ್ಕಾರ ಒಂದೇ ಕಾರಣವಲ್ಲ, ಇದಕ್ಕೆ ಜನರೂ ಕಾರಣ ಮತ್ತು ಇಲ್ಲಿ ಕುಳಿತಿರತಕ್ಕ ಸದಸ್ಯರುಗಳಾದ ನಾವೂ ಸಹಾ ಕಾರಣ ಎಂಬುದನ್ನು ಯಾರೂ ಮರೆಯಬಾರದು. ಸರ್ಕಾರದವರು ಏನಾದರೊಂದು ಆರ್ಡರನ್ನು ಮಾಡಲಿಕ್ಕೆ ಹೊರಟರೆ, ಇಲ್ಲಿರತಕ್ಕ ಸದಸ್ಯರುಗಳೇ ಸರ್ಕಾರ ತಮ್ಮ ಒಂದು ಸ್ವಜನ ಪಕ್ಷಪಾತ ಮಾಡಲೂ ಇಂಥ ಒಂದು ಆರ್ಡರನ್ನು ಹೊರಡಿಸುತ್ತಿದ್ದಾರೆಂದು ಹೇಳಿ ಅದನ್ನು ತಡೆಗಟ್ಟಲು ಇಲ್ಲೇ ಪಾರ್ಟಿಗಳನ್ನು ಕಟ್ಟಿ, ಇಲ್ಲೇ ನಿರ್ಣಯ ತರಲು ಪ್ರಯತ್ನಗಳಾಗುತ್ತಿವೆ. ಇಂಥ ನಿದರ್ಶನಗಳು ನನ್ನಲ್ಲಿ ಅನೇಕ ಇವೆ. ಸರ್ಕಾರ ಹೇಗಿದೆಯೋ ಜನರೂ ಹಾಗೇ ಹೋಗುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಮ್ಮಲ್ಲಿ ಒಬ್ಬ ಅಧಿಕಾರಿಗಳಿದ್ದಾರೆ. ಅವರಿಗೆ ಕೋಳಿ ಮೊಟ್ಟೆ, ಕೋಳಿಗಳನ್ನು ಕೊಡದ ಹೊರತು ಕೆಲಸಗಳಾಗುವಂತಿಲ್ಲ. ಆದರೆ ನಮ್ಮಲ್ಲಿ ಕೋಳಿಗಳು ಸಿಕ್ಕುವುದು ಬಹಳ ಕಷ್ಟವಾಗಿದೆ. ನಮ್ಮ ತಾಲ್ಲೂಕಿನಲ್ಲೂ ಇಂಥ ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ತಪ್ಪಿಸೋಣ ಎಂದರೆ ಜನಗಳ್ಯಾರೂ ಮುಂದೆ ಬರುತ್ತಿಲ್ಲ. ಜನಗಳು ಆ ಅಧಿಕಾರಿ ಲಂಚಾ ಕೇಳಿದಾಗ ಮುಂದೆ ಬಂದು ಇಂಥವನು ಲಂಚಾ ಕೇಳಿದ ಎಂದು ತಿಳಿಸಿದರೆ, ಆಗ ಅಂತ ಅಧಿಕಾರಿಯನ್ನು ಲಂಚನಿರೋಧಕ ಇಲಾಖೆಯವರಿಂದ ಹಿಡಿಸಬಹುದು. ಆದಕ್ಕೆ ಜನರೇನು ಹೇಳುತ್ತಿದ್ದಾರೆ ಎಂದರೆ : ನಮಗೇಕೆ ಈ ನಿಷ್ಠೂರ, ನಾವೇಕೆ ಇದರಲ್ಲಿ ಸಿಕ್ಕಿಕೊಳ್ಳಬೇಕು

ಎನ್ನುವುದು ಜನರ ಮನಸ್ಸಿನಲ್ಲಿ ಬಂದುಬಿಟ್ಟಿದೆ. ಸರ್ಕಾರದವರಿಗೆ ಇದನ್ನೆಲ್ಲಾ ನಿರ್ಮೂಲ ಮಾಡಬೇಕೆಂಬ ಮನಸ್ಸಿದ್ದರೂ ಜನರು ಸಹಕಾರ ನೀಡದಿದ್ದರೆ ಇದನ್ನು ತಡೆಗಟ್ಟಲು ಹೇಗೆ ಸಾಧ್ಯ ? ಸಾರ್ವಜನಿಕರ ಸಹಕಾರವಿಲ್ಲದೆ ಇವುಗಳನ್ನು ತಡೆಗಟ್ಟುವುದಕ್ಕೆ ಖಂಡಿತ ಸಾಧ್ಯವಿಲ್ಲ. ಜನತೆ ಮೊದಲು ಎಚ್ಚೆತ್ತುಕೊಳ್ಳಬೇಕು ಆಗಲೇ ಇವುಗಳನ್ನು ನಿರ್ಮೂಲ ಮಾಡಲು ಸಾಧ್ಯ. ಹಾಗೆ ಜನತೆ ಎಚ್ಚೆತ್ತುಕೊಳ್ಳದೆ ಈ ಲಂಚನಿರೋಧ ಇಲಾಖೆಯೇ ಒಂದು ಸೂಪರ್ ಕರಪ್ಟ್ ಇಲಾಖೆಯೆಂದು ಟೀಕಿಸುತ್ತಾ ಹೋದರೆ ಬಂದ ಫಲವೇನು ? ಇಂಥ ಟೀಕೆಗಳಿಂದ ತೊಂದರೆಯೇನೂ ತಪ್ಪಿದಂತಾಗಲಿಲ್ಲ. ಎಷ್ಟೋ ಜನರು ಈ ಲಂಚ, ಭ್ರಷ್ಟಾಚಾರಗಳಿಂದ ಬಹಳ ತೊಂದರೆ ಆಗುತ್ತಿದೆ ಎಂದು ಹೇಳುತ್ತಲೇ ಇದ್ದಾರೆ. ಆದರೆ ಅಂತ ಲಂಚಕೋರ ಅಧಿಕಾರಿಗಳನ್ನು ಹಿಡಿಸುವುದಕ್ಕೆ ಹೆದರುತ್ತಾರೆ. ಅವರಲ್ಲಿ ಸಾಹಿತ್ಯವಿಲ್ಲ ಎಂದಲ್ಲ ; ಆದರೆ ಅವರಲ್ಲಿ ಆ ಒಂದು ಐಕ್ಯಮತ್ಯವಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ಈ ವಿಚಾರದಲ್ಲಿ ಜನತೆಯಲ್ಲಿ ಐಕ್ಯಮತ್ಯವಿರಬೇಕಾದ್ದು ಬಹಳ ಅಗತ್ಯ. ಈ ಭ್ರಷ್ಟಾಚಾರಗಳನ್ನು ತಡೆಗಟ್ಟಲು, ಸರ್ಕಾರ, ಜನತೆ ಹಾಗೂ ಈ ಮಾನ್ಯ ಸಭೆಯ ಸದಸ್ಯರು ಇವರೆಲ್ಲರ ಸಹಕಾರವೂ ಅತ್ಯಗತ್ಯ. ವಿಚಾರ ಹೀಗಿರುವಾಗ ಸರ್ಕಾರದವರು ಯಾವನಾದರೊಬ್ಬ ಅಧಿಕಾರಿಯನ್ನು ಪ್ರಮೋಟ್ ಮಾಡಿದರೆ ಅದರ ಬಗ್ಗೆ ಗಲಾಟೆ ಎಬ್ಬಿಸತಕ್ಕ ಸದಸ್ಯರುಗಳೂ ಇಲ್ಲೇ ಇದ್ದಾರೆ. ಇದಕ್ಕೆ ಕೋಮುವಾರು ಬಣ್ಣವನ್ನೂ ಬಳಿಯುತ್ತಾರೆ, ಸಾಲದ್ದಕ್ಕೆ ಇದನ್ನೊಂದು ಪ್ರಿಸ್ಟೇಜ್ ಕೊಶ್ಚನ್ ಮಾಡಿ ನಾನಾ ರೀತಿಯ ಹೇಳಿಕೆಗಳನ್ನು ಹೊರಡಿಸುತ್ತಾರೆ. ಇಷ್ಟೆಲ್ಲವನ್ನೂ ಇಲ್ಲಿರತಕ್ಕ ನಾವುಗಳೇ ಮಾಡುತ್ತಿದ್ದೇವೆ. ಇದು ಇನ್ನೂ ಎಲ್ಲಿಯವರೆಗೆ ಹೋಗಿದೆ ಎಂದರೆ–ಈ ಈಕ್ವಲೈಜೇಷನ್ ಆಫ್ ಪೋಸ್ಟುಗಳ ವಿಚಾರದಲ್ಲಿ ನಾವು ಒಬ್ಬೊಬ್ಬರೂ ನಮ್ಮ ನಮ್ಮ ಆತ್ಮಗಳಿಗೇ ಕೈಹಾಕಿ ನೋಡಿಕೊಳ್ಳಬೇಕಾಗಿದೆ. ಇದರ ಬಗ್ಗೆ ಪಾರ್ಟಿಗಳೆಷ್ಟು ? ಹಳೇ ಮೈಸೂರೇ ಒಂದು ಪಾರ್ಟಿ. ಹೊಸ ಮೈಸೂರೇ ಒಂದು ಪಾರ್ಟಿ, ಗುಂಪುಗಳೆಷ್ಟು ! ಇದಾದಮೇಲೆ ಬ್ರಾಹ್ಮಣರದೇ ಒಂದು ಪಾರ್ಟಿ, ಒಕ್ಕಲಿಗರದೇ ಒಂದು ಪಾರ್ಟಿ, ಲಿಂಗಾಯಿತರದೇ ಒಂದು ಪಾರ್ಟಿ ಹೀಗೆಲ್ಲಾ ಆಗಿ ಸರ್ಕಾರ ಈ ದಿವಸ ಒಂದು ಕೆಲಸ ಮಾಡಲು ಮುಂದೆ ಬಂದರೆ ಅದಕ್ಕೆನೂರೊಂದು ಅಡ್ಡಿ ಆತಂಕಗಳನ್ನು ನಾವುಗಳೇ ಒಡ್ಡುತ್ತಿದ್ದೇವೆ. ಇದರಿಂದ ಸರ್ಕಾರದವರು ದಾರಿತಪ್ಪಿದರೆ ಇದರಲ್ಲಿ ತಪ್ಪು ಯಾರದು ? ಸರ್ಕಾರ ನಡೆಸತಕ್ಕ ಕೆಲಸಕಾರ್ಯಗಳಲ್ಲಿ ನಾವು ದಿನವಹಿ ಕೈಹಾಕುತ್ತಿದ್ದೇವೆ. ಇದನ್ನು ನಾವು ನಿಲ್ಲಿಸಿದರೆ ದೇಶಕ್ಕೆ ಇದರಿಂದ ಎಷ್ಟೋ ಉಪಕಾರವಾದೀತು. ಆದರೆ ಇಲ್ಲಿ ನಾವೂ ನೀವೂ ಇಬ್ಬರೂ ಸೇರಿ ಹೇಳುತ್ತಿರುವುದು ರಾಮಾಯಣ, ಹಾಕುವುದು ಚೋರಿ ಎನ್ನುವಂತಾಗಿದೆ. ಈ ಭ್ರಷ್ಟಾಚಾರ ಎಂಬುದು ಕಾಂಗ್ರೆಸ್ ಪಾರ್ಟಿ ಒಂದಕ್ಕೇ ಸೇರಿದ್ದಲ್ಲ. ಇದು ಇಲ್ಲಿರತಕ್ಕ ಎಲ್ಲಾ ಪಾರ್ಟಿಗಳಿಗೂ ಸೇರಿದೆ. ಆದುದರಿಂದ ಇದರ ನಿರ್ಮೂಲಕ್ಕೆ ಎಲ್ಲರೂ ಸಹಕರಿಸಬೇಕು ; ಇಲ್ಲದಿದ್ದರೆ ಇದನ್ನು ತಪ್ಪಿಸಲು ಸಾಧ್ಯವಿಲ್ಲ.

[MR. DEPUTY SPEAKER in the Chair]

ಆಫೀಸುಗಳಲ್ಲಿ ಯಾವ ಯಾವ ಸ್ಕೈಜುಗಳಲ್ಲಿ ನಾವು ಮತ್ತು ನೀವು ಇಂಟರ್‌ಫಿಯರ್ ಮಾಡುತ್ತಿದ್ದೇವೆನ್ನುವುದು ಎಂತಹ ಕಾರ್ಯಗಳನ್ನು ಮಾಡುತ್ತಿದ್ದೇವೆನ್ನುವುದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಇದರಿಂದ ಎಷ್ಟು ಅನ್ಯಾಯಗಳಾಗಿವೆ ಎನ್ನುವುದಕ್ಕೆ ಈ ಸರಕಾರದ ಮೇಲೆ ಸುಪ್ರೀಂ ಕೋರ್ಟುಗಳಲ್ಲಿ, ಹೈ ಕೋರ್ಟುಗಳಲ್ಲಿ ಆಪಾದನೆಗಳು ಸುತ್ತಿ ಹೋಗಿರುವಂತಹ ಅನೇಕ ನಿದರ್ಶನಗಳೂ ಇವೆ. ಆದುದರಿಂದ ಕೋಮುವಾರು ಭಾವನೆ ಎನ್ನುವಾಗ ಅವರವರ ಭಾಗದಿಂದ ಬಂದಿರುವವರು ಎಂದು ಇವರು ಮುಂಬಯಿ ಕರ್ಣಾಟಕದವರೂ ಇಂಡೆಗ್ರೇಟೆಡ್ ಏರಿಯಾದಿಂದ ಬಂದಿರುವವರು ಎನ್ನುವಭಾವನೆಯಿಂದಿರುವ ಅಧಿಕಾರಿಗಳು ನಮ್ಮಲ್ಲಿ ಇನ್ನೂ ತಪ್ಪಿಲ್ಲ. ಇದರಿಂದ ಸೆಕ್ರೆಟೇರಿಯಟ್ಟಿನಲ್ಲಿನ ಪರಿಸ್ಥಿತಿ ಹೇಗಾಗಿದೆ ಎನ್ನುವುದನ್ನು ನಾವು ಮತ್ತು ನೀವು ಎಲ್ಲರೂಕೂಡಿ ಪರಿಶೀಲನೆ ಮಾಡುವ ಪರಿಸ್ಥಿತಿನಮಗೆ ಬಂದಿದೆ. ಇದರಲ್ಲಿ ಸರಕಾರದ ಜವಾಬುದಾರಿ ಏನೂ ಇಲ್ಲ ಎಂದು ಹೇಳುವವನು ನಾನಲ್ಲ. ಇದೆ, ಒಂದು ನಿದರ್ಶನ ಹೇಳಬೇಕಾದರೆ ಒಬ್ಬ ಸಣ್ಣ ಕೇಸು ವರ್ಕರು ಎನ್ನುವವರು ಸೆಕ್ರೆಟೇರಿಯಟ್ಟಿನಲ್ಲಿ ಒಂದು ಸಣ್ಣ ನೋಟನ್ನು ಸರಿಯಾಗಿ ಬರೆಯದೆ ಹೋಗುವುದರಿಂದ ಎಂತಹ ದೊಡ್ಡ ಪರಿಣಾಮವಾಗುತ್ತದೆ ಎನ್ನುವುದು ತಿಳಿಯದೇ ಇಲ್ಲ. ಆದರೆ ಅದಕ್ಕೆ ತಕ್ಕ ಕ್ರಮವನ್ನು ಸೆಕ್ರೆಟೇರಿಯಟ್‌ನಲ್ಲಿ ಹೆಡ್ ಆಗಿರುವವರು ತೆಗೆದುಕೊಂಡರೆ ಇಂತಹ ಭ್ರಷ್ಟಾಚಾರಗಳನ್ನು ನಿಲ್ಲಿಸಬಹುದು. ಇದನ್ನು ಮಾಡುತ್ತಿಲ್ಲ ಎಂದು ನಾವು ಮತ್ತು ನೀವು ಎಲ್ಲರೂ ಹೇಳುತ್ತೇವೆ. ಜನತೆಯೂ ಹೇಳುತ್ತಾರೆ. ಹೀಗೆ ನಾವು ಮೂವರೂ ಸೇರಿ ಸರಕಾರವನ್ನು ಒಪ್ಪಿಸಿದರೆ ಇವನ್ನೆಲ್ಲಾ ನಿರ್ಮೂಲ ಮಾಡಲು ಸಾಧ್ಯವಾದೀತು. ಅನೇಕ ಸಂದರ್ಭಗಳಲ್ಲಿ ಹೆಡ್ ಆಫ್‌ದಿ ಡಿಪಾರ್ಟ್ಮೆಂಟಾದವರು ಒಬ್ಬ ಗುಮಾಸ್ತರನ್ನು ಟ್ರಾನ್ಸ್‌ಫರು ಮಾಡಿದರೆ ಅವರು ನಮ್ಮವರು ಅವರನ್ನು ವರ್ಗಮಾಡಬಾರದು ಎಂದು ಅವರ ಮೇಲೆ ಒತ್ತಾಯ ತರುವಂತಹ ಪ್ರಸಂಗಗಳು ಎಷ್ಟೋ ನಮ್ಮಲ್ಲಿವೆ. ಆದ್ದರಿಂದ ಸರಕಾರ ಮತ್ತು ಜನತೆ ಎಲ್ಲರೂ ಸೇರಿ ಇದು ಯೋಚನೆ ಮಾಡುವ ಕೆಲಸ. ಒಂದು ಡಿಪಾರ್ಟ್

(ಶ್ರೀ ಎ. ಪಿ. ಅಪ್ಪಣ್ಣ)

ಮೆಂಟಿನಲ್ಲಿ ಕೆಲವು ಜನರು ಒಂದೇ ಭಾಗಕ್ಕೆ ಸೇರಿದವರು ಕೇಸ್‌ವರ್ಕರು ನೋಟುಗಳನ್ನು ಹಾಕುವಾಗ ಅವರ ಭಾಗಕ್ಕೆ ಸೇರಿದವರ ಅನುಕೂಲಕ್ಕೆ ತಕ್ಕಂತೆ ಅವರ ಪಕ್ಷದ ಜನಕ್ಕೆ ತಕ್ಕಂತೆ ಮಾಡುವುದಾದರೆ ಅದು ಜನತೆಗೆ ಮಾಡುವ ಮಹಾ ಅಪರಾಧವಾಗುತ್ತದೆ. ಆದರೂ ಹಾಗೆ ನಡೆಯುತ್ತಿರುವಂತಹ ಪರಿಸ್ಥಿತಿಗಳೂ ನಮ್ಮಲ್ಲಿ ಅನೇಕವಿದೆ. ಇದನ್ನು ನಿರ್ಮೂಲ ಮಾಡುವುದಕ್ಕೆ ನಾವೂ ನೀವೂ ಎಲ್ಲರೂ ಸೇರಿ ಸರಕಾರದ ಗಮನಕ್ಕೆ ತಂದರೆ ಆಗ ಸರಕಾರ ಅಂತಹ ಒಂದೆರಡು ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಸರಿಯಾದ ಎಚ್ಚರಿಕೆಯನ್ನು ಕೊಟ್ಟರೆ, ಇತರ ಇಲಾಖೆಯಲ್ಲಿನ ಅಧಿಕಾರಿಗಳು ಎಚ್ಚೆತ್ತುಕೊಂಡು ಮುಂದೆ ಸರಿಯಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಅಲ್ಲದೆ ಸರಕಾರದಿಂದ ಸರಿಯಾದ ಪ್ರೊಟೆಕ್ಷನ್ನು ಸಿಗುವುದಿಲ್ಲ ಎಂದು ಜನ ಕೋರ್ಟಿಗೆ ಹೋಗುವುದೂ ತಪ್ಪಬಹುದು. ಆದರೆ ಈಚೆಗೆ ಸರಕಾರದಲ್ಲಿ ಪ್ರೊಟೆಕ್ಷನ್ನು ದೊರೆಯುತ್ತಿಲ್ಲ ಎನ್ನುವ ಭಾವನೆ ಜನರಲ್ಲಿ ಬಂದು ಕೋರ್ಟಿಗೆ ಹೋಗಲು ಅವಕಾಶವಾಗಿದೆ. ಸರಕಾರದವರೇ ತಮ್ಮ ಅಧಿಕಾರಿಗಳ ಬಗ್ಗೆ ಮತ್ತು ಆಡಳಿತದಲ್ಲಿರುವ ತಪ್ಪುಗಳನ್ನು ಅಧಿಕಾರಿಗಳಿಗೆ ಎಚ್ಚೆತ್ತುಕೊಳ್ಳುವಂತೆ ತೋರಿಸಿದರೆ ಅಧಿಕಾರಿಗಳೂ ಅವರ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ಆಸಕ್ತಿ ವಹಿಸುತ್ತಾರೆ. ಒಂದೇ ಒಂದು ನಿದರ್ಶನವನ್ನು ಇಲ್ಲಿ ಹೇಳಬೇಕಾಗಿದೆ. ಒಂದು ಸಂದರ್ಭದಲ್ಲಿ ಕ್ಯಾಬಿನೆಟ್ಟು ಡಿಸಿಷನ್ನು ಆಗಿ ಒಂದು ಲಿಸ್ಟು ಫೈನಲ್ಸೈಸ್ ಆಗಿ ಆರ್ಡರಾದ ಫೈಲು ಒಬ್ಬ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟಿನವರ ಕಡೆಗೆ ಬಂದಾಗ ಅವರು ಆದರ ಮೇಲೆ, "This will give room for a number of writ petitions" ಎಂದು ಪುನಃ ಕ್ಯಾಬಿನೆಟ್ಟಿಗೆ ಪರಿಶೀಲನೆಗಾಗಿ ವಿಚಾರಣೆ ಮಾಡಲು ಅಧಿಕಾರಿಗಳು ಬರೆದರೆ ಇದರಿಂದ ಜನತೆಗೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ತಿಳಿಯಬಹುದು. ಆದುದರಿಂದ ಸರಕಾರದವರು ತಮ್ಮ ನ್ಯಾಯವಾದ ಬೇಡಿಕೆಗೆ ಸರಿಯಾದ ಬೆಲೆ ಕೊಡಲಿಲ್ಲ ಎನ್ನುವುದನ್ನು ಪರಿಶೀಲನೆ ಮಾಡಬೇಕೆಂದು ಇಂತಹ ಜಾಗಗಳಲ್ಲಿದ್ದವರಿಗೆ ತೊಂದರೆಯಾಗಿದೆ ಎನ್ನುವ ತಕರಾರುಗಳನ್ನು ಹಾಕಿ ರಿಟ್‌ಪಿಟಿಷನ್ನನ್ನು ಹಾಕಿದಾಗ ನ್ಯಾಯವಾಗಿ ಜಾಗಗಳು ಯಾರಿಗೆ ದೊರಕಬೇಕೋ ಅದು ದೊರಕಬೇಕೆಂದು ಆರ್ಡರು ಬಂತು. ಆದರೆ ಯಾರು ಯಾರಿಗೆ ಆ ಜಾಗಗಳು ನ್ಯಾಯವಾಗಿ ಸಿಗಬೇಕೆಂದು ಕೇಳಿದ್ದರೋ ಅವರೆಲ್ಲಾ ಈಗ ರಿಟೈರಾಗಿದ್ದಾರೆ. ಈ ದೃಷ್ಟಿಯಿಂದ ಎಲ್ಲಿ ನಿಜವಾದ ತೊಂದರೆಯಾಗಿದೆ ಎಲ್ಲಿ ಅಧಿಕಾರಿಗಳು ದಾರಿತಪ್ಪಿ ಹೋಗಿದ್ದಾರೆ ಎಲ್ಲಿ ಬೇಕು ಬೇಕಾಗಿ ಇನ್ನೊಬ್ಬರಿಗೆ ತೊಂದರೆ ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವ ವಿಚಾರಗಳನ್ನೆಲ್ಲಾ ಸರಕಾರದ ಗಮನಕ್ಕೆ ತಂದು, ಅಂತಹ ಅಧಿಕಾರಿಗಳ ಮೇಲೆ ಸರಿಯಾದ ಶಿಕ್ಷೆ ಕೊಡುವಂತಾದರೆ, ಬಾಕಿ ಇರುವ ಇತರ ಅಧಿಕಾರಿಗಳೂ ಎಚ್ಚೆತ್ತು ಕೆಲಸ ಮಾಡಲನುಕೂಲವಾಗುತ್ತದೆ. ಮತ್ತು ನಿಷ್ಪಕ್ಷಪಾತವಾದ ತೀರ್ಮಾನವನ್ನು ತೆಗೆದುಕೊಳ್ಳಲು ಸರಕಾರದ ಕಡೆಯಿಂದ ಭ್ರಷ್ಟಾಚಾರ ನಿವಾರಣೆ ಮಾಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಅದಕ್ಕಾಗಿ ಈ ಕಾರ್ಯವನ್ನು ದೇಶದ ಜನತೆಯೆಲ್ಲರೂ ಒಂದುಗೂಡಿ ಸರಕಾರದೊಡನೆ ಮಾಡಲು ಸಾಧ್ಯವಿದೆ. ಈ ದೃಷ್ಟಿಯಿಂದ ನಾವು ಮತ್ತು ನೀವೂ ಸಹಕಾರ ಮಾಡಿ ಮಾಡಿದರೆ ಇದು ನಿರ್ಮೂಲವಾಗುವುದಕ್ಕೆ ಸಾಧ್ಯವಿದೆ. ಇದಕ್ಕಾಗಿ ಒಂದು ಸಮಿತಿಯಾಗಬೇಕಾದ ಪ್ರಸಂಗವೇನೂ ಬೇಕಿಲ್ಲ. ಭ್ರಷ್ಟಾಚಾರ ಹೇಗೆ ಇದೆ ಹೇಗೆ ನಿರ್ಮೂಲ ಮಾಡಬಹುದು ಜನತೆ ಯಾವ ರೀತಿ ಸಹಕಾರ ಮಾಡಬಹುದು ಸರಕಾರ ಯಾವರೀತಿ ಮಾಡಬಹುದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಆರೀತಿ ಮಾಡುವುದಕ್ಕೆ ಸಾಧ್ಯವಿದೆ. ಹಾಗೆ ಮಾಡದೇ ಕೋಮುವಾರು ಭಾವನೆ ಇದೆ ಬಿಟ್ಟುಬಿಡಿ, ಎನ್ನುವುದಕ್ಕಿಂತ ನಾವೂ ನೀವೂ ಎಲ್ಲರೂ ಒಂದುಗೂಡಿ ಮಾಡುವುದು ಸರಿಯಾಗಿ ಕಾಣುತ್ತದೆ. ಇದಕ್ಕೆ ಪ್ರತ್ಯೇಕವಾದ ಕಮಿಟಿಯನ್ನು ನೇಮಕ ಮಾಡುವ ಅಗತ್ಯವೇನು ? ಸರಕಾರ ಮತ್ತು ಜನತೆಯ ಮನಸ್ಸಿನ ವರ್ತನೆಯಲ್ಲಿ ಪರಿವರ್ತನೆಯಾಗುವಂತೆ ಮಾಡಬಹುದು. ಹಾಗೆಲ್ಲರೂ ಒಂದುಗೂಡಿ ಕೆಲಸ ಮಾಡಿದರೆ ಇದನ್ನೆಲ್ಲ ನಿರ್ಮೂಲ ಮಾಡಬಹುದು. ನಮ್ಮ ಮನಸ್ಸು ಪರಿವರ್ತನೆ ಯಾಗಬೇಕು, ಸರಕಾರದವರ ಮನಸ್ಸು ಪರಿವರ್ತನೆಯಾಗಬೇಕು. ಹೀಗೆ ಮಾಡಿದರೆ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬಹುದು ಹಾಗೆ ನಿರ್ಮೂಲ ಮಾಡಲಿಕ್ಕೆ ಸಾಧ್ಯವೂ ಇದೆ. ಈ ದೃಷ್ಟಿಯಿಂದ ಇಂತಹ ಸಮಿತಿ ಮಾಡಬೇಕೆನ್ನುವ ಶಿಫಾರಸು ಅಗತ್ಯವಿಲ್ಲ ಎಂದು ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಈ ಸಭೆಯ ಮುಂದೆ ಬಂದಿರತಕ್ಕ ಖಾಸಗೀ ನಿರ್ಣಯ ಹೀಗಿದೆ.

"ಸರಕಾರದ ಹಾಗೂ ಸರಕಾರದ ಪೂರ್ಣ ಆಡಳಿತಕ್ಕೆ ಒಳಪಡದ ಆಡಳಿತಾತ್ಮಕ ಹಾಗೂ ಸಾಂಘಿಕ ಸಂಸ್ಥೆಗಳಲ್ಲಿರತಕ್ಕ ದುರಾಚಾರ ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾ

ಚಾರಗಳನ್ನು ಪರಿಶೀಲಿಸಲು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ತೊಡೆದು ಹಾಕುವ ಕ್ರಮಗಳನ್ನು ಕಂಡು ಹಿಡಿದು ಜಾರಿಗೆ ತರಲು ಸೂಕ್ತ ಸಮಿತಿಯೊಂದನ್ನು ಕೂಡಲೇ ರಚಿಸಬೇಕೆಂದು ಈ ಸಭೆಯವರು ಸರಕಾರಕ್ಕೆ ಶಿಫಾರಸು ಮಾಡುತ್ತಾರೆ.''

ನಾನು ಶ್ರೀಮಾನ್ ಅಪ್ಪಣ್ಣನವರು ಮಾತನಾಡಿದ ಮೇಲೆ ನಾನು ಇಲ್ಲಿ ಮಾತನಾಡಬೇಕೆಂದು ಮನಸ್ಸು ಮಾಡಿದೆ. ಕೇಂದ್ರ ಸರಕಾರದಲ್ಲಿ ಇಪ್ಪತ್ತು ಹದಿನೈದು ವರ್ಷಗಳ ಕಾಲ ತಮ್ಮ ಆಳವಾದ ಅನುಭವವನ್ನು ಪಡೆದಂತಹ ಪ್ರಧಾನ ಮಂತ್ರಿಗಳೇ ಭ್ರಷ್ಟಾಚಾರ, ಸ್ವಜನಪಕ್ಷಪಾತ ಎನ್ನುವುದನ್ನು ಈ ದೇಶದಲ್ಲಿ ನಿರ್ಮೂಲ ಮಾಡದೇ ಹೋದರೆ ಈ ದೇಶವು ಶಾಶ್ವತವಾದ ತಳಹದಿಯ ಮೇಲೆ ನಿಲ್ಲಲು ಅವಕಾಶವಾಗುವುದಿಲ್ಲ ಅದಕ್ಕಾಗಿ ತಕ್ಕ ಉಳುಮೆ ಮಾಡಬೇಕೆಂದು ಹೇಳಿದರು. ಅಲ್ಲದೆ ಅಲ್ಲಿರುವ ಹೋಂ ಶಾಖೆಯ ಮಂತ್ರಿಗಳಾದ ಶ್ರೀಮಾನ್ ನಂದಾರವರು ಇನ್ನೆರಡು ವರ್ಷಗಳಲ್ಲಿ ಈ ಭ್ರಷ್ಟಾಚಾರಗಳನ್ನು ತೊರೆದು ಹಾಕದೇ ಹೋದರೆ ನಾನು ಈ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿರುವುದಿಲ್ಲ ಮತ್ತು ಈ ಸ್ಥಾನವನ್ನು ಬಿಡುತ್ತೇನೆಂದು ಹೇಳಿದ್ದಾರೆ. ಇದಕ್ಕೋಸ್ಕರ ಒಂದು ಕಮಿಟಿ ನಮ್ಮ ಇಡೀ ರಾಜ್ಯದಲ್ಲೆಲ್ಲಾ ಸುತ್ತಿ ಹಿಂದೂಸ್ತಾನದಲ್ಲಿರುವ ಎಲ್ಲ ಕೇಂದ್ರ ಸರಕಾರದ ಆಡಳಿತದಲ್ಲಿರುವ ಕಚೇರಿಗಳನ್ನು ಅಮೂಲಾಗ್ರವಾಗಿ ಪರಿಶೀಲನೆ ಮಾಡಿ ನೋಡಿಕೊಂಡು ಹೋಗಿದ್ದಾರೆ. ಮತ್ತು ತಮ್ಮ ಸೆಕ್ರೆಟೇರಿಯಟ್ಟಿನಲ್ಲಿ ಒಬ್ಬ ಸೆಕ್ರಟರಿಗಳನ್ನು ಇದಕ್ಕಾಗಿ ನೇಮಕ ಮಾಡಬೇಕೆಂದು ಶ್ರೀ ನಂದಾರವರು ಯೋಚನೆಮಾಡುತ್ತಿದ್ದಾರೆಂದು ಗೊತ್ತಾಗಿದೆ. ಇಂತಹ ಹೊತ್ತಿನೊಳಗೆ ನಮ್ಮ ಮಾನ್ಯ ಸದಸ್ಯರಾದ ಅಪ್ಪಣ್ಣನವರು ನಾವು ಮತ್ತು ನೀವು ಒಂದುಗೂಡೋಣ. ಇದರಿಂದ ಲಂಚ ಕೊಡುವವರು ಯಾರು, ತೆಗೆದುಕೊಳ್ಳುವವರು ಯಾರು ಇದಕ್ಕೆ ಕಾರಣವೇನು ಎನ್ನುವುದನ್ನೆಲ್ಲಾ ತಿಳಿದುಕೊಂಡು ಅನುಕೂಲ ಮಾಡಬಹುದು ಎಂದು ಹೇಳಿದರು. ಕಾಂಗ್ರೆಸ್ಸಿನಲ್ಲಿದ್ದೂ ಅವರಿಗೆ ತಿಳಿದಿರತಕ್ಕ ದೋಷಗಳಿದ್ದರೂ ಅವನ್ನು ಮರೆಮಾಚಿಕೊಂಡು ನಮ್ಮ ದೇಶದಲ್ಲಿ ದೋಷಾರೋಪಣೆ ಮಾಡುವುದು ಸರಿಯಲ್ಲ ಎಂದು ಎಮೋಷನಲ್ ಆಗಿ ಮಾತನಾಡಿದರು.

ಈ ರಾಜ್ಯದಲ್ಲಿ ಭ್ರಷ್ಟಾಚಾರವಿದೆ, ಸ್ವಜನ ಪಕ್ಷಪಾತವಿದೆ. ಲಂಚ ಕೋರತನವಿದೆ, ಕೊಡುವವರು ಕೊಡುತ್ತಾರೆ. ತೆಗೆದುಕೊಳ್ಳುವವರು ತೆಗೆದುಕೊಳ್ಳುತ್ತಾರೆನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಅದನ್ನು ನಿರ್ನಾಮ ಮಾಡಬೇಕಾದರೆ, ತೊಳೆದು ಸರ್ಕಾರ ಶುದ್ಧೀಕರಣವಾಗಬೇಕಾದರೆ, ಲಂಚಕೊಡುವುದು ನಿಂತಾಗಲೇ; ಆವಾಗಲೇ ಅದೂ ನಿಂತು ಹೋಗಬಹುದು. ನಾವು ಇದನ್ನು ಇಲ್ಲಿ ಮೂರು ದಿನ ಚರ್ಚೆ ಮಾಡಿದರೆ ಸಾಧ್ಯವಿಲ್ಲ. ಇದಕ್ಕೆ ಒಂದು ಸಮಿತಿ ನೇಮಿಸಬೇಕು. ಅದರಲ್ಲಿ ಒಳ್ಳೆಯ ಬುದ್ಧಿವಂತರು, ತಜ್ಞರು, ವಿವೇಕ ಶಾಲಿಗಳು, ವಿಷಯಗಳನ್ನೆಲ್ಲವನ್ನೂ ಕೂಡ ತಿಳಿದಿರುವಂಥವರು ಇದ್ದು, ಅವರು ಸಮಾಜದಲ್ಲಿ ಹೊಕ್ಕಿರತಕ್ಕಂಥ, ಸರಕಾರದಲ್ಲಿ ಹೊಕ್ಕಿರತಕ್ಕಂಥ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಲಂಚ ನಿರ್ಮೂಲ ಮಾಡುವುದಕ್ಕೆ ಇಂಥ ಮಾರ್ಗ ಅನುಸರಿಸಬೇಕು, ಇಂಥ way and means adopt ಮಾಡಬೇಕು ಎಂದು ಸಲಹೆ ಮಾಡಬೇಕೆ ಹೊರತು, ನಾವು ಇಲ್ಲಿ ಕುಳಿತು ಮೂರು ದಿನ ಚರ್ಚೆ ಮಾಡಿದರೆ ಅದು ಸಾಧ್ಯವಿಲ್ಲ. ಅದಕ್ಕೋಸ್ಕರವಾಗಿ ನಾವೂ ನೀವೂ ಕೂಡ ಇದನ್ನು ಯೋಚನೆ ಮಾಡಬೇಕು. ಕೇಂದ್ರ ಸರ್ಕಾರದವರು ಇದನ್ನು ಮನಗಂಡು ಒಂದು ಸಮಿತಿಯನ್ನು ಮಾಡಿದ್ದಾರೆ, ಅದರ ಕಾರ್ಯಕಲಾಪ ಆಗಲೇ ಪ್ರಾರಂಭವಾಗಿದೆ. ಅದೇ ಒಂದು ಸಮಿತಿಯನ್ನು ಈ ರಾಜ್ಯದಲ್ಲಿ ಸಂಚಾರ ಮಾಡಿ ಸಲಹೆ ಕೊಡಿ ಎಂದು ಕೇಳಿಕೊಳ್ಳಬಹುದು. ಕೇಂದ್ರದವರೇ ಸಮಿತಿ ಮಾಡಿರುವಾಗ, ನಾವೂ ನೀವೂ ಈ ಸಮಿತಿ ಈ ರಾಜ್ಯಕ್ಕೆ ಬೇಡ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ಅದಕ್ಕೋಸ್ಕರ ಶ್ರೀಮಾನ್ ಅಪ್ಪಣ್ಣನವರು ವ್ಯಕ್ತ ಪಡಿಸಿದ ಅಭಿಪ್ರಾಯಗಳನ್ನು ಪುನಃ ಅವರು ಪರ್ಯಾಲೋಚನೆ ಮಾಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಲಂಚ ರುಷುವತ್ತು ಇಲ್ಲವೆಂದು ಯಾರಿಗೂ ಹೇಳುವುದಕ್ಕೆ ಸಾಧ್ಯವಿಲ್ಲ. ಮೊನ್ನೆ ತಾನೆ ಮೈಸೂರು ಸಹಕಾರ ಬ್ಯಾಂಕಿನ ಒಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಾ, ಹೇಳಿದರು : ''ನಮಗೆ ಭ್ರಷ್ಟಾಚಾರ, ಲಂಚಕೋರತನ ನಿರ್ಮೂಲಮಾಡುವುದಕ್ಕೆ ಕಾನೂನು ಅಡ್ಡಿ ಇದೆ. ಈ ಕಾನೂನು ರಿವೈಸ್ ಮಾಡದೆ ಹೋದರೆ, ಇದರ ಬಗ್ಗೆ ಪುನರಾಲೋಚನೆ ಮಾಡದೆ ಹೋದರೆ ಲಂಚ ಕೊಡುವವನು ಕೊಡುತ್ತಾನೆ, ತೆಗೆದುಕೊಳ್ಳುವವನು ತೆಗೆದುಕೊಳ್ಳುತ್ತಾನೆ, ಇದರಲ್ಲಿ ಕೈಹಾಕುವುದಕ್ಕೆ ಕಷ್ಟ ಬಂದಿದೆ'' ಎಂದು ಈ ಕಾನೂನು ರಿವೈಸ್ ಮಾಡುವುದಕ್ಕೆ ಕಾಲ ಸಮೀಪವಾಗಿದೆ, ಪರಿಪಕ್ವವಾಗಿದೆ, ಕಾಲಕ್ಕೆ ತಕ್ಕಂತೆ ಕಾನೂನು ಮಾಡಬೇಕು, ಭ್ರಷ್ಟಾಚಾರ ನಿರ್ಮೂಲ ಮಾಡದೆ ಹೋದರೆ, ದಕ್ಷ ಆಡಳಿತ ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಅವರು ಕೂಡ ಹೇಳಿದ್ದಾರೆ. ಒಂದು ರಾಜ್ಯದ ಮುಖ್ಯ ಮಂತ್ರಿಗಳು ಮನಸ್ಸಿನಲ್ಲಿ ಆಳವಾಗಿ ಯೋಚನೆ ಮಾಡಿ ಹಾಗೆ ಹೇಳಿರುವಾಗ ನಾವು ಈ ಸಭೆಯಲ್ಲಿ ಕೂತುಕೊಂಡು ಅದು ಅಲ್ಲಲ್ಲಿ ಭ್ರಷ್ಟಾ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಚಾರ ''ನಿಮ್ಮ ಭುಜದಲ್ಲಿ, ನಿಮ್ಮ ತಲೆ ಮೇಲೆ'' ಇದೆಯೆಂದು ಹೇಳಿದರೆ ಏನು ಹೇಳೋಣ. ಲಂಚ ಇರುವುದು ಸರ್ವ ಸಿದ್ಧಾಂತ, ಭ್ರಷ್ಟಾಚಾರವಿರುವುದು ಸರ್ವ ಸಿದ್ಧಾಂತ; ಸ್ವಜನ ಪಕ್ಷಪಾತವಿರುವುದು ಸರ್ವ ಸಿದ್ಧಾಂತವಾಗಿ ಹೋಗಿದೆ. ಇವುಗಳನ್ನು ನಿರ್ಮೂಲ ಮಾಡುವುದಕ್ಕೆ ಯಾವ ಮಾರ್ಗ ಅನುಸರಿಸಬೇಕು ಎಂದು ಯೋಚನೆ ಮಾಡಬೇಕು. ಶ್ರೀಮಾನ್ ಅಪ್ಪಣ್ಣನವರು, ಜನಗಳ ಸಹಕಾರವಿಲ್ಲದೆ ಲಂಚ ನಿಲ್ಲಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ನಮ್ಮ ಸಿರಾ ತಾಲ್ಲೂಕಿನೊಳಗೆ ಅಕ್ಟೋಬರ್ 21ನೇ ತಾರೀಖಿನ ದಿನ ಆಂಟಿಕರಪ್ಷನ್ ಇಲಾಖೆಗೆ, ನಾಲ್ಕು ಜನ ಕಾನ್‌ಸ್ಟೇಬಲ್ಲರು ನಾಲ್ಕು ಕುರಿ, 50 ರೂಪಾಯಿ ಲಂಚವನ್ನು ತೆಗೆದುಕೊಂಡರೆಂದು ಒಂದು ಹಳ್ಳಿಯವರು ಕಂಪ್ಲೇಂಟ್ ಕೊಟ್ಟರು. ಕೊಟ್ಟಿದ್ದೇ ಅಪರಾಧವೋ, ಆ ಸ್ಟೇಷನ್ನಿನ ಸಬ್-ಇನ್‌ಸ್ಪೆಕ್ಟರು, ಆರುಜನ ಕಾನ್‌ಸ್ಟೇಬಲ್ಲುಗಳು ಹ್ಯಾಂಡ್‌ಕಪ್, ಆರ್ಮ್ಸ್, ಲಾರಿ ಎಲ್ಲಾ ಹಳ್ಳಿಗೆ ತೆಗೆದುಕೊಂಡು ಬಂದು, ಯಾರು ಕಂಪ್ಲೇಟ್ ಕೊಟ್ಟರೋ ಅವರ ಮನೆತನದವರಿಗೆಲ್ಲಾ ಹ್ಯಾಂಡ್‌ಕಫ್ ಹಾಕಿದರು. ಪೋಲೀಸಿನವರಿಗೆ ಒಂದು ಅಧಿಕಾರ ಕೊಟ್ಟಿದ್ದಾರೆ.

Mr. DEPUTY SPEAKER.—Let the Hon'ble Member not go into details.

Sri C. J. MUCKANNAPPA.—If, I don't give details, my friend the Hon'ble Minister will say 'Let the party concerned come forward and say they such and such person has demanded bribe'.

ತಾವು ಮಾಡಿದ ದುರುಳ ತನವನ್ನು ಸಮರ್ಥಿಸಿ ಕೊಳ್ಳುವುದಕ್ಕೆ, ತಮ್ಮ ಮೇಲೆ ದೂರು ಕೊಟ್ಟವರ ಮೇಲೆ ಪೋಲೀಸಿನವರು ಅನ್‌ಟಚ್‌ಬಲಿಟಿ ಅಕ್ಟ್ ಪ್ರಕಾರ ಒಂದು ಕೇಸು ಹಾಕಿದರು— ಡಿಫೆನ್ಸ್ ಕ್ರಿಯೇಟ್ ಮಾಡಿಕೊಳ್ಳುವುದಕ್ಕೆ ಅನ್‌ಟಚಬಲಿಟಿ ಅಪರಾಧದ ಮೇಲೆ ಅವರನ್ನು ಅರೆಸ್ಟ್ ಮಾಡಿ, ಆರು ಮೈಲಿ ಹ್ಯಾಂಡ್ ಕಫ್ ಹಾಕಿ ಪ್ರೊಸೆಷನ್ನಿನಲ್ಲಿ ಸ್ಟೇಷನಿಗೆ ತೆಗೆದುಕೊಂಡು ಬಂದರು. ಕರೆದುಕೊಂಡು ಬಂದು ಅವರಿಗೆ ಸ್ಟೇಶನ್ನಿನಲ್ಲಿ ಏನು ಮಾಡಿದರು ಗೊತ್ತೆ!

Sri B. D. JATTI.—It is likely that the case to which you are referring may go to court.

Mr. DEPUTY SPEAKER.—If it is an individule case, why refer to it in detail?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಟೇಷನ್ನಿಗೆ ತೆಗೆದುಕೊಂಡು ಹೋಗಿ ಏನು ಮಾಡಿದರು ಅವರಿಗೆ? ಅರ್ಜಿ ಬರೆದವನು ನೀನೋ ಎಂದು ಕೇಳಿ, ಜೋಡಿನಲ್ಲಿ ಹೊಡೆದರು. It is individual ಭ್ರಷ್ಟಾಚಾರ, it is individual ಲಂಚಕೋರತನ it is individual ಕ್ರೂರತನ—it is also *en masse* ತಾವು ಈ ಘೋರ ಖೂಳತನದ ಪರಿಣಾಮ ಜನತೆಯ ಮೇಲೆ ಏನಾಗುತ್ತದೆಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಲಂಚ ತೆಗೆದುಕೊಂಡವರ ಮೇಲೆ ಅರ್ಜಿ ಬರೆದವನಿಗೆ ಹೊಡೆದು ಬಡಿದು, ಅವನ ಬಾಯಿಗೆ ಪಾಯಿಖಾನೆ ಹಾಕಿದರು, ಉಚ್ಚೆ ಹೊಯ್ದರು. ಇಂಥ ಅಮಾನುಷ ಕೃತ್ಯಗಳನ್ನು ಮಾಡಿದರೆ, ಸಮಾಜದಲ್ಲಿರತಕ್ಕಂಥವನು ಲಂಚದ ದೂರು ಅಧಿಕಾರಿಯ ಮೇಲೆ ಕೊಡುವುದಕ್ಕೆ ಎಷ್ಟು ಧೈರ್ಯಶಾಲಿಯಾಗಿರಬೇಕು. ಯಾರಾದರೂ ಅಧಿಕಾರಿ ಲಂಚ ತೆಗೆದುಕೊಂಡಾಗ ಆ ವರ್ತಮಾನ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಕೊಡುವುದಕ್ಕೆ ಧೈರ್ಯ ಬರುತ್ತದೆಯೆ ಎನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಿ. ಕಂಪ್ಲೇಂಟ್ ಕೊಟ್ಟಿದ್ದೆ ಕಾರಣ ಮಾಡಿಕೊಂಡು, ಫಿರ್ಯಾದುದಾರರನ್ನು ಪೋಲೀಸ್ ಸ್ಟೇಶನ್ನಿಗೆ ತೆಗೆದುಕೊಂಡು ಹ್ಯಾಂಡ್ ಕಫ್ ಹಾಕಿ ಕರೆದುಕೊಂಡು ಹೋಗಿ, ಜೋಡಿನಲ್ಲಿ ಹೊಡೆದು ಬಾಯಿ ನಲ್ಲಿ ಪಾಯಿಖಾನೆ ತುರುಕಿ, ಉಚ್ಚೆ ಹಾಕಿ, 3-4 ದಿನ ಚಿತ್ರ ಹಿಂಸೆ ಮಾಡುವುದಾದರೆ ಆಂಟಿ ಕರಪ್ಷನ್ ಇಲಾಖೆಗೆ ಯಾರಿಗೆ ದೂರು ಕೊಡುವ ಎದೆಗಾರತನವಿರುತ್ತದೆ. ಈ ಪೋಲೀಸ್ ಅಧಿಕಾರಿ, ಎರಡು ಸಾವಿರ ರೂಪಾಯಿ ಬಹಿರಂಗವಾಗಿ ತೆಗೆದುಕೊಳ್ಳುತ್ತೇನೆ ಎಂದು ಅವರನ್ನು ಬೆದರಿಸುತ್ತಿದ್ದನಂತೆ. ಸಣ್ಣಪುಟ್ಟ ನೌಕರರು ಗ್ರಾಮುಗಳಲ್ಲಿ ಊರುಗಳಲ್ಲಿ ಹೀಗೆ ಟಾಂಟಾಂ ಮಾಡುತ್ತಿದ್ದಾರೆ. ನೀವು ವಿಧಾನ ಸೌಧದಲ್ಲಿ ಕೂತುಕೊಂಡು ಎಷ್ಟು ಭದ್ರವಾಗಿ ಆಡಳಿತ ನಡೆಸುತ್ತಿದ್ದೇವೆಂದು ಹೇಳುವುದು ಎಷ್ಟು ಹಾಸ್ಯಾಸ್ಪದ. ತಾವು ಇಲ್ಲಿ ಕೂತುಕೊಂಡು ಸುಭದ್ರವಾದ ಸರ್ಕಾರ, ಸ್ವಚ್ಛವಾದ ಜೀವನ, ಇಟ್ಟುಕೊಂಡಿದ್ದೇವೆ. ನಿಶ್ಚಲವಾಗಿ ಕೆಲಸ ಮಾಡುತ್ತಿದ್ದೇವೆಂದು ಹೇಳಿದರೆ ಈ ಭ್ರಷ್ಟಾಚಾರ

ಹೋಗುತ್ತದೆಯೇ ! ಇದಕ್ಕೆ ಗೌವರ್ನ್‌ಮೆಂಟ್ ಆರ್ಡರ್ ಮಾಡಿದರು, ಮಾಡಿದರೆ ಏನು ಆಯಿತು ! ಲಂಚ ತೆಗೆದುಕೊಂಡವನ ಮೇಲೆ ಎನ್‌ಕ್ವೈಯರಿ ಪ್ರಾರಂಭ ಮಾಡಿದರೆ ಸಬ್‌ಇನ್‌ಸ್ಪೆಕ್ಟರು, ಇನ್‌ವಾಲ್ವ್ ಆದವನು ತಮ್ಮ ಜಾತಿಗೆ ಸೇರಿದವನು, ಅವನನ್ನು ಉಳಿಸಬೇಕು ; ಸ್ವಜನ ಪಕ್ಷಪಾತ ಷುರುವಾಯಿತು. ಲಂಚ ಕೊಟ್ಟವರು ಇಲ್ಲಿಟರೇಟ್ ಪೀಪಲ್ ಅವರು ಕೊಟ್ಟ ಸ್ಟೇಟ್‌ಮೆಂಟ್ ಒಂದು, ಬರೆದು ಕೊಂಡದ್ದು ಒಂದು ; ಅವರ ಹೆಬ್ಬೆಟ್ಟಿನ ಗುರುತು ಹೇಳಿಕೆಗೆ ಒತ್ತಿಕೊಂಡರೂ ಸರಿ, ಹೇಳಿಕೆಗಳಲ್ಲಿ ಡಿಸ್‌ಕ್ರೆಪನ್ಸಿ ಇದೆ, ಲಂಚದ ಅಪಾದನೆ ಬಂದಿರುವವನನ್ನು ಚಾರ್ಜ್ ಮಾಡುವುದಕ್ಕಾಗುವುದಿಲ್ಲವೆಂದರು ; ಚಾರ್ಜ್ ಫ್ರೇಮ್ ಮಾಡುವುದಿಲ್ಲವಾದ್ದರಿಂದ, ಪನಿಷ್ ಮಾಡುವುದಕ್ಕೂ ಆಗುವುದಿಲ್ಲವೆಂದರು. ಅದಕ್ಕೋಸ್ಕರ ಹೇಳುತ್ತೇನೆ ; ಲಂಚ ತೆಗೆದುಕೊಂಡವನ ಮೇಲೆ ಸ್ವಜನ ಪಕ್ಷಪಾತ ಬಂತು ; ಸ್ವಜನ ಪಕ್ಷಪಾತ ಬಂದ ಕೂಡಲೆ ಕಾನೂನು ಅಡ್ಡಿಬಂದಿತು. ಅದಕ್ಕೋಸ್ಕರ ಈ ಕಾನೂನನ್ನು ಇವತ್ತಿನ ದಿವಸದ ವಿಪರೀತ ಪರಿಸ್ಥಿತಿಗೆ ಬದಲಾವಣೆ ಮಾಡಿಕೊಂಡು, ಸಾರ್ವಜನಿಕರೆ ಇರಲಿ, ಅಧಿಕಾರಿಗಳೆ ಇರಲಿ, ಎಷ್ಟೇದೊಡ್ಡವರು ಇರಲಿ ಹಿಡಿಯುವ ಹಾಗಿರಬೇಕು. ಸರಕಾರಿ ಅಧಿಕಾಗಳು ಲಂಚ ತೆಗೆದುಕೊಂಡರೆ, ಅವರನ್ನು ಶಿಕ್ಷೆ ಮಾಡುವುದಕ್ಕೆ ಸಿ.ಸಿ.ಎ ರೂಲ್ಸ್ ಅಡ್ಡಿ ಬರುತ್ತದೆ. ಅದನ್ನು ಅಮೆಂಡ್ ಮಾಡದಿದ್ದರೆ, ಇನ್ನು ಹತ್ತು ಸರಕಾರಗಳು ಬಂದು ಹೋದರೂ ಲಂಚ ನಿಲ್ಲಿಸುವುದಕ್ಕಾಗುವುದಿಲ್ಲ. ಈಗಿರುವ ನಿಯಮದ ಪ್ರಕಾರ ಮೊದಲು ನೋಟೀಸು ಕೊಡಬೇಕು ; ನೋಟೀಸು ಕೊಟ್ಟಾದ ಮೇಲೆ ಎನ್‌ಕ್ವಯರಿ ಆಗಬೇಕು ; ಎನ್‌ಕ್ವಯರಿ ಆದ ಮೇಲೆ ಚಾರ್ಜ್ ಫ್ರೇಮ್ ಮಾಡಬೇಕು ; ಚಾರ್ಜ್ ಫ್ರೇಮ್ ಆದ ಮೇಲೆ ನೌಕರನನ್ನು ಸಸ್ಪೆಂಡ್ ಮಾಡಬೇಕು, ಇಷ್ಟೆಲ್ಲಾ ಮಾಡದೆ ಹೋದರೆ ಮಾಡುವುದಕ್ಕಾಗುವುದಿಲ್ಲ. ಇದನ್ನು ತಾವು ಇವತ್ತಿನ ದಿವಸ ಸ್ವಲ್ಪ ಯೋಚನೆ ಮಾಡಬೇಕು. ಈಗ ತಾನೆ ಶ್ರೀಮಾನ್ ಅಪ್ಪಣ್ಣನವರು ಹೇಳಿದರು. ಲಂಚ ನಾವು ಕೊಡುತ್ತೇವೆ. ಅವರು ತೆಗೆದುಕೊಳ್ಳುತ್ತಾರೆಎಂದು. ತಾಲ್ಲೂಕು ಆಫೀಸು, ಪೋಲೀಸು ಆಫೀಸರು, ಡೆಪ್ಯುಟಿ ಕಮಿಷನರ ಆಫೀಸು, ಅಸಿಸ್ಟೆಂಟ್ ಕಮಿಷನರ ಆಫೀಸು, ಎಲ್ಲಿಗೇ ಹೋಗಿ ಏನಾದರೂ ಕೆಲಸವಾಗಬೇಕಾಗಿದ್ದರೆ ಕೈಗೆ ಬಿದ್ದರೇ ಕಾಗದ ಮುಂದಕ್ಕೆ ಹೋಗುತ್ತದೆ. ಲಂಚ ಕೊಡದೆ, ಕೆಲಸ ಆಗದೇ ಹೋದರೆ ಏನು ಮಾಡಬೇಕು ಅಂತ ಹೇಳಿ ಜನಕ್ಕೆ ಅರ್ಥವಾಗುವುದಿಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—ಕೆಲಸ ಆಗದೆ ಹೋದರೆ ಅಲ್ಲ. ನೌಕರರಿಗೆ ಅನೇಕ ಕೆಲಸಗಳಿರುತ್ತವೆ. ಅವಕ್ಕೆ ಮೊದಲು ಇವರ ಕೆಲಸ ಆಗಬೇಕು ಎಂದು ಲಂಚ ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಹೇಳುವುದರಲ್ಲಿ ಅರ್ಥವಿದೆ. ಯಾರಿಗೆ ಪುಲ್ ಇರುತ್ತದೆ ಅವರಿಗೆ ಕೆಲಸವಾಗುತ್ತದೆ. 2-3-4 ವರ್ಷದಿಂದ ಕಾಯುವವರು ಏನು ಮಾಡುತ್ತಾರೆ ಎಂದರೆ ಅವರದು ಆಯಿತು, ನನಗೆ ಏಕೆ ಆಗಲಿಲ್ಲ ಎಂದು ಕೇಳಿದರೆ ಏನಾದರೂ ನೋಡಿಕೊಳ್ಳಬೇಕಾಗಿದೆ ಎಂದು ಹೇಳುತ್ತಾರೆ. ಸಾಹೇಬರನ್ನು ನೋಡಿಕೊಂಡರೆ ಆಗುತ್ತದೆ ಎಂದು ಹೇಳುತ್ತಾರೆ. ಹೇಗೆ ನೋಡಿಕೊಳ್ಳಬೇಕು ಎಂದರೆ ತೆಂಗಿನಕಾಯಿ, ಬೆಲ್ಲ ಇಂಥವುಗಳನ್ನು ತೆಗೆದುಕೊಂಡು ಹೋಗಿ ಸರಿಯಾಗಿ ನೋಡಿಕೊಳ್ಳಬೇಕು ಎಂದು ಹೇಳುತ್ತಾರೆ.

12-00 NOON.

ಒಂದು ಸಂದರ್ಭದಲ್ಲಿ ಒಬ್ಬ ಪೋಲೀಸ್ ಸಬ್‌ಇನ್‌ಸ್ಪೆಕ್ಟರು 250 ರೂಪಾಯಿನಂತೆ ಎರಡು ಸಾರಿ 500 ರೂಪಾಯಿ ತೆಗೆದುಕೊಂಡು ಹೋಗಿ ವ್ಯವಹಾರ ನಡೆಸಿರುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ತಯಾರಿದ್ದೇನೆ. 3-4 ತಿಂಗಳ ಕಾಲ ಕಾಯಬೇಕಾಗಿದೆ. ಅನಂತರ ತಮ್ಮ ಅಧ್ಯಕ್ಷತೆಯಲ್ಲಿ, ಇದೇ ಮಂತ್ರಿಮಂಡಲಕ್ಕೆ ಹೇಳುತ್ತೇನೆ. ಈ ಸಂದರ್ಭವನ್ನು ಯೋಚನೆ ಮಾಡುವುದಾದರೆ ಯಾರೂ ಇಲ್ಲಿ ಬದುಕುವುದಕ್ಕಾಗುವುದಿಲ್ಲ. ಈ ಮಂತ್ರಿಮಂಡಲ ಹೋಗಿ ಲಕ್ಕಪ್ಪನವರು ಗೃಹ ಸಚಿವರಾಗಿ, ಎಸ್. ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿ ನಾನೇ ಕಾನೂನು ಮಂತ್ರಿಯಾಗಿ ಕುಳಿತರೂ ಲಂಚ ಎನ್ನುವುದನ್ನು ತಡೆಗಟ್ಟಲು ಸಾಧ್ಯವಾಗಲಾರದು. ಪಿ. ಎಸ್. ಪಿ. ಅಲ್ಲ, ಕಾಂಗ್ರೆಸ್ ಅಲ್ಲ ದೇವರೇ ಬಂದು ಕುಳಿತುಕೊಂಡರೂ ಸಾಧ್ಯವಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ದೇವಸ್ಥಾನಕ್ಕೆ ಹೋಗಿ ಮಂಗಳಾರತಿಗೆ ಕೈ ಹಚ್ಚಿ ನಾಲ್ಕಾಣೆ ಹಾಕುವ ಜನ ನಮ್ಮ ಕೆಲಸವನ್ನು ಮಾಡಿಕೊಳ್ಳಬೇಕು ಎಂದರೆ underhand dealingಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಅದಕ್ಕೋಸ್ಕರ ಬರೀ ರಾಜಕೀಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಒಂದೇ ಒಂದು ಪಕ್ಷವನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೀ ರಾಜಕೀಯದ ಆಸೆಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಗಮನ ಕೊಡದೆ ಈ ಸಮಾಜದಲ್ಲಿರತಕ್ಕ ಘಾತುಕ ಶಕ್ತಿಗಳನ್ನು, ಸಮಾಜ ಘಾತುಕರನ್ನು, ಸಮಾಜ ಕಂಟಕರನ್ನು ನಿರ್ಮೂಲ ಮಾಡಬೇಕಾಗಿದೆ. ಇದಕ್ಕೆ ನಾವೂ ನೀವೂ ಎಲ್ಲರೂ ಒಟ್ಟಿಗೆ ಕಲೆತು ಕೆಲಸ ಮಾಡಬೇಕಾಗಿದೆ. ಇವರನ್ನು ಅಧಿಕಾರದಿಂದ ಕೆಳಗೆ ಇಳಿಸುವುದು ಬೇರೆ. ಅಧಿಕಾರದಿಂದ ಕೆಳಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇಳಿಸಬೇಕಾದರೆ ಆ ಮಾರ್ಗ ಬೇರೆ. ಲಂಚಕೋರತನದ ವಿಷಯವೇ ಬೇರೆ. ಲಂಚವನ್ನು ಅವರ ಕಡೆಯವರು ಕೊಡುತ್ತಾರೆ, ಅವರ ಕಡೆಯವರು ತೆಗೆದುಕೊಳ್ಳುತ್ತಾರೆ ಎಂದು ಹೇಳುವುದಾದರೆ ದೇವರ ಮುಂದೆ ಅಪರಾಧ ಮಾಡುತ್ತಿದ್ದೇವೆ ಎಂದು ಹೇಳಬೇಕು. ಅದರಲ್ಲಿ ಎಲ್ಲರೂ ಸೇರುತ್ತೇವೆ ಎಂದು ಹೇಳಬೇಕಾಗುತ್ತದೆ. ಸಮಾಜದಲ್ಲಿ ಎರಡು ಕಡೆಯೂ ತಪ್ಪುಗಳಿವೆ. ಇದನ್ನು ಸರಿಪಡಿಸ ಬೇಕಾದರೆ ನಾವೂ ನೀವೂ ಕಲೆತು ಚರ್ಚೆ ಮಾಡಬೇಕಾಗಿದೆ. ಇದಕ್ಕೆ ಒಂದು ಕಮಿಟಿಯನ್ನು ನೇಮಕಮಾಡಿ ಹೇಗೆ ಪರಿಹಾರ ಮಾಡುವುದಕ್ಕೆ ಸಾಧ್ಯ ಎಂದು ಪರಿಹಾರ ಮಾರ್ಗವನ್ನು ಯೋಚಿಸೋಣ ಎಂದು ಈ ನಿರ್ಣಯವನ್ನು ಇವತ್ತು ಚರ್ಚೆಗೆ ತಂದಿದ್ದಾರೆ.

ಲಂಚನಿರೋಧ ಶಾಖೆಗೆ ಸಹಕಾರ ಕೊಡುವುದಿಲ್ಲ ಎಂದು ಮಾನ್ಯ ಅಪ್ಪಣ್ಣನವರು ಹೇಳಿದರು. ಆದರೆ ಅವರೇ ದುಡ್ಡು ತಿನ್ನುವುದಾದರೆ ಏನು ಮಾಡುವುದು ? ಒಬ್ಬ ತನ್ನ ಅಡಕೆ ತೋಟದಲ್ಲಿ ಕಾಯಿ ಕುಯ್ಯಲು ಹೋದರೆ ಬೇರೆಯವನು ಆ ತೋಟ ತನ್ನದು ಎಂದು ಪೋಲೀಸ್ ಸಬ್ ಇನ್‌ಸ್ಪೆಕ್ಟರಿಗೆ ದೂರು ಕೊಟ್ಟ. ಆ ಸಬ್ ಇನ್‌ಸ್ಪೆಕ್ಟರು 200 ರೂಪಾಯಿ ತೆಗೆದುಕೊಂಡು ಯಾರ ಸ್ವಾಧೀನದಲ್ಲಿ ಅಡಕೆ ತೋಟವಿಲ್ಲವೋ ಅವರಿಂದ ಅಡಕೆಯನ್ನು ಕುಯಿಸಿದರು. ಈ ವಿಚಾರದಲ್ಲಿ ಕಂಪ್ಲೇಂಟು ಕೊಟ್ಟಾರೆ ಎನ್‌ಕ್ವೈರಿ ಆಯಿತು. ಲಂಚನಿರೋಧ ಶಾಖೆಯಿಂದ ಡೆಪ್ಯುಟಿ ಸೂಪರಿಂಟೆಂಡೆಂಟರು ಮತ್ತು ಪೋಲೀಸು ಇನ್‌ಸ್ಪೆಕ್ಟರು ಇಬ್ಬರೂ ಹೋದರು. 400 ರೂಪಾಯಿ ಜೇಬಿಗೆ ಬಿಟ್ಟುಕೊಂಡು ವಾಪಸು ಬಂದು ಎಲ್ಲ ಸುಳ್ಳು ಎಂದು ಹೇಳಿದರು. ಇದು ಹೇಗೆ ಸ್ವಾಮಿ ? ನಾನು ಸರ್ಕಾರಕ್ಕೂ ಪತ್ರ ಬರೆದಿದ್ದೇನೆ. ಲಂಚ ನಿರ್ಮೂಲ ಮಾಡಬೇಕೆಂದು ಯಾವ ಲಂಚನಿರೋಧ ಶಾಖೆಯನ್ನು ಮಾಡಿದ್ದಾರೆಯೋ ಅವರೇ ಲಂಚ ತೆಗೆದುಕೊಂಡು ಒಪ್ಪಿಸುವ ರಿಪೋರ್ಟನ್ನು ಸರ್ಕಾರ ತಾನೂ ನಂಬಿಕೊಂಡು ಜನತೆಗೆ ಉತ್ತರ ಹೇಳಬೇಕಾಗುತ್ತದೆ. ಆದರೆ ಎಲ್ಲಿ ದ್ರೋಹ ನಡೆಯುತ್ತಿದೆ ಎನ್ನುವುದನ್ನು ಪತ್ತೆ ಹಚ್ಚಿ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ದ್ರೋಹ ಮಾಡುವ ಅಧಿಕಾರಿಗಳು ಅಧಿಕಾರದಲ್ಲಿರುವುದಕ್ಕೆ ಲಾಯಕ್ಕಲ್ಲ ; ಇವರನ್ನು ತೆಗೆಯಿರಿ ಎಂದು ಬರೆದು ಒಂದು ಒಂದೂವರೆ ವರ್ಷವಾಯಿತು. ಇನ್ನೂ ಏನೂ ಆಗಿಲ್ಲ. ಅಂದ ಮೇಲೆ ಲಂಚ ನಿರೋಧ ಶಾಖೆಯವರಿಗೆ ಯಾವ ರೀತಿ ಜನ ಸಹಕಾರ ಕೊಡಬೇಕು ? ಸರ್ಕಾರಕ್ಕೆ ಯಾರು ಬೇಕಾಗಿಲ್ಲ ಅವರ ಮೇಲೆ ಒಂದು ಕಂಪ್ಲೇಂಟ್ ತೆಗೆದುಕೊಂಡು ಅದಕ್ಕೆ ಬಣ್ಣ ಹಚ್ಚುತ್ತಾರೆ. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ ಸಾರ್ವಜನಿಕರು ಸರ್ಕಾರದ ಯಂತ್ರದ ಜೊತೆಗೆ ಸಹಕಾರ ಮಾಡಿದರೂ ಅದು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಪೂರ್ಣಗೊಳ್ಳುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಹೇಳಿದ್ದೇನೆ.

ನನ್ನ ಸ್ನೇಹಿತರಾದ ಲಕ್ಕಪ್ಪನವರು ಕೆಲವು ಸಹಕಾರ ಸಂಘಗಳ ವಿಚಾರವಾಗಿ ಹೇಳಿದರು. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಆಗಿಂದಾಗ್ಗೆ ಹೇಳಿದ್ದಾರೆ : ಸಹಕಾರ ಸಂಘಗಳಲ್ಲಿರತಕ್ಕ ಎಲ್ಲ ದುರ್ವ್ಯವಹಾರವನ್ನೂ ನಾನು ನಿರ್ಮೂಲ ಮಾಡದೆ ಹೋದರೆ ನಾನು ಇಲ್ಲಿ ಇರುವುದಕ್ಕೆ ತಯಾರಿಲ್ಲ, 92—93 ಕೋಟಿ ರೂಪಾಯಿಗಳನ್ನು ಸಹಕಾರ ಸಂಘಗಳಲ್ಲಿ ಹಾಕಿದ್ದೇವೆ, ಆದರ ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದು, ಆ ಹೊಣೆಯನ್ನು ಹೊತ್ತಿದ್ದೇವೆ ಎಂದು ಹೇಳಿದ್ದಾರೆ. ನಾನು ಒಂದು ವಿಚಾರವನ್ನು, ಈ ಸಭೆಯ ಗಮನಕ್ಕೆ ತರುತ್ತೇನೆ. ಅರಳೂರು ಸಹಕಾರ ಸಂಘದಲ್ಲಿ ಬತ್ತದ ಮೂಟೆಗಳು ಇಲ್ಲವಾದ ಪ್ರಸಂಗದಲ್ಲಿ ಅದಕ್ಕೆ ಸಂಬಂಧಪಟ್ಟವರ ಮೇಲೆ ಪ್ರಾಸಿಕ್ಯೂಷನ್ ಕ್ರಮ ಜರುಗಿಸಿದರು. ಲಂಚ ನಿರ್ಮೂಲ ಮಾಡಬೇಕು ಎಂದು ಹೇಳುವ ಸರ್ಕಾರ ಆ ಸೊಸೈಟಿಯ ಅಧ್ಯಕ್ಷರನ್ನು ಕಾಪಾಡಬೇಕು ಎಂದು ರಕ್ಷಣೆ ಕೊಟ್ಟರೆ, ಪ್ರಾಸಿಕ್ಯೂಷನ್ ಬೇಡ ಎಂದು ಆರ್ಡರ್ ಮಾಡಿದಿರಿ, ಹೀಗೆಲ್ಲ ಮಾಡಿದರೆ ಯಾರಿಗಾದರೂ ಭಯವಿರುತ್ತದೆಯೇ ಸ್ವಾಮಿ ? ಸೊಸೈಟಿಯಲ್ಲಿ ವ್ಯವಹಾರ ಮಾಡುವವರಿಗೆ ಕಿಂಚಿತ್ತಾದರೂ ಭಯವಿರುತ್ತದೆಯೇ ಸ್ವಾಮಿ ? ಇದನ್ನು ಸರ್ಕಾರ ಯೋಚನೆ ಮಾಡಬೇಕು. ಆ ಸೊಸೈಟಿಯಲ್ಲಿ ಹಣ ದುರುಪಯೋಗವಾಗಿದ್ದು, ಪ್ರಾಸಿಕ್ಯೂಷನ್ ಆಗಿ, ನಾಲ್ಕೈದು ಹಿಯರಿಂಗ್ ಆದ ಮೇಲೆ 15 ಸಾವಿರ ರೂಪಾಯಿ ಕೊಟ್ಟರೆ ಸಾಕು, ನಿಮ್ಮ ಮೇಲೆ ಕ್ರಮ ಜರುಗಿಸುವುದಿಲ್ಲ ಎಂದು ಹೇಳಿದಿರಲ್ಲ ಅದು ಹೇಗೆ ? ಸಹಕಾರ ಸಂಘಗಳು semi-Government business concerns ಅಲ್ಲವೇ ?

ಕೇಂದ್ರ ಉಣ್ಣೆ ಸಹಕಾರ ಸಂಘದಲ್ಲಿ ಖಾದಿ ಕಮಿಷನ್ ಮತ್ತು ಮೈಸೂರು ಸರ್ಕಾರ ಎರಡೂ ಹಣ ಹಾಕಿವೆ ; ಅಲ್ಲಿ ಒಬ್ಬ ಇಂಡಿವಿಜುಯಲ್ ಡೈರೆಕ್ಟರ ಹೆಸರಿನಲ್ಲಿ ಎರಡು ಲಕ್ಷ ಹದಿನೇಳು ಸಾವಿರ ರೂಪಾಯಿ ಮೂರು ವರ್ಷಗಳ ಕಾಲದಿಂದ ಸಸ್ಪೆನ್ಸ್ ಅಕೌಂಟಿನಲ್ಲಿದೆ. ಈತ ತಾನು ಚುನಾವಣೆಗೆ ನಿಲ್ಲಬೇಕೆಂದು ಮಕ್ಕಳು ಕಾಪಿ ಬರೆಯುವ ಎಕ್ಸರ್‌ಸೈಜ್ ಬುಕ್ಕಿನಲ್ಲಿ—ಅದಕ್ಕೆ ಸೊಸೈಟಿಯ ಸೀಲಿಲ್ಲ, ಮತ್ತೊಂದು ಮಗದೊಂದು ಯಾವುದೂ ಇಲ್ಲ, ಅದಕ್ಕೆ ಸರಿಯಾದ ನಂಬರು ಇಲ್ಲ ಯಾವುದೂ ಇಲ್ಲ.

ಅದಕ್ಕೆ ಹತ್ತು ನಯೇ ಪೈಸೆಗಳ ಸ್ಟಾಂಪ್ ಸಹಿತ ಇಲ್ಲ. ಅಂಥ ಪುಸ್ತಕದಲ್ಲಿ ಈ ಡಿಸ್ಟ್ರಿಕ್ಟಿಗೆ 25 ಸಾವಿರ, ಆ ಡಿಸ್ಟ್ರಿಕ್ಟಿಗೆ 40 ಸಾವಿರ, ಈ ಸೊಸೈಟಿಗೆ 30 ಸಾವಿರ, ಎಂದು ಹತ್ತು ರಸೀತಿಗಳನ್ನು 2,17,000 ಮೊತ್ತಕ್ಕೆ ಸರಿಹೊಂದುವಂತೆ ಬರೆದು ಅವರು ಸೆಂಟ್ರಲ್ ವುಲನ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಹೋಗಿ ಚುನಾವಣೆಯಲ್ಲಿ ಗೆದ್ದರು ಸಹಕಾರ ಸಂಘಗಳು ಭ್ರಷ್ಟಾಚಾರಕ್ಕೆ, ಹಣದ ದುರುಪಯೋಗಕ್ಕೆ ತೌರುಮನೆಯಾಗಿದೆ ಎನ್ನುವುದಕ್ಕೆ ಇದನ್ನೆಲ್ಲ ಹೇಳುತ್ತಿದ್ದೇವೆ. ಅದಕ್ಕೆ ಅರ್ಥ ಮಂತ್ರಿಗಳು ನಮಗೆ ಉತ್ತರ ಹೇಳಿದರು ನಾನು ಅದನ್ನು ಕೂಲಂಕಷವಾಗಿ ವಿಚಾರ ಮಾಡಿ ಸತ್ಯವನ್ನು ಬಯಲಿಗೆ ತರುತ್ತೇನೆ ಎಂದು. ಅದಕ್ಕೆ ಸಂಬಂಧಪಟ್ಟ 1960 ನೆಯ ಇಸವಿಯ ಆಡಿಟ್ ರಿಪೋರ್ಟ್ ನಮ್ಮ ಕೈಗೆ ಕೊಟರು. 1961, 1962 ರ ರಿಪೋರ್ಟನ್ನು ಕೊಟ್ಟಿಲ್ಲ. 2,17,000 ರೂಪಾಯಿ ಅನಾಮತ್ತು ಲೆಕ್ಕದಲ್ಲಿ ಇಟ್ಟಂಥ ಮನುಷ್ಯ ತಾನು ಮನೆ ಕೊಂಡುಕೊಂಡ, ಆಸ್ತಿ ಮಾಡಿಕೊಂಡ, ಬಾವಿ ತೆಗೆಸಿದ, ಒಬ್ಬ ಮಗನಿಗೆ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ 18–19 ಸಾವಿರ ರೂಪಾಯಿ ಖರ್ಚು ಮಾಡಿದ್ದಾನೆ. ಇದು ಭ್ರಷ್ಟಾಚಾರವಲ್ಲವೇ, ಇದು ಸಾರ್ವಜನಿಕ ಹಣದ ದುರಪಯೋಗವಲ್ಲವೇ ? ಇಂಥದ್ದನ್ನು ನಿಲ್ಲಿಸುವುದಕ್ಕೆ ಏನು ಮಾಡಿದ್ದೀರಿ ? ಆಡಿಟ್ ರಿಪೋರ್ಟಿನಲ್ಲಿ ದೋಷವಿದೆ ಎಂದು ಅದನ್ನು ತೆಗೆದು ಹಾಕುತ್ತೀರಾ ? ಸೆಂಟ್ರಲ್ ವುಲನ್ ಕೋ-ಆಪರೇಟಿವ್ ಸೊಸೈಟಿಯಲ್ಲಿರುವ ನವಾಬರು ಏನು ಮಾಡಿದ್ದಾರೆ, ಅಲ್ಲಿ ಏನು ನಡೆದಿದೆ ಎನ್ನುವುದನ್ನು ಪತ್ತೆ ಹಚ್ಚಿದ್ದೀರಾ ? ನನ್ನನ್ನು ಕರೆದು ಕೇಳಲಿ. ನಾನು ಇಲ್ಲಿ ಹೇಳಿರತಕ್ಕದ್ದರಲ್ಲಿ ಯಾವುದಾದರೂ ಒಂದು ಪದ ಸರಿಯಿಲ್ಲ ಎಂದರೆ ನಾನು ಋಜುವಾತು ಮಾಡಿಕೊಡುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದ ನಂತರ ಆಡಿಟ್ ರಿಪೋರ್ಟನ್ನು ತರಿಸಿ ಕೊಟ್ಟಿದ್ದೇನೆ. ಇನ್ನು ಏನಾದರೂ ಇದ್ದರೆ ಹೇಳಿ, ನೋಡಿ ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲಿರುವ ಸರ್ಕಾರದ ಹಣವನ್ನು, ಸಾರ್ವಜನಿಕರ ಹಣವನ್ನು ಆಲ್ ಇಂಡಿಯಾ ವುಲನ್ ಸಿಂಡಿಕೇಟ್ ಎನ್ನತಕ್ಕ ನಾಮಕಾವಸ್ತೆ ಸಂಸ್ಥೆಗೆ ಇದರ ಹಣವನ್ನು ಟ್ರಾನ್ಸ್‌ಫರ್ ಮಾಡಿ ತಮ್ಮ ಮನ ಬಂದಂತೆ ಖರ್ಚು ಮಾಡುತ್ತಿದ್ದಾರೆ. ಇವತ್ತು ಅದಕ್ಕೆ ಲೆಕ್ಕವಿಲ್ಲ, ಪತ್ರವಿಲ್ಲ. ಡೈರೆಕ್ಟರುಗಳು ಯಾರು, ಯಾವುದಕ್ಕೆ ಖರ್ಚಾಗಿದೆ, ಎಂದು ಮೀಟಿಂಗ್ ಆಯಿತು ಯಾವುದೂ ಇಲ್ಲ. ಇದಕ್ಕೆ ಏನು ಗಾರ್ಬ ಎಂದರೆ ಮಾನ್ಯ ಸ್ನೇಹಿತರಾದ ಲಕ್ಕಪ್ಪನವರು ಹೇಳಿದ ಹಾಗೆ ಬಿಳಿಯ ಶುಭ್ರವಾದ ಟೋಪಿ, ಬಿಳಿಯ ಜುಬ್ಬ, ತಾವು ಕಟ್ಟತಕ್ಕ ಜಯಪ್ರಕಾಶ ನಾರಾಯಣರ ಪಂಚೆ ಇವು ತಮಗೆ ರಕ್ಷಣೆ ಕೊಡುತ್ತವೆ. ತಾವು ಇತ್ತಕಡೆ ನೋಡದೆ ಹೋದರೂ ನಾವು ಈ ಕಡೆ ಯವರು ತಮ್ಮ ಮೇಲೆ ಏನು ಅಪವಾದಗಳನ್ನು ಹೊರಿಸುತ್ತೇವೆಯೋ ಅದರಲ್ಲಿ ಸತ್ಯವಿದೆ ಎಂದು ಒಪ್ಪಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ನಾವೂ ನೀವೂ ಈ ಸಭೆಗೆ ಮೊದಲ ಬಾರಿಗೆ ಚುನಾವಣೆಯಾಗಿ ಬಂದಾಗ ಶ್ರೀಮಾನ್ ಜತ್ತಿಯವರು ಈ ದೇಶದ ಮುಖ್ಯಮಂತ್ರಿಗಳಾಗಿದ್ದಾಗ ಒಂದು ಘಟನೆ ನಡೆಯಿತು. ಕೊಡಗಿನಲ್ಲಿ ಒಂದು ಸೊಸೈಟಿಯ ಸೆಕ್ರೆಟರಿ ನೇಣು ಹಾಕಿಕೊಂಡು ಪ್ರಾಣ ಬಿಟ್ಟ. ಆತ ಸೊಸೈಟಿಯ ಹಣವನ್ನು ಚುನಾವಣೆಗೋಸ್ಕರ ಖರ್ಚು ಮಾಡಿದ್ದ. ಚುನಾವಣೆಗೆ ಕೊಟ್ಟ ಹಣವೇನಾಯಿತು ಎಂದು ನಾನು ಪ್ರಶ್ನೆ ಕೇಳಿದರೆ ಇವತ್ತಿನವರೆಗೂ ಅದಕ್ಕೆ ಉತ್ತರವೇ ಬರಲಿಲ್ಲವೆಂದರೆ ಹೇಗೆ ಸ್ವಾಮಿ ?

ಏಕೆ ಹೇಳುತ್ತೇನೆ ಎಂದರೆ ಇದಕ್ಕೆ ಕೊನೆ ಇಲ್ಲ ಮೊದಲು ಇಲ್ಲ, ಬುಡ ಇಲ್ಲ ಇದು ಹೇಗೆ ಆಗುತ್ತಿದೆಯೋ ಪರಮಾತ್ಮನಿಗೇ ಗೊತ್ತು. ಭೂಮಿಯಲ್ಲಿ ಕಾಳು ಬಿತ್ತಿದ್ದರೆ ಒಂದು ಪೈರು ಕಾಣಬಹುದು. ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟತಕ್ಕ ಮಗುವನ್ನು ಮಕ್ಕಳು ಎಂದು ಹೇಳುತ್ತೇವೆ, ಆದರೆ ಈ ಲಂಚಾವತಾರ ಮಾತ್ರ ತಂದೆ ತಾಯಿಗಳಾಗಲಿ, ಬಂಧುಬಳಗವಾಗಲಿ ಯಾರಿಗೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲ. ಇದು ಬಿಳಿ ಟೋಪಿಗೆಯಿಂದ ಬಂದದ್ದು ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ, ಕರೀ ಟೋಪಿಗೆಯಿಂದ ಬಂದದ್ದೇ ಎಂಬುದನ್ನೂ ಸಹ ಹೇಳುವುದಕ್ಕೆ ತಯಾರಾಗಿಲ್ಲ, ಬಿಳಿ ಟೋಪಿಗೆ ಇದಕ್ಕೆ ರಕ್ಷಣೆಯಾಗಿರಬಹುದು, ಅದನ್ನುಪಯೋಗಿಸಿಕೊಂಡು ಹಣವನ್ನು ತಿಂದು ಹಾಕುವವರು ಆ ಕೆಲಸ ಮಾಡುವವರು ಎನ್ನತಕ್ಕ ಭಾವನೆ ಬಂದಿದೆ. ಯೋಜನೆಗೆ ತಕ್ಕ ಫಲ ಇಲ್ಲ, ಉತ್ಪನ್ನವಾಗಿಲ್ಲ ಎಂದರೆ ದೇಶದ ಮುಂದೆ ಅನೃತ ನುಡಿಯುತ್ತಾ ಇದ್ದೇವೆ, ಅಸತ್ಯ ನುಡಿಯುತ್ತಾ ಇದ್ದೇವೆ ಎಂದು ಅನಿಸುತ್ತದೆ. ಬಸವಣ್ಣನವರು ಬರೆದಿರುವ ಪುಸ್ತಕವನ್ನು ನೋಡಿದರೆ ಅವರು ಹಾಕಿರುವ ಹಾದಿಯನ್ನು ಹಿಡಿದಿದ್ದರೆ ನಮಗೆ ಕಲ್ಯಾಣವಾಗುತ್ತಾ ಇತ್ತು. ಆದರೆ ಆ ದಾರಿಯಲ್ಲಿ ಹೋಗಿಲ್ಲ ಆದ್ದರಿಂದ ಈ ಸೊಸೈಟಿಗಳಲ್ಲಿ ಏನಾಗಿದೆ ಎಂದರೆ ಈ 5 ವರ್ಷಗಳ ಕಾಲದಿಂದಲೂ ತುಮಕೂರು ಜಿಲ್ಲಾ ಕೇಂದ್ರ ಬ್ಯಾಂಕಿನಲ್ಲಿ ದುರ್ವ್ಯವಹಾರ ನಡೆಯುತ್ತಾ ಇದೆ, ಅಲ್ಲಿರತಕ್ಕ ಅಧ್ಯಕ್ಷ ತನ್ನದೇ ಆದ ಪ್ರಭುತ್ವವನ್ನು ಸ್ಥಾಪನೆ ಮಾಡಿಕೊಂಡು ತನ್ನದೇ ಆದ ಆಡಳಿತವನ್ನು ಇಟ್ಟುಕೊಂಡು ಇದ್ದಾರೆ. ಇದನ್ನು ತಲೆ ಹಾಕಿ ನೋಡಿ ಎಂದು ಹಿಂದಿನ ಮಂತ್ರಿ ಮಂಡಲಕ್ಕೂ ಈಗಿನ

(ಶ್ರೀ ಸಿ. ಜೆ ಮುಕ್ಕಣ್ಣಪ್ಪ)

ಮಂತ್ರಿಮಂಡಲಕ್ಕೂ ಎಷ್ಟೋ ಸಾರಿ ಹೇಳಿದ್ದೇನೆ, ಅಲ್ಲಿ ಒಂದು ಲಕ್ಷ ಹದಿನೇಳು ಸಾವಿರ ರೂಪಾಯಿಗಳು ಕಡಿಮೆಯಾಗಿದೆ. ಹತ್ತು ಸಾವಿರ ರೂಪಾಯಿಗಳ ಲೆಕ್ಕಾಚಾರಕ್ಕೆ ಮಾತ್ರ ಪೋಲೀಸ್‌ನವರು ಅವರನ್ನು ಹಿಡಿದುಕೊಂಡಿದ್ದಾರೆ. ಅಲ್ಲಿ ಏನಾಗಿದೆ ಎಂಬುದನ್ನು ತಿಳಿಯಬೇಕಾದರಂತೂ ಸಾಧ್ಯವೇ ಇಲ್ಲ ಲೆಕ್ಕಪತ್ರವನ್ನೆಲ್ಲಾ ಅಳಿಸಿ ಹಾಕಿದ್ದಾರೆ. ಲೆಕ್ಕ ಸಿಕ್ಕುವ ಹಾಗೆಯೇ ಇಲ್ಲ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ತಿಮ್ಮ ಎಂಬುವವನ ಹೆಸರಿನಲ್ಲಿ ಅವನಿಗೆ ಮನೆ ಇಲ್ಲ, ಮಠ ಇಲ್ಲ, ಆಸ್ತಿ ಇಲ್ಲ ಏನೂ ಇಲ್ಲ ಅವನಿಗೆ ಹಣ ಕೊಡಬಹುದು ಎಂದು ಕೇಂದ್ರ ಬ್ಯಾಂಕಿನ ಅಧ್ಯಕ್ಷರು ಬರೆದರು, ಅವನಿಗೆ ಹಣ ಕೊಟ್ಟಿದ್ದಾರೆ. ಇಂಥಾದ್ದು ಒಂದಲ್ಲ ಎರಡಲ್ಲ ಮೂರಲ್ಲ ನೂರಾರು ಇವೆ. ಇದು ಸರಿಯಲ್ಲ, ನ್ಯಾಯವಾದದ್ದಲ್ಲ ಎಂದು ಯುವಕ ಮಂತ್ರಿಗಳಿಗೆ ನಿವೇದನೆ ಮಾಡುತ್ತಾ ಇದ್ದೇನೆ. ಇದಕ್ಕೆ ಅವರು ಸ್ವಲ್ಪ ನಿಗಾ ಕೊಡಬೇಕು. ಅನೇಕ ಸಂಘಗಳಲ್ಲಿ ಈ ಭ್ರಷ್ಟಾಚಾರ ಪರಂಪರೆಯ ಮನೆತನವಾಗಿದೆ, ಸ್ವಜನ ಪಕ್ಷಪಾತಕ್ಕೆ ದಾರಿಯಾಗಿದೆ, ಇದು ನಿಜವಾಗಿಯೂ ಸರ್ಕಾರಕ್ಕೆ ಗೌರವ ತರತಕ್ಕದ್ದಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ಬಹಳ ವಿನಯದಿಂದ ಮತ್ತು ಬಹಳ ಗಂಭೀರವಾದ ಧ್ವನಿಯಲ್ಲಿ ಹೇಳುತ್ತಾ ಇದ್ದೇನೆ, ಹಣಕಾಸಿನ ಮಂತ್ರಿಗಳು ಪ್ರತ್ಯಕ್ಷವಾಗಿ ಇವತ್ತಿನ ದಿವಸ ತಮ್ಮ ಅನುಭವವದ ಮೇಲೆ ಅರ್ಥ ಮಾಡಿಕೊಂಡಿದ್ದಾರೆ—ಸರ್ಕಾರದವರು ಕೊಡತಕ್ಕ ಸಾಲ ಸೋಲಗಳು ಸರ್ಕಾರದವರು ಕೊಡತಕ್ಕ ಹಣ ಇವತ್ತು ಜನತೆಯನ್ನು ಸಾಲವೊಂದಿಗರಾಗತಕ್ಕ ಮಾರ್ಗಕ್ಕೆ ಎಳೆಯುತ್ತಾ ಇದೆ ಎಂದು ಅವರು ಅರ್ಥ ಮಾಡಿಕೊಂಡಿರುವುದು ನಿಜವಾಗಿಯೂ ಕೂಡ ಈ ನಮ್ಮ ದೇಶದ ಸುಕೃತವಾಗಿದೆ. ಆದ್ದರಿಂದ ಅವರು ಕೊಡತಕ್ಕ ಗ್ರಾಂಟು, ಸಬ್ಸಿಡಿ ಇವುಗಳನ್ನೆಲ್ಲಾ ನಿಲ್ಲಿಸಿದರೆ ನಾನು ತಿಳಿದಿದ್ದೇನೆ ಸುಮಾರು ಶೇಕಡ ಐದರಷ್ಟು ಲಂಚವನ್ನು ನಿಲ್ಲಿಸಿದಹಾಗಾಗುತ್ತದೆ. ರೂರಲ್ ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿ, ಸ್ಮಾಲ್‌ಸ್ಕೇಲ್ ಕೋ ಆಪರೇಟೀವ್ ಸೊಸೈಟಿ, ಮಲ್ಟಿಪರ್‌ಪಸ್ ಕೋ ಆಪರೇಟೀವ್ ಸೊಸೈಟಿ, ಕನ್‌ಸೂಮರ್ ಕೋ ಆಪರೇಟೀವ್ ಸೊಸೈಟಿ ಇವುಗಳನ್ನೆಲ್ಲಾ ನೋಡಿದ್ದೇ ಆದರೆ ಇವುಗಳು ಲಂಚದ ತವರು ಮನೆಯಾಗಿವೆ, ಇದಕ್ಕೆ ನೀವೆಲ್ಲಾ ಕುಳಿತು ಏನು ಮಾಡುತ್ತೀರಿ? ಇಂಥಾ ಕಡೆ ಇಂಥಾ ದುರ್‌ವ್ಯವಹಾರ ನಡೆದಿದೆ ಇದನ್ನು ಸರಿ ಮಾಡಿ ಎಂದು ನಿಮಗೆ ಹೇಳಬಹುದು ಆದರೆ ಅದರಿಂದ ಪ್ರಯೋಜನವಾದರೂ ಏನು? ಯಾರು ಕರ್ತವ್ಯಲೋಪ ಮಾಡುತ್ತಾರೋ ಅವರಿಗೆ ದಂಡನೆ ಮಾಡಿ ಇಲ್ಲದೇ ಹೋದರೆ ಏನೂ ಪ್ರಯೋಜನವಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಬಹಳ ಕಳಕಳಿಯಿಂದ ಹೇಳುತ್ತೇನೆ.

ಸ್ವಾಮಿ, ಲಂಚ ಮತ್ತು ಹಣ ದುರ್‌ವಿನಿಯೋಗವಾಗಿದೆ ಎಂಬ ಪ್ರಶ್ನೆ ಬಂದಾಗ ಶರಾವತಿ ಪ್ರಕರಣ ಬಂತು. ಹಣ ಅಡ್ವಾನ್ಸ್ ಮಾಡುವಾಗ ಯಾವ ನೀತಿ ಅನುಸರಿಸಿದರು ಲೈಸೆನ್ಸ್, ಗ್ರಾಂಟ್ ಮಾಡುವಾಗ (ಎ) ಕ್ಲಾಸ್ ಎಂದು ಹೇಳುವುದಕ್ಕೆ ಅವರಿಗೆ ಯಾವ ಯಾವ ಇನ್‌ಗ್ರಿಡಿಯಂಟ್ಸ್ ಇದ್ದವು, ಯಾವ ಯಾವ ಅರ್ಹತೆಗಳಿದ್ದವು ಎಂಬುದನ್ನು ಯಾವ ಆಧಾರದ ಮೇಲೆ ನಿರ್ಧರಿಸಿದಿರಿ, ಹಣ ಅಡ್ವಾನ್ಸ್ ಮಾಡುವಾಗ ಯಾವ ರೀತಿನೀತಿಯನ್ನು ಅನುಸರಿಸಿ ಅಡ್ವಾನ್ಸ್ ಮಾಡಿದಿರಿ, ಲಕ್ಷಾಂತರ ರೂಪಾಯಿಗಳು ರಾಜ್ಯದ ಬೊಕ್ಕಸದಿಂದ ಕೊಟ್ಟರಲ್ಲಾ ಅದರಲ್ಲಿ ಎಷ್ಟರಮಟ್ಟಿನ ಭ್ರಷ್ಟಾಚಾರ ನಡೆದಿದೆ, ಲಂಚಗೂಳಿತನ ನಡೆದಿದೆ, ಸ್ವಜನ ಪಕ್ಷಪಾತ ನಡೆದಿದೆ ಎಂದು ಕೇಳಿದರೆ ಯಾವುದೋ ಒಂದು ಮಾತು ಹೇಳಿ ಬಾಯಿ ಮುಚ್ಚಿಸುತ್ತೀರಿ. ನಾನಾದರೂ ಹೇಳುತ್ತೇನೆ ಸ್ವಾಮಿ ಕೇಂದ್ರ ಸರ್ಕಾರದವರು ಎಷ್ಟು ಜನರ ಮೇಲೆ ಎನ್‌ಕ್ವೈರಿ ಇನ್‌ಸ್ಟಿಟ್ಯೂಟ್ ಮಾಡಲಿಲ್ಲ, ನಿರಪರಾಧಿಗಳು ಎಂದು ಹೇಳಲಿಲ್ಲ? ಆ ರೀತಿ ಮಾಡಿ ಎಂದರೆ ಇವತ್ತಿನ ದಿವಸ ಹಿಂದು ಮುಂದು ನೋಡುತ್ತಾ ಇದ್ದೀರಿ, ಏಕೆಂದರೆ ಅಲ್ಲಿ ಏನೋ ನಡೆದಿರಬೇಕು, ಸ್ವಜನ ಪಕ್ಷಪಾತ ನಡೆದಿರಬೇಕು, ಲಂಚದ ಅವತಾರ ಆಗಿರಬೇಕು. ಸರ್ಕಾರದವರಿಗೆ ಧೈರ್ಯ ಇದ್ದರೆ ದೇಶದ ಜನತೆ ಶರಾವತಿ ವಿಷಯದಲ್ಲಿ ಲಂಚ ನಡೆದಿದೆ, ಭ್ರಷ್ಟಾಚಾರ ನಡೆದಿದೆ, ಸ್ವಜನ ಪಕ್ಷಪಾತ ನಡೆದಿದೆ ಎಂದು ಏನು ಹೇಳುತ್ತಾ ಇದ್ದಾರೆ ಅದರ ವಿಷಯದಲ್ಲಿ ಎನ್‌ಕ್ವೈರಿ ಮಾಡಿದ್ದೇ ಆದರೆ ಕಾಂಗ್ರೆಸ್ ಸರ್ಕಾರ ಪಕ್ಷಪಾತ ಮಾಡಿಲ್ಲ, ಜನತೆಯ ಮನೋಭಿಪ್ರಾಯಕ್ಕೆ ಮನ್ನಣೆ ಕೊಟ್ಟಿದೆ ಎಂದು ಜನತೆ ಇವತ್ತಿನ ದಿವಸ ಹೇಳುತ್ತದೆ. ಒಂದು ಉದಾಹರಣೆಯನ್ನು ಹೇಳುತ್ತೇನೆ ಭಾರತ ದೇಶದ ಉನ್ನತ ನ್ಯಾಯಾಧೀಶರಾಗಿದ್ದ ಜಸ್ಟೀಸ್ ಚಾಗ್ಲ ಅವರ ಅಧ್ಯಕ್ಷತೆಯಲ್ಲಿ ಒಂದು ಎನ್‌ಕ್ವೈರಿ ಕಮಿಟಿ ನೇಮಕವಾಗಿದ್ದು ಆ ಕೇಸಿನ ಸಂಬಂಧದಲ್ಲಿ ಒಳಗಾಗಿದ್ದವರನ್ನು ನಿರಪರಾಧಿಗಳು ಎಂದು ಹೇಳಿದರು. ಅದೇರೀತಿ ಪಂಜಾಬ್‌ನ ಮುಖ್ಯ ಮಂತ್ರಿಗಳ ಮೇಲೆ ಆಪಾದನೆಗಳು ಅದರ ವಿಚಾರಣೆಗಾಗಿ ಕೇಂದ್ರಸರ್ಕಾರದವರು ಇವತ್ತಿನ ದಿವಸ ಭಾರತದ ಉನ್ನತ ನ್ಯಾಯಾಸ್ಥಾನದ ನಿವೃತ್ತ ನ್ಯಾಯಾಧೀಶರಾದ ಶ್ರೀಮಾನ್ ದಾಸ್‌ರವನ್ನು ನೇಮಕ ಮಾಡಿದ್ದಾರೆ. ಅವರು ಅದರ ತನಿಖೆ ಮಾಡುತ್ತಾ ಇದ್ದಾರೆ, ಅವರು ಕೈರಾನ್ ಅವರ ವಿಷಯದಲ್ಲಿ ಅವರ ತನಿಖೆಯಲ್ಲಾ ಮುಗಿದ ಮೇಲೆ ಒಂದು ವೇಳೆ ಕೈರಾನ್‌ರವರು ನಿರಪರಾಧಿ ಎಂದು ಹೇಳಿದರೆ ದೇಶದ ಜನತೆ ಅದನ್ನು ಒಪ್ಪಿಕೊಳ್ಳು

ತ್ತದೆ. ಅವರ ಮೇಲೆ ಏನು ಅವಹೇಳನ ಮಾಡಿದ್ದಾರೆ, ಏನು ಭ್ರಷ್ಟಾಚಾರದ ಅಪಾದನೆ ಹೊರಿಸಿದ್ದಾರೆ ಅದರಲ್ಲಿ ಏನೂ ತಿರುಳಿಲ್ಲ ಎಂಬುದಕ್ಕೆ ನೀವೂ ಸಹಾ ಶರಾವತಿಯ ವಿಷಯದಲ್ಲಿ ಒಂದು ಜ್ಯೂಡಿಷಿಯಲ್ ಎನ್‌ಕ್ವೈರಿ ಮಾಡಿದ್ದೇ ಆದರೆ ಅದರಿಂದ ವಿಷಯಗಳು ಹೊರಬಂದು ಜನತೆಗೆ ಸಮಾಧಾನವಾಗುತ್ತದೆ ಎಂದು ಹೇಳಿ ಜ್ಯೂಡೀಷಿಯಲ್ ಎನ್‌ಕ್ವೈರಿ ಮಾಡಬೇಕೆಂಬುದನ್ನು ಮತ್ತೊಮ್ಮೆ ಪುಷ್ಟೀಕರಿಸುತ್ತಾ ಇದ್ದೇನೆ. ಆದ್ದರಿಂದ ತಾವು ಆ ರೀತಿಯ ಯಾವುದಾದರೊಂದು ಎನ್‌ಕ್ವೈರಿ ಮಾಡಿ ಜನತೆಯ ಮುಂದೆ ಇಡಬೇಕಾದ್ದು ತಮ್ಮ ಧರ್ಮ.

ಈ ಭ್ರಷ್ಟಾಚಾರಕ್ಕೆಲ್ಲ ನೀವೇ ಮೂಲ ಕಾರಣರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ತಾನೆ ಶ್ರೀ ಕೆ. ಲಕ್ಕಪ್ಪನವರು ಖಾದೀ ಬೋರ್ಡಿನಲ್ಲಿ ನಡೆಯಬಾರದ್ದು ನಡೆದಿದೆ ಎಂದು ಹೇಳಿದರು. ಸರ್ಕಾರದವರು ಅವರ ಮೂಗಿನ ನೇರಕ್ಕೆ ಬಾಯಿಗೆ ಬಂದುದನ್ನೇ ಹೇಳಿಬಿಡುತ್ತಾರೆ. ಅದು ಆಟನಮಸ್ ಬಾಡಿ ಆಡಿಟರು ಆಡಿಟ್ ಮಾಡುತ್ತಿದ್ದಾರೆ, ಅದನ್ನೆಲ್ಲಾ ಸರಿಪಡಿಸಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಸರ್ಕಾರದವರು ಅದರಲ್ಲಿ ಒಂದು ಕೋಟಿ ರೂಪಾಯಿ ಬಂಡವಾಳ ಹಾಕಿದ್ದಾರೆ. ಅಲ್ಲಿ ಈಗ ದೊಡ್ಡ ದುರಾಚಾರ ನಡೆದಿದೆ. ಅದನ್ನು ಕೂಡಲೆ ಸರಿಪಡಿಸತಕ್ಕದ್ದು ಸರ್ಕಾರದವರ ಕರ್ತವ್ಯವೋ, ಅದು ನಮ್ಮ ಕರ್ತವ್ಯವೋ? ನಾವು ಹೇಳತಕ್ಕದರಲ್ಲಿ ಸತ್ಯಾಂಶವಿದ್ದರೆ ಅದನ್ನು ವಿಮರ್ಶೆಮಾಡಿ, ನಾವು ಹೇಳುತ್ತಿರುವುದು ಸತ್ಯವೋ, ಅಥವಾ ಅಸತ್ಯವೋ ಅದನ್ನು ಸಾರ್ವಜನಿಕರ ಮುಂದೆ ಇಡಬೇಕಾದ್ದು ಸರ್ಕಾರದವರ ಕರ್ತವ್ಯ. ಅಲ್ಲಿ ಈಗ 4-6 ವರ್ಷಗಳಿಂದ ಲೆಕ್ಕಗಳನ್ನೇ ಸರಿಯಾಗಿಟ್ಟಿಲ್ಲ. ಇದಕ್ಕಿಂತ ಹಗಲು ದರೋಡೆ ಬೇಕೇ? ನಾನು ಇದಕ್ಕಿಂತಲೂ ಉಗ್ರವಾದ ಪದವನ್ನು ಉಪಯೋಗಿಸೋಣವೆಂದರೆ ಕನ್ನಡದಲ್ಲಿ ಪದಗಳಿಲ್ಲ. ಇಲ್ಲಿಗೆ 4 ವರ್ಷಗಳ ಮೇಲ್ಪಟ್ಟು ಸುಮಾರು 1 ಕೋಟಿ ರೂಪಾಯಿಗಳ ಆಡಳಿತ ನಡೆದಿರುವ ಕಡೆ ಲೆಕ್ಕಪತ್ರಗಳನ್ನೇ ಇಡದೆ, ಸುಮ್ಮನಿದ್ದು ಈಗ ಅವುಗಳನ್ನೆಲ್ಲಾ ಬರೆಸುತ್ತಿದ್ದೇವೆಂದರೆ ನಾವು ನಿಜವಾಗಿಯೂ ಮನುಷ್ಯ ಮಾತ್ರದವರೇ ಎಂದು ಕೇಳುತ್ತೇನೆ. ನಮ್ಮನ್ನು ಖಂಡಿತ ಮನುಷ್ಯರೆಂದು ಕರೆಯಬಾರದು. ಇಂಥ ದುರಾಡಳಿತಕ್ಕೆಲ್ಲ ಅವಕಾಶ ಕೊಡತಕ್ಕವರು ಯಾರು? ಇದಕ್ಕೆಲ್ಲಾ ಸಾರ್ವಜನಿಕರೂ, ನಾವೂ ಕಾರಣರಲ್ಲ. ಇದಕ್ಕೆ ಕಾರಣರು ಸಂಪೂರ್ಣವಾಗಿ ಸರ್ಕಾರದವರೇ. ಆಡಳಿತದಲ್ಲಿರತಕ್ಕವರು ಒಂದು ಪರಿಶುದ್ಧವಾದ ಜೀವನವನ್ನು ನಡೆಸಬೇಕು. ಸಾಧ್ಯವಿಲ್ಲದ ಪಕ್ಷಕ್ಕೆ ಅವರು ಕೂಡಲೇ ರಾಜೀನಾಮೆ ಕೊಟ್ಟು ಕೆಳಗಿಳಿಯಬೇಕು.

ಸ್ವಾಮಿ, ಈ ಖಾದೀ ಬೋರ್ಡು ಬೇಡಿ. ಇನ್ನು ಆ ಸೆಂಟ್ರಲ್ ಉಲ್ಲನ್ ಕೋ-ಅಪರೇಟೀವ್ ಸೊಸೈಟಿ ಬೇಡ, ಶರಾವತಿ ಬೇಡ, ಬಾಕಿ ಬ್ಯಾಂಕುಗಳ ವ್ಯವಹಾರ ಬೇಡ, ಈ ವಿಧಾನಸೌಧದ ಕೆಳಗೆ ನೇರವಾಗಿರತಕ್ಕ ಸರ್ಕಾರದ ಟ್ರೆಜರಿಯನ್ನು ತೆಗೆದುಕೊಳ್ಳೋಣ; ಇಲ್ಲಿ ಹಣ ಅಪಹರಿಸಲ್ಪಟ್ಟು ದುರಾಚಾರ ನಡೆದಿದೆ. ಹೀಗಿರುವಾಗ ಸರ್ಕಾರದವರು ಯಾವ ಧೈರ್ಯದಿಂದ ಲಂಚಾ ರುಷುವತ್ತುಗಳನ್ನು ನಿಲ್ಲಿಸುತ್ತೇವೆಂದು ಹೇಳುತ್ತಿದ್ದಾರೋ ನನಗೆ ಅದು ಗೊತ್ತಾಗುತ್ತಿಲ್ಲ. ಕೆಳಗಿರತಕ್ಕ ಹುಜೂರ್ ಟ್ರೆಜರಿಯಲ್ಲಿ ಸುಮಾರು ಒಂದುಲಕ್ಷ ರೂಪಾಯಿಗಳು ಅಪಹರಿಸಲ್ಪಟ್ಟಿದೆ. ಆಪಾದಿತನ ಮೇಲೆ ಕೇಸು ಹಾಕಿದ್ದರು. ಅದು ಕೋರ್ಟಿನಲ್ಲಿ ವಜಾ ಆಯಿತು. ಈಗ ಆ ಒಂದುಲಕ್ಷ ರೂಪಾಯಿಗಳ ಗತಿ ಏನಾಯಿತು? ಇದನ್ನು ಸರ್ಕಾರದವರು ಈಗ ಹೇಗೆ ನೆಟ್ಟಗೆ ಮಾಡುತ್ತಾರೆ?

ಇನ್ನು ಸ್ವಜನ ಪಕ್ಷಪಾತದ ವಿಚಾರಕ್ಕೆ ಬಂದರೆ ಕೇಳುವ ಹಾಗೇ ಇಲ್ಲ. ಕ್ಷತ್ರಿಯನನ್ನು ಮುಂದಕ್ಕೆ ತರಬೇಕೆಂದು ಕ್ಷತ್ರಿಯ, ಬ್ರಾಹ್ಮಣನನ್ನು ಮುಂದಕ್ಕೆ ತರಲು ಬ್ರಾಹ್ಮಣ, ವೈಶ್ಯನನ್ನು ಮುಂದಕ್ಕೆ ತರಲು ವೈಶ್ಯ, ಲಿಂಗಾಯಿತರನ್ನು ಮುಂದಕ್ಕೆ ತರಲು ಲಿಂಗಾಯಿತರು, ಒಕ್ಕಲಿಗರನ್ನು ಮುಂದಕ್ಕೆ ತರಲು ಒಕ್ಕಲಿಗರೂ ಪ್ರಯತ್ನ ಮಾಡುತ್ತಿದ್ದಾರೆ. ಸ್ವಾಮಿ, ನಾನು ಈ ವಿಚಾರವನ್ನು ಏಕೆ ಹೇಳಿದೆನೆಂದರೆ ಒಂದು ಕೋಮಿನವರು ಅವರ ಒಂದು ಕೋಮಿಗೆ ಮಾತ್ರ ರಕ್ಷಣೆಯನ್ನು ಕೊಡುತ್ತಿದ್ದಾರೆ ಎಂಬ ಮಾತು ಎಲ್ಲೆಲ್ಲಿಯೂ ಜನಜನಿತವಾಗಿದೆ. ಆದುದರಿಂದ ಇದು ಸ್ವಜನ ಪಕ್ಷಪಾತವಾಗುವುದಿಲ್ಲವೇ ಎಂಬುದನ್ನು ತಿಳಿಸಲು ನಾನು ತಮಗೆ ಈ ವಿಚಾರವನ್ನು ಹೇಳುತ್ತಿದ್ದೆನು. ಹೀಗಿದ್ದರೂ ಮಂತ್ರಿಗಳೂ ನಾವು ಜಾತ್ಯಾತೀತ ರಾಷ್ಟ್ರವನ್ನು ಕಟ್ಟುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತ ಹೀಗೆ ಮಾಡುತ್ತಿದ್ದರೆ ನಾವು ಜಾತ್ಯಾತೀತ ರಾಜ್ಯವನ್ನು ಕಟ್ಟುವುದು ಯಾವಾಗ? ಇಂಥ ರಾಜ್ಯ ಕಟ್ಟಲು ನಾವು ಜನರನ್ನು ಎಲ್ಲಿಂದ ತರಬೇಕು? ಈ ಪ್ರಬಲವಾಗಿರತಕ್ಕ ಕಾಂಗ್ರೆಸ್ ಪಕ್ಷವನ್ನು ನಾವು ಅವಿಶ್ವಾಸ ನಿರ್ಣಯ ತರುತ್ತೇವೆ ಎಂದು ಹೆದರಿಸತಕ್ಕ ಶಕ್ತಿ ಈ ಕಡೆ ಇರತಕ್ಕ 70 ಜನರಲ್ಲಿ ಯಾರಿಗೂ ಇರುವುದಿಲ್ಲ. ಆದುದರಿಂದ ಅತ್ತಕಡೆಯವರೇ ಈ ಸ್ವಜನ ಪಕ್ಷಪಾತಕ್ಕೆ ನಾಂದಿಯನ್ನು ಹಾಕತಕ್ಕವರು. ಆದರೆ ಇದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಅತ್ತಕಡೆ ಪಾರ್ಟಿಯಲ್ಲಾದರೋ ಎರಡು ಮೂರು ಜನ ಸೇರಿದರೆ ಮಂತ್ರಿಗಳನ್ನು ಹೆದರಿಸಿ ಅವರ ಕಾರ್ಯಸಾಧನೆ ಮಾಡಿಕೊಳ್ಳುವ ಅವಕಾಶವಿದೆ. ಮಂತ್ರಿಗಳು ಅತ್ತಕಡೆ ಪಾರ್ಟಿಯ ಜನಗಳಿಗೆ ಹೆದರಿದಂತೆ ನಮ್ಮ ಕಡೇ ಜನಗಳಿಗೆ ಅವರು ಹೆದರುವುದಿಲ್ಲ. ಆದುದರಿಂದ ಇವರು ಭ್ರಷ್ಟಾಚಾರಕ್ಕೆ ಇಳಿಯಬೇಕಾಗಿದ್ದರೆ ಅವರ ಪಾರ್ಟಿಯ ಜನಗಳು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕಾರಣರೇ ವಿನಾ ಅದಕ್ಕೆ ನಾವು ಕಾರಣರಲ್ಲ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಈ ದುರಾಚಾರಗಳನ್ನು ತಪ್ಪಿಸಬೇಕೆಂಬ ಇಷ್ಟ ಇದ್ದರೆ ಅವರು ಅವರ ಪಾರ್ಟಿಯಲ್ಲಿ ಅವಿಶ್ವಾಸ ನಿರ್ಣಯ ತಂದು ಇಂಥ ದುರಾಚಾರಗಳನ್ನೆಲ್ಲಾ ತಡೆಗಟ್ಟಬಹುದು. ಆದರೆ ಅದು ಅವರಿಗೆ ಬೇಕಾಗಿಲ್ಲ. ಹೀಗಿದ್ದರೂ ಶ್ರೀಮಾನ್ ಅಪ್ಪಣ್ಣನವರು ಈ ಸ್ವಜನ ಪಕ್ಷಪಾತ ಇತ್ಯಾದಿ ದುರಾಚಾರಗಳನ್ನು ತಡೆಗಟ್ಟಲು ನಮ್ಮ ಜವಾಬ್ದಾರಿಯೂ ಇದೆ ಎಂದು ಹೇಳಿದ್ದು ಬುಡವಿಲ್ಲದ ವಾದ ಅದು. ಯಾವುದೋ ಒಂದು ತಹಸೀಲ್ದಾರರ ಕೇಸನ್ನು ಹೇಳಿದರು. ಅಂಥ ಅನ್ಯಾಯಗಳಿಗೆ ನ್ಯಾಯಾಸ್ಥಾನಗಳಿವೆ. ನೊಂದವರು ಕೋರ್ಟಿಗೆ ಹೋಗುತ್ತಾರೆ. ಆದರೆ ಅದಕ್ಕೆ ಬದಲಾಗಿ ಈ ಚುನಾವಣೆಗಳಲ್ಲಿ ಸೋತು ಹೋಗಿ ಅನಾಥೋ ದೈವರಕ್ಷಾ ಎಂದು ಹೇಳಿ, ಏನು ಶ್ರೀಮಾನ್ ಜತ್ತಿಯವರೇ ನೀವೊಬ್ಬರೇ ಚುನಾವಣೆಯಲ್ಲಿ ನಮ್ಮ ಕಡೆಯ ಪಕ್ಷದಿಂದ ಗೆದ್ದು ಬಂದಿದ್ದೀರಿ ; ಆದುದರಿಂದ ಈ ಹಿಂದೆ ನೀವು ಚುನಾವಣಾ ಕಾಲದಲ್ಲಿ ವಾಗ್ದಾನ ಮಾಡಿದ್ದಂತೆ ಯಾರಿಗೆ ಮುನಿಸಿಫ್ ಕೆಲಸ ಕೊಡುತ್ತೇವೆಂದು ಹೇಳಿದ್ದಿರಿ ; ಯಾರಿಗೆ ಪ್ರಾಸಿಕ್ಯೂಟರ್ ಕೆಲಸ ಕೊಡುವುದಾಗಿ ಹೇಳಿದ್ದಿರಿ, ಯಾರಿಗೆ ಪ್ರ್ಯಾಕ್ಟೀಸ್ ಆರ್ಚಡಿನಲ್ಲಿ ಸೈಟನ್ನು ಕೊಡಿಸುವುದಾಗಿ ಹೇಳಿದ್ದಿರಿ ಅದರಂತೆ ನೀವೀಗ ಇದನ್ನೆಲ್ಲಾ ಮಾಡಿದರೆ ಸರಿ ಇಲ್ಲದಿದ್ದರೆ ನಿಮಗೆ ನಾವು ಶಾಪಾ ಕೊಡುತ್ತೇವೆ ಎಂದು ಕೇಳತಕ್ಕವರಿಗೆಲ್ಲಾ ಇವರೇನು ಮಾಡಬೇಕು ಈಗ ? ಆದಕ್ಕಾಗೇ ಆ ಪಿ.ಎಸ್.ಸಿ. ಅವರು 33 ಜನ ಆರಿಸಿದ್ದ ಮುನಿಸಿಫರ ಪಟ್ಟಿಯನ್ನು ಏಕಾಏಕಿ 66 ಜನಕ್ಕೇರಿಸಿದರು.

ಶ್ರೀ ಬಿ. ಡಿ. ಜತ್ತಿ.—ಆ ವಿಚಾರವಿನ್ನೂ ತೀರ್ಮಾನವೇ ಆಗಿಲ್ಲ. ಅದಿನ್ನೂ ಸುಪ್ರೀಂ ಕೋರ್ಟಿನ ಮುಂದೆ ಹಾಗೇ ಇದೆ.

Mr. DEPUTY SPEAKER.—The House will now rise and reassemble at 1-00 P.M. on Monday.

The House adjourned at Thirty Minutes past Twelve of the Clock to meet again at One of the Clock on Monday, the 9th December 1963.

WD 1781—GPB—900—23-1-64